ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

16 ಡಿಸೆಂಬರ್ 2015 ಪುಟ 20 ರೂ. 15/-



ಮಗಳೊಂದಿಗೆ ಹುಟ್ಟಿದ ಸಮಾಜಮುಖಿ ಕನಸು



ಕೆಂಪೇಗೌಡರನ್ನು ಕೊಂದವರು ಯಾರು?




ಸುಳ್ಳುಗಾರ ಸಂಪತ್ತನಿಗೆ ಉತ್ತರ





ವೆಂಕಟ್ ಸ್ಥಿತಿಗೆ ಯಾರು ಹೊಣೆ?

ತೊಗರಿಬೇಳೆ ಬೆಲೆ ಏರಿಕೆಗೆ ಮೋದಿ ಕಾರ ಎಂಬುದು ಕೇವಲ ಅನುಮಾನವ



ಬಹಳ ಹಿಂದೆ ದೆಹಲಿಯಲ್ಲಿ ಸುಷ್ಮಾ ಸ್ವರಾಜ್ ಮುಖ್ಯಮಂತ್ರಿಯಾಗಿದ್ದಾಗ ಈರುಳ್ಳಿಯ ಬೆಲೆ ವಿಪರೀತ ಏರಿಕೆಯಾದ್ದರಿಂದ ಜನಸಾಮಾನ್ಯರು ಸಿಟ್ಟಿಗೆದ್ದಿದ್ದರು. ಆ ಚುನಾವಣೆಯಲ್ಲಿ ಬಿಜೆಪಿ ಸೋತಿತು. ಬೆಲೆ ಏರಿಕೆ ಆಗಾಗ್ಗೆ ಚುನಾವಣೆಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನರಿತೇ, ಆ ನಂತರದಲ್ಲಿ ಬೆಲೆ ಏರಿಕೆಗೆ ಕಾಂಗ್ರೆಸ್ ಕಾರಣ, ಬಿಜೆಪಿಯೊಂದೇ ಪರಿಹಾರ ಎಂದು ಬಿಜೆಪಿ ಹೇಳಲಾರಂಭಿಸಿತು. ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲೂ ಅದೊಂದು ಘೋಷಣೆಯಾಗಿತ್ತು, ಅದಕ್ಕಿಂತ ಹೆಚ್ಚಾಗಿ ಬೆಲೆ ಏರಿಕೆಯ ಸ್ಲೋಗನ್ ಬಳಕೆಯಾಗಿದ್ದು ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ, ಕಪ್ಪು ಹಣ ತರುತ್ತೇವೆ ಎಂದು ಹೇಳಿದಷ್ಟೇ ವ್ಯಾಪಕವಾಗಿ ಬಿಜೆಪಿಯು ಬೆಲೆ ಏರಿಕೆಯನ್ನೂ ಬಳಸಿತ್ತು.

ಇದೀಗ ಅವರ ಸರದಿ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ವಿಪರೀತ ಇಳಿಕೆಯಾದರೂ, ಆ ಲಾಭವನ್ನು ಸಾಮಾನ್ಯ ಗ್ರಾಹಕರಿಗೆ ಮೋದಿ ಸರ್ಕಾರ ನೀಡಲಿಲ್ಲ, ಅಲ್ಪಸ್ವಲ್ಪ ಕಡಿಮೆಯಾದದ್ದೇ ತಮ್ಮ ಸಾಧನೆ ಎಂದು ಕೊಚ್ಚಿಕೊಂಡರಾದರೂ, ತಾವು ಈ ವಿಚಾರದಲ್ಲಿ ಯುಪಿಎ ಸರ್ಕಾರಕ್ಕಿಂತ ದುಬಾರಿಯಾಗಿದ್ದೇವೆ ಎಂಬುದು ದೊಡ್ಡ ಸುದ್ದಿಯಾಗದಂತೆ ನೋಡಿಕೊಂಡರು. ಕಾಂಗ್ರೆಸ್‌ಗೆ ತನ್ನ ಸಾಧನೆಯನ್ನು ಹೇಳಿಕೊಳ್ಳುವುದೂ ಗೊತ್ತಿಲ್ಲ; ತನ್ನ ವಿರೋಧಿಗಳ ವೈಫಲ್ಯವನ್ನು ಪ್ರಚಾರಕ್ಕೆ ತರುವುದೂ ಗೊತ್ತಿಲ್ಲವಾದ್ದರಿಂದ, ಈ ಸಂಗತಿ ಇನ್ನೂ ದೇಶದ ಜನಸಾಮಾನ್ಯರಿಗೆ ಎಷ್ಟು ಗೊತ್ತಾಗಬೇಕೋ ಅಷ್ಟು ಗೊತ್ತಾಗಿಲ್ಲ, ಹೀಗಿರುವಾಗ ಬೇಳೆಕಾಳುಗಳ ಬೆಲೆ ಗಗನಕ್ಕೇರಿದ್ದೂ ನಡೆದಿದೆ. ಅದರಲ್ಲೂ ತೊಗರಿಬೇಳೆಯ ಬೆಲೆಯು ಕೆ.ಜಿ.ಗೆ 200 ರೂ.ಗಳಿಗೆ ಏರಿದೆ.


ಇದಕ್ಕೆ ಏನು ಕಾರಣ? ಕಾರಣವೇನೇ ಇದ್ದರೂ, ಅದನ್ನು ಕಡಿಮೆ ಮಾಡುವುದು ಸರ್ಕಾರದ್ದೇ ಜವಾಬ್ದಾರಿ ತಾನೇ? ಅದನ್ನೇ ತಾನೇ ಮೋದಿ ಸಾಹೇಬರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿದ್ದು. ಹಾಗಿದ್ದ ಮೇಲೆ ಈಗೇಕೆ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿಡಲು ಆಗಿಲ್ಲ, ಏಕೆಂದರೆ, ಬೆಲೆ ಏರಿಕೆಗೆ ಅವರೇ ಕಾರಣರಾಗಿದ್ದಾರೆ!!

ಕೆಲದಿನಗಳ ಹಿಂದೆ ವಾಟ್ಸಾಪ್‌ನಲ್ಲಿ ಅಂತಹದ್ದೊಂದು ಸಂದೇಶ ಓಡಾಡಿತು. ಅದರಲ್ಲಿ ಅದಾನಿ ಗ್ರೂಪ್‌ನವರೇ ಈ ಬೆಲೆ ಏರಿಕೆಗೆ ಕಾರಣ ಎಂದಿತ್ತು, ಹೇಗೆ ಎಂಬುದರ ಕುರಿತು ಅಷ್ಟು ವಿವರಗಳು ಅದರಲ್ಲಿ ಇರಲಿಲ್ಲ, ಮೋದಿ ವಿರೋಧಿಗಳು ಅದನ್ನು ಸೃಷ್ಟಿಸಿ ಕಳಿಸಿರಬಹುದು ಎಂದುಕೊಂಡು ಸುಮ್ಮನಾದರು. ಅದಾದ ಕೆಲವು ದಿನಗಳ ನಂತರ ಇಂಗ್ಲಿಷ್ ಟಿವಿ ವಾಹಿನಿ ಇಂಡಿಯಾ ಟುಡೇ ಒಂದು ಕಾರ್ಯಕ್ರಮ ಪ್ರಸಾರ ಮಾಡಿತು. ದೇಶದ ಅತಿ ದೊಡ್ಡ ಬೇಳೆಕಾಳುಗಳ ಹಗರಣ ಎಂದು ಕರೆದು, 1 ಗಂಟೆ ಕಾಲ ನಡೆಸಿದ ಆ ಕಾರ್ಯಕ್ರಮವು ಈ ಹಗರಣ ಹೇಗೆ ನಡೆಯಿತು ಎಂಬುದನ್ನು ವಿವರಿಸಿತು. ಆದರೆ ಯಾರು ನಡೆಸಿದರು ಎಂಬುದರ ಬಗ್ಗೆ ಹೇಳಲಿಲ್ಲ.

ಆ ಕಾರ್ಯಕ್ರಮದಲ್ಲಿ ಹೇಳಿದ ಪ್ರಕಾರ, ದೇಶದಲ್ಲಿ ಬೇಳೆಯ ಉತ್ಪಾದನೆಯು ಹಿಂದಿನ ವರ್ಷಕ್ಕಿಂತ ಶೇ.12ರಷ್ಟು ಮಾತ್ರ ಕಡಿಮೆಯಾಗಿದೆ. 2013-14ರಲ್ಲಿ 3.17 ಮಿಲಿಯನ್ ಟನ್‌ಗಳಷ್ಟು ಬೇಳೆಯ ಉತ್ಪಾದನೆಯಾಗಿದ್ದರೆ, 2014-15ರಲ್ಲಿ 2.75 ಮಿಲಿಯನ್ ಟನ್‌ಗಳಷ್ಟು ಉತ್ಪಾದನೆಯಾಗಿದೆ. ಆಮದಿನ ಬಗ್ಗೆ ಎರಡು ಅಭಿಪ್ರಾಯಗಳಿವೆ. ಆಮದು ಹೆಚ್ಚಾಗಿದೆ ಎಂಬುದು ಒಂದು ಅಭಿಪ್ರಾಯ. ಆ ರೀತಿ ಹೆಚ್ಚಾಗಿದ್ದಲ್ಲಿ, ಇಲ್ಲಿ ಮಾರಾಟವಾಗುವ ದರ ಹೆಚ್ಚಾಗಬಾರದಾಗಿತ್ತು, ಇರಲಿ, ಅಧಿಕೃತವಾಗಿ ಸರ್ಕಾರ ಹೇಳುತ್ತಿರುವುದು ಆಮದೂ ಸಹ ಕಡಿಮೆಯಾಗಿದೆಯೆಂದು. ಆದರೆ ಇದರಲ್ಲಿ ಅಂತಹ ಹೆಚ್ಚೇನೂ ವ್ಯತ್ಯಾಸವಾಗಿಲ್ಲ, 2013-14ರಲ್ಲಿ 4.64 ಮಿಲಿಯನ್ ಟನ್‌ಗಳಷ್ಟು ಆಮದಾಗಿದ್ದರೆ, 2014-15ರಲ್ಲಿ 4.50 ಮಿಲಿಯನ್ ಟನ್‌ಗಳಷ್ಟು ಆಮದಾಗಿದೆ.

ಇದಕ್ಕಿಂತ ಪ್ರಮುಖವಾದ ಇನ್ನೊಂದು ಸಂಗತಿಯಿದೆ. ಅದೇನೆಂದರೆ, ಆಮದಾಗಿರುವ ದರದ್ದು, 2013-14ರಲ್ಲಿ ಆಮದು ದರ ಕ್ವಿಂಟಾಲ್‌ಗೆ 5000 ರೂ.ಗಳಾಗಿದ್ದರೆ, 2014-15ರಲ್ಲಿ ಕ್ವಿಂಟಾಲ್‌ಗೆ 5700 ರೂ.ಗಳಾಗಿತ್ತು, ಜೊತೆಗೆ ದೇಶದೊಳಗೆ ಸಗಟು ದರವು 2013-14ರಲ್ಲಿ ಕ್ವಿಂಟಾಲ್‌ಗೆ 5,300 ರೂ.ಗಳಿದ್ದರೆ, 2014-15ರಲ್ಲಿ ಕ್ವಿಂಟಾಲ್‌ಗೆ 5,700 ರೂ.ಗಳಾಗಿತ್ತು, ಅಂದರೆ, ಈ ವರ್ಷ ದೇಶದೊಳಗಿನ ರೈತರಿಗಾಗಲೀ ಅಥವಾ ವಿದೇಶಗಳ (ಮುಖ್ಯವಾಗಿ ಬರ್ಮಾ, ಆಸ್ಟ್ರೇಲಿಯಾ, ಕೆನಡಾ ಮತ್ತು ಆಫ್ರಿಕಾದ ದೇಶಗಳು) ರೈತರಿಗಾಗಲೀ ದೊಡ್ಡ ಪ್ರಮಾಣದಲ್ಲಿ ಹಣ ಸಿಕ್ಕಿಲ್ಲ, ರೈತರಿಗೆ ಸಿಕ್ಕಿರುವುದು ಕೇವಲ ಶೇ.7ರಷ್ಟು ಹೆಚ್ಚು ಮಾತ್ರ. ಆದರೆ, ಗ್ರಾಹಕರಿಗೆ? ಶೇ.300 ರಷ್ಟು ಹೆಚ್ಚಳ. 2013-14ರಲ್ಲಿ 60ರಿಂದ 85 ರೂ.ಗಳಿಗೆ ಒಂದು ಕಿಲೋ ಆಗಿದ್ದರೆ, ಈ ವರ್ಷ ಅದು 200 ರೂ.ಗಳಿಗೆ ಒಂದು ಕಿಲೋ ಆಗಿತ್ತು!!


ಅಂದರೆ, ಮಧ್ಯವರ್ತಿಗಳು ಯಾರೋ ಭಾರೀ ಪ್ರಮಾಣದಲ್ಲಿ ಹಣ ಮಾಡಿಕೊಂಡಿದ್ದಾರೆ. ಅದರ ಪರಿಣಾಮವನ್ನು ದೇಶದ ಎಲ್ಲಾ ಗ್ರಾಹಕರೂ ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ಇಂಡಿಯಾ ಟುಡೇ ಚಾನೆಲ್ ಕೆಲವು ಅಂಶಗಳನ್ನು ಹೇಳಿತು. ಅದೇನೆಂದರೆ, ಈ ವರ್ಷ ಉತ್ಪಾದನೆಯಲ್ಲಿ ಸ್ವಲ್ಪ ಕಡಿಮೆ ಆಗಬಹುದು ಎಂದು ಗೊತ್ತಾದ ಕೂಡಲೇ (ಈ ರೀತಿ ಗೊತ್ತು ಮಾಡಿಕೊಡುವ ಒಂದು ಜಾಲವಿದೆ), ತೊಗರಿಬೇಳೆಯನ್ನು ಸ್ಟಾಕ್ ಮಾಡಿ ಇಡುವುದು ಆರಂಭವಾಯಿತು. ಅಷ್ಟೇ ಅಲ್ಲದೇ, ವಿದೇಶದಿಂದ ಬರಬೇಕಾದ ಬೇಳೆಯು ನಿಧಾನವಾಗಿ ಬರುವಂತೆ ಏರ್ಪಾಡು ಮಾಡಿಕೊಳ್ಳಲಾಯಿತು. ಬಂದ ಬೇಳೆಯನ್ನು ಬಂದರುಗಳ ಸಮೀಪದ ಗೋದಾಮುಗಳಲ್ಲೇ ಭಾರೀ ದೊಡ್ಡ ಪ್ರಮಾಣದಲ್ಲಿ



ಸಂಗ್ರಹಿಸಿಡಲಾಯಿತು. ಇವೆಲ್ಲದರಿಂದ ಕೃತಕ ಅಭಾವ ಸೃಷ್ಟಿಯಾಯಿತು. ಬೆಲೆ ವಿಪರೀತ ಏರಿದ ಮೇಲೆ, ವಿಪರೀತ ಏರಿದ ಬೆಲೆಗೆ ಮಾರಿಕೊಂಡು ಹಣ ಮಾಡಿಕೊಂಡರು. ಈ ತರ್ಕ ಹಾಗೂ ಟಿವಿಯಲ್ಲಿ ವಿವಿಧ ವ್ಯಾಪಾರಿಗಳ ಹೇಳಿಕೆಗಳು, ಕುಟುಕು ಕಾರ್ಯಾಚರಣೆಯಲ್ಲಿ ಬಾಯ್ಬಿಟ್ಟ ವರ್ತಕರ ಮಾಹಿತಿ ಎಲ್ಲವೂ ಒಂದಕ್ಕೊಂದು ಹೊಂದಿಕೊಳ್ಳುತ್ತದೆ.

ಆದರೆ, ವಿದೇಶದಿಂದ ಬರಬೇಕಾದ ಬೇಳೆಯನ್ನು ನಿಧಾನ ಮಾಡಿಸಿದವರು ಯಾರು? ಬಂದರುಗಳಲ್ಲಿ ಸ್ಟಾಕ್ ಮಾಡಿಸಿಟ್ಟವರು ಯಾರು? ಎಂಬುದರ ಬಗ್ಗೆ ಆ ಟಿವಿ ವಾಹಿನಿಯು ಒಂದು ಮಾತೂ ಹೇಳಲಿಲ್ಲ!! ಹಾಗಿದ್ದ ಮೇಲೆ ಅದರಲ್ಲಿ ಯಾರೋ ಭಾರೀ ದೊಡ್ಡವರೇ ಇರಬೇಕು ಎಂಬುದು ಸ್ಪಷ್ಟ. ನಮ್ಮ ಪತ್ರಿಕಾ 'ಉದ್ಯಮ' ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಸಣ್ಣಪುಟ್ಟವರ ಮೇಲೆ ಹರಿಹಾಯ್ದು ಬೀಳುವುದು, ಆದರೆ ಭಾರೀ ದೊಡ್ಡ ಮಿಕಗಳ ತಂಟೆಗೆ ಹೋಗದಿರುವುದು ನಮಗೆಲ್ಲರಿಗೂ ಗೊತ್ತೇ ಇದೆ. ಅದರಲ್ಲೂ ದೊಡ್ಡ ಉದ್ದಿಮೆದಾರರ ವಿರುದ್ಧವಂತೂ ಎಂದೂ ಹೋಗುವುದಿಲ್ಲ, ಅವರು ನೀಡುವ ಜಾಹೀರಾತಿನಲ್ಲೇ ಇವರು ಬದುಕುವುದು. ಆ ಜಾಹೀರಾತು ಸಿಗಬೇಕೆಂದೇ, ಸಿಗುವ ಜಾಹೀರಾತಿನ ದರವೂ ಹೆಚ್ಚಾಗಬೇಕೆಂದೇ ಟಿಆರ್‌ಪಿ ಕಸರತ್ತು ಎಂಬ ಗಲೀಜು ಕೆಲಸವನ್ನು ಅವು ಮಾಡುತ್ತವೆ. ಹಾಗಿದ್ದ ಮೇಲೆ ತಮ್ಮ ಜಾಹೀರಾತುದಾರರ ವಿರುದ್ಧ ಹೋಗುವುದುಂಟೇ?

ಇರಲಿ, ಬೇಳೆ ಸ್ಟಾಕಿಂಗ್‌ನ ಹಿಂದಿನ ಹುನ್ನಾರವನ್ನು ಕೆದಕುವ ಕೆಲಸವನ್ನು ನಾವಾದರೂ ಮಾಡಲೇಬೇಕು ಎಂದು ಹೊರಟರೆ ಗಾಬರಿಯಾಗುತ್ತದೆ. ಏಕೆಂದರೆ, ಇದು



ಇದ್ದಕ್ಕಿದ್ದಂತೆ ಸಂಭವಿಸಿದ್ದಲ್ಲ, ಬಹಳ ವ್ಯವಸ್ಥಿತವಾದ 3-4 ವರ್ಷಗಳ ಕಾರ್ಯಾಚರಣೆಯೇ ಅದರ ಹಿಂದಿದೆ.


ಅಕ್ಟೋಬರ್ 18, 2015ರಂದು ಮುಂದ್ರಾ ಬಂದರಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕ್ಯಾಪ್ಟನ್ ಉನ್ಮೇಶ್ ಒಂದು ಹೇಳಿಕೆಯನ್ನು ನೀಡುತ್ತಾರೆ. ಆ ಬಂದರು, ಗೌತಮ್ ಅದಾನಿಗೆ ಸೇರಿದ್ದು. ಅದು ಈಗ ಸರಕು ಸಾಗಣೆ ಮಾಡುತ್ತಿರುವ ಅತ್ಯಂತ ದೊಡ್ಡ ಬಂದರಾಗಿದೆ. 'ಅದಾನಿ ಗುಂಪು ಬಂದರಿನಲ್ಲಿ ಕೃಷಿ ಉತ್ಪನ್ನಗಳ ಸಾಗಾಣಿಕೆ ಮತ್ತು ಸಂಗ್ರಹಕ್ಕಾಗಿ ಜಾಗತಿಕ ಮಟ್ಟದ ಸೌಲಭ್ಯಗಳನ್ನು ಒದಗಿಸಿದ್ದೇವೆ. ನಾವೀಗ ಎಲ್ಲಾ ಬಂದರುಗಳಲ್ಲಿ ಇದಕ್ಕಾಗಿ ಅತೀ ದೊಡ್ಡ ಸಂಗ್ರಹಾಗಾರಗಳನ್ನು ಹೊಂದಿದ್ದೇವೆ'. ಮುಂದ್ರಾದಲ್ಲಿ ಮಾತ್ರವಲ್ಲದೇ, ಗುಜರಾತ್‌ನ ದಹೇಜ್, ಕಾಂಡ್ಲಾ ಮತ್ತು ಹಜೀರಾಗಳಲ್ಲೂ ಅವರು ಬಂದರು ಮತ್ತು ಗೋದಾಮುಗಳನ್ನು ಹೊಂದಿದ್ದಾರೆ. ಒರಿಸ್ಸಾದ ಧಮ್ರಾದಲ್ಲಿ, ಗೋವಾದ ಮರ್ಮಗೋವಾದಲ್ಲಿ ಹಾಗೂ ಆಂಧ್ರದ ವಿಶಾಖಪಟ್ಟಣಗಳ ಬಂದರು ಮತ್ತು ಗೋದಾಮುಗಳ ಮೇಲೆ ನಿಯಂತ್ರಣ ಹೊಂದಿದ್ದಾರೆ. ಇದರಲ್ಲಿ ಮುಂದ್ರಾಕ್ಕೆ ಎಸ್‌ಇಝಡ್ - ವಿಶೇಷ ಆರ್ಥಿಕ ವಲಯ ಸ್ಥಾನಮಾನವಿದೆ. ಅದರ ಮೂಲಕ 2014-15 ಆರ್ಥಿಕ ವರ್ಷದಲ್ಲಿ 144 ಮಿಲಿಯನ್ ಟನ್ ಸರಕನ್ನು ಸಾಗಾಣಿಕೆ ಮಾಡಲಾಗಿದೆಯೆಂದು ಅಧಿಕೃತ ದಾಖಲೆಗಳು ಹೇಳುತ್ತವೆ. ಇದಲ್ಲದೇ ತಮಿಳುನಾಡಿನ ಎನ್ನೋರ್ ಮತ್ತು ಕೇರಳದ ವಿಳಿಂಜಗಳಲ್ಲೂ ಬಂದರುಗಳ ನಿರ್ಮಾಣ ಮಾಡುತ್ತಿದೆ.

ಇದಕ್ಕೂ ಸ್ವಲ್ಪ ಹಿಂದಕ್ಕೆ ಹೋಗೋಣ. 2012ರ ಡಿಸೆಂಬರ್‌ನಲ್ಲಿ ಅದಾನಿ ಗುಂಪು ತನ್ನ ಒಂದು ಯೋಜನೆಯನ್ನು ಘೋಷಿಸಿತ್ತು. ಅದೇನೆಂದರೆ, ಅದಾನಿ-ವಿಲ್‌ಮಾರ್ ಎಂಬ ಜಂಟಿ ಉದ್ದಿಮೆ (ಅದಾನಿ ಮತ್ತು ಸಿಂಗಪುರದ ವಿಲ್‌ಮಾರ್ ಕಂಪನಿ)ಯು ಫಾರ್ಚ್ಯೂನ್ ಎಂಬ ತನ್ನ ಅಡಿಗೆ ಎಣ್ಣೆ ಬ್ರಾಂಡ್ ಅನ್ನು ಇನ್ನು ಮುಂದೆ ಬೇಳೆ, ಕಾಳು, ಬಾಸುಮತಿ ಅಕ್ಕಿಗಳಿಗೂ ವಿಸ್ತರಿಸಲಿದೆ. ಹಲ್ದಿಯಾದಲ್ಲಿ ಇರುವ ತನ್ನ ಕಾರ್ಖಾನೆಯಲ್ಲಿ ಎಲ್ಲಾ ಬೇಳೆಗಳನ್ನೂ ಪ್ಯಾಕಿಂಗ್ ಮಾಡುವ ಕೆಲಸವನ್ನು ಮೇ 2013ರ ಹೊತ್ತಿಗೆ ಆರಂಭಿಸಲಿದ್ದೇವೆ. ಈಗಾಗಲೇ ಸುಮಾರು 10 ಲಕ್ಷ ಚಿಲ್ಲರೆ ವ್ಯಾಪಾರದ ಅಂಗಡಿಗಳೊಂದಿಗಿನ ತಮ್ಮ ಜಾಲವನ್ನು ಆ ಹೊತ್ತಿಗೆ ಇನ್ನೂ ವಿಸ್ತರಿಸಲಿದ್ದೇವೆ ಎಂಬುದು ಅವರ ಘೋಷಣೆಯಾಗಿತ್ತು.

ಜುಲೈ 16, 2014ರಲ್ಲಿ, ಅಂದರೆ ಮೋದಿ ಸರ್ಕಾರ ಬಂದ ಎರಡು ತಿಂಗಳಲ್ಲಿ, ತನ್ನ ಎಸ್‌ಇಜಡ್‌ಗೆ (8481 ಹೆಕ್ಟೇರ್ ಪ್ರದೇಶ) ಎಲ್ಲಾ ಬಗೆಯ ಅನುಮತಿಗಳು, ಪರಿಸರ ನಿರಾಕ್ಷೇಪಣಾ ಪತ್ರಗಳನ್ನು ಈ ಕಂಪೆನಿಯು ಪಡೆದುಕೊಂಡಿತ್ತು, ಇದರಲ್ಲೇ ಒಂದು ಆಗ ಮುಂದ್ರ ಬಂದರೂ ಸಹ ಆಗಿತ್ತು, ಈ ಬಂದರು ಮತ್ತು ಪೂರ್ವ ಕರಾವಳಿಯ ಬಂದರುಗಳಲ್ಲೇ ದೊಡ್ಡ ಪ್ರಮಾಣದ ಸಂಗ್ರಹವಾಗಿದೆ ಎಂಬ ವರದಿಗಳು ಆರಂಭವಾಯಿತು. ಆಗ ದೇಶದ ಬೇರೆ ಬೇರೆ ಗೋದಾಮುಗಳ ಮೇಲೆ ಆಹಾರ ಅಧಿಕಾರಿಗಳ ದ ನಡೆದವು. ಆದರೆ, ಅದಾನಿಗೆ ಸೇರಿದ ಒಂದೇ ಗೋದಾಮಿನ ಮೇಲೂ ದಾಳಿ ನಡೆಯಲಿಲ್ಲ ಎ ಗಮನಾರ್ಹ.

ವಾಸ್ತವದಲ್ಲಿ ಆಮದು ಹಿಂದಿನ ವರ್ಷಕ್ಕಿ ಶೇ.31ರಷ್ಟು ಹೆಚ್ಚಾಯಿತು ಎಂಬ ಸುದ್ದಿಯೂ ಹೀಗಾದ್ದರಿಂದ ಅಂತರಾಷ್ಟ್ರೀಯ ಮಟ್ಟದಲ್ಲೂ ಬೆ ಹೆಚ್ಚಾಯಿತು! ಭಾರತವು ಪ್ರಪಂಚದ ಅತೀ ದೊ ಗ್ರಾಹಕ ದೇಶವಾದ್ದರಿಂದ ಇದು ಸಹಜವಾಗಿದೆ. ತೊಗರಿಬೇಳೆಯ ಅಂತರಾಷ್ಟ್ರೀಯ ಬೆಲೆ ರೂ. ಹೆಚ್ಚಾಗಲಿಲ್ಲ, ಸಾಕಷ್ಟು ಆಮದಾದರೂ, ಈ ದ ಮಾತ್ರ ಬೆಲೆ ಕೆ.ಜಿ.ಗೆ 200 ರೂ.ಗಳಿಗೇರಿತು!!

ಈ ಸಂದರ್ಭದಲ್ಲಿ ಸರ್ಕಾರವು 'ಸಮರೋಪಾ ಫೀಲ್ಡಿಗಿಳಿಯಿತು. ಬಿಹಾರ ಚುನಾವಣೆಯ ಕಾರಣದಿ ಹೀಗೆ ಮಾಡುತ್ತಿದೆ ಎಂಬೆಲ್ಲಾ ಮಾತುಗಳು ಕೇಳಿಬ ಅವರ ಸಮರೋಪಾದಿ ಕಾರ್ಯಾಚರಣೆಯು ಅದಾ ಮುಟ್ಟಲಿಲ್ಲ ಮಾತ್ರವಲ್ಲ, ಅಂತರಾಷ್ಟ್ರೀಯ ಮಾರುಕ ಸುಮಾರು 7000 ಟನ್‌ಗಳಷ್ಟು ಬೇಳೆ ತರಿಸಿಕೊಳ್ಳುವುದೆಂದೂ, ಬಂದರುಗಳಿಂದ ವ್ಯಾಪಾರಿಗಳಿಗೆ ಇದನ್ನು ಸಾಗಿಸಲು 500 ಕೋಟಿ ಸಬ್ಸಿಡಿ ನೀಡಲಾಗುತ್ತದೆಂದೂ ಪ್ರಕಟಿಸಲಾ ದಿನವೊಂದಕ್ಕೆ 6000 ಟನ್‌ಗಳಷ್ಟು ಬೇಳೆಯನ್ನು



ಈ ದೇಶಕ್ಕೆ 7000 ಟನ್ ಯಾವ ಲೆಕ್ಕ? ಬ 500 ಕೋಟಿ ರೂ.ಗಳೂ ಯಾರ ಪಾಲಾದವು ಊಹಿಸುವುದು ಕಷ್ಟವೇನಲ್ಲ.

ಅದಾನಿಯಂತೆಯೇ ಮಹೀಂದ್ರ ಮತ್ತು (ಆಟೋಮೊಬೈಲ್ ಕ್ಷೇತ್ರದ ದೊಡ್ಡ ಉದ್ದಿ ಆಹಾರ ಪದಾರ್ಥಗಳ ಕ್ಷೇತ್ರಕ್ಕೆ ಕಾಲಿಟ್ಟಿದೆ. ಆದರೆ ಪ್ರಧಾನಿಯ ನೇರ ಕುಮ್ಮಕ್ಕಿನೊಂದಿಗೆ ಮುನ್ನು ಅದಾನಿಗೆ ಅವರ್‍ಯಾರೂ ಪೈಪೋಟಿ ಕೊಡ ಸನ್‌ಡ್ರಾಪ್ ಎಂಬ ಪ್ರಸಿದ್ಧ ಬ್ರಾಂಡ್ ಹೊಂದಿರು ಸಹ ತನ್ನ ಖಾದ್ಯ ತೈಲದ ರಿಫೈನರಿಯನ್ನು ಮಾರಿದೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ತಮ್ಮದು ಭಾರೀ ವಿರೋಧ ಎಂದು ಹೇಳಿ ಪಕ್ಷವು ಅಂತಹ ಎಲ್ಲಾ ಬಾಬ್ತುಗಳಲ್ಲಿ ಈಗಾಗಲ ಸರಿದಿರುವುದು ದೇಶದ ಜನತೆಗೆ ಗೊತ್ತಿದೆ. ಒಂ ವಿರೋಧವೇನಾದರೂ ಇರುವುದಾದಲ್ಲಿ ಅದು ಗುಂಪು ಒಂದಷ್ಟು ಏಕಸ್ವಾಮ್ಯ ಸಾಧಿಸುವ ತ ಎಂಬುದು ಅವರ ಮಾತಿನ ಒಳಾರ್ಥವಿದ್ದಿರಬ

ಅಂಬಾನಿಯೆಂಬ ಇನ್ನೊಬ್ಬ ಖೂಳ ಬಂ ಬಹುಕಾಲ ದೇಶದ ಅತೀ ದೊಡ್ಡ ಕುಬೇ ಆಗಿದ್ದಾನೆ. ಅವನ ಸಮೀಪದಲ್ಲೆಲ್ಲೂ ಈ ಅದಾನಿ ಆದರೆ, ದೇಶದ ಪ್ರಧಾನಿಗೆ ಅತೀ ಸಮೀ ಗೌತಮ್ ಅದಾನಿ ಸದ್ಯದಲ್ಲೆ ಅಂಬಾನಿಯನ್ನು ಎಲ್ಲಾ ಸಾಧ್ಯತೆಗಳಿವೆ. ಏಕೆಂದರೆ ಪ್ರತಿಯೊಬ್ಬ ಮನೆಯ ಮೇಲೆ ಅದಾನಿ ಹಿಡಿತ ಸಾಧಿಸುತ್ತಿದ್ದಾ ಅನ್ನವನ್ನೇ ಲೂಟಿ ಮಾಡುವ ಈ ಖೂಳರನ್ನು ಕರೆಯಬೇಕು?

ನಾವೇ ದುಡ್ಡು ಕೊಟ್ಟು ಅವಮಾನ ಮಾಡಿಸಿಕೊಳ್ಳಬೇಕಾ?

ಈಗ ಲಿಟರೇಚರ್ ಫೆಸ್ಟ್‌ಗಳು ದೇಶದ ವಿವಿಧ ...ಗಳಲ್ಲಿ ನಡೆಯುತ್ತವೆ. ದೊಡ್ಡದೊಡ್ಡ ಕಂಪನಿಗಳ ...ಯೋಜಕತ್ವದಡಿ ನಡೆಯುವ ಈ ಚರ್ಚಾಕೂಟಗಳಲ್ಲಿ ...ಗ್ಲಿಷ್ ಮತ್ತು ಹಿಂದಿ ಸಾಹಿತ್ಯ ಹಾಗು ಆ ಭಾಷೆಗಳ ...ಹಿತಿಗಳಿಗೆ ಪ್ರಾಮುಖ್ಯತೆ ಇರುತ್ತದೆ. ಕನ್ನಡ ಸಾಹಿತ್ಯ ...ಷತ್ತು ಮತ್ತು ಇತರೆ ಸಂಘಟನೆಗಳು ನಡೆಸುವ ಸಾಹಿತ್ಯ ...ಮ್ಮೇಳನ ಮತ್ತು ಸಂಕೀರ್ಣಗಳು ಸ್ಥಳೀಯ ಜನರ ಬದುಕಿಗೆ, ...ಲ್ಲಿನ ಸಂಸ್ಕೃತಿಗೆ, ಸಮಕಾಲೀನ ದುಗುಡ ಮತ್ತು ...ಮ್ಮಾನಗಳಿಗೆ ಒತ್ತು ನೀಡಿದರೆ, 'ಎಲೀಟ್'ಗಳೇ ...ಗವಹಿಸುವ ಈ ಲಿಟ್ ಫೆಸ್ಟ್‌ಗಳಿಗೂ, ಇಲ್ಲಿನ ಜನರ ...ದುಕಿಗೂ ಸಂಬಂಧವೇ ಇರುವುದಿಲ್ಲ. ಅಲ್ಲೆಲ್ಲ ಶ್ರಮದ ...ವರು ಸುರಿಯದೆ ವಿವಿಧ ವೈನ್‌ಗಳ ಹೊಳೆಯೇ ...ಯುತ್ತದೆ. ಇನ್ನು ಅಲ್ಲಿ ನಡೆಯುವುದೂ ಗಾಢವಾದ ...ರ್ಚೆಗಳೇನಲ್ಲ. ಹೆಚ್ಚೆಂದರೆ ಕೆಲವು ಬರಹಗಾರರು ನೀಡುವ ...ವಾದಾತ್ಮಕ ಹೇಳಿಕೆಗಳಿಗೆ ಈ ಲಿಟ್ ಫೆಸ್ಟ್‌ಗಳು ಸುದ್ದಿ ...ಮಾಡುತ್ತವೆ. ನಮ್ಮ ಸಾಹಿತ್ಯ ಪರಿಷತ್ತಿನ ವಾರ್ಷಿಕ ...ಮ್ಮೇಳನಕ್ಕೆ ಸಾವಿರಾರು ಜನ ಬರುತ್ತಾರೆ; ಈ ಲಿಟ್ ...ಫೆಸ್ಟ್‌ಗಳಿಗೆ ಒಂದು ಸಾವಿರ ಜನ ಬಂದರೆ ಅದೇ ಹೆಚ್ಚು!

ಜೈಪುರ್ ಲಿಟ್ ಫೆಸ್ಟ್‌ನಿಂದ ಶುರುವಾದ ಈ ಸಿರಿವಂತರ ...ತ್ಸವಗಳು ಈಗ ಒಂದು ರೀತಿಯಲ್ಲಿ ಉದ್ಯಮವೇ ...ಗಿದೆ. ಹಲವು ಪ್ರಮುಖ ಮಾಧ್ಯಮಗಳೇ ಇವುಗಳನ್ನು ...ಯೋಜಿಸುತ್ತಿದ್ದು ಬೃಹತ್ ಕಂಪನಿಗಳಿಗೆ ಇವು ಸೂಕ್ತವಾದ ...ಜಾಹೀರಾತು ವೇದಿಕೆಗಳಾಗಿವೆ. ಇನ್ನು ಇಂಗ್ಲಿಷ್‌ನಲ್ಲಿ ...ಬರೆಯುವ ಲೇಖಕರಿಗೆ ಮತ್ತು ಇಂಗ್ಲಿಷ್ ಪುಸ್ತಕಗಳನ್ನು ...ಓದುವ ಜನರಿಗೆ ಈ ಲಿಟ್ ಫೆಸ್ಟ್‌ಗಳು ಒಂದು ಮಿನಿ ಪಾರ್ಟಿ ಇದ್ದಂತೆ.

ಇಂತಹ ಕೆಲವು ಲಿಟ್ ಫೆಸ್ಟ್‌ಗಳು ಕಳೆದ ಹಲವು ವರ್ಷಗಳಿಂದ ಬೆಂಗಳೂರಿನಲ್ಲೂ ನಡೆಯುತ್ತಿವೆ. ಸಾಮಾನ್ಯವಾಗಿ ಇಂತಹ ಉತ್ಸವಗಳಿಗೆ ಇಂಗ್ಲಿಷ್ ಬರಹಗಾರರು ಬರುತ್ತಾರಾದ್ದರಿಂದ ಮತ್ತು ಅಂತಹ ಬರಹಗಾರರ ಹೆಸರು ಹೆಚ್ಚು ಜನರಿಗೆ ಗೊತ್ತಿಲ್ಲದಿರುವುದರಿಂದ ತಮ್ಮ ಉತ್ಸವಕ್ಕೆ ಹೆಚ್ಚು ಪ್ರಚಾರ ಪಡೆಯುವ ದೃಷ್ಟಿಯಿಂದ ಆಯೋಜಕರು ಬೇಕಂತಲೇ ಹಲವು ಸ್ಥಳೀಯ ಭಾಷೆಯ ಪ್ರಮುಖ ಬರಹಗಾರರನ್ನು ಆಹ್ವಾನಿಸುತ್ತಾರೆ. ಒಂದೆರಡು ವರ್ಷಗಳ ಹಿಂದೆ ಒಂದು ಲಿಟ್ ಫೆಸ್ಟ್‌ನ ಆಯೋಜಕರು ತಮ್ಮ ಉತ್ಸವಕ್ಕೆ ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಚಂದ್ರಶೇಖರ ಕಂಬಾರ್ ಎಂಬ ಮೂವರು ಜ್ಞಾನಪೀಠ ಪ್ರಶಸ್ತಿ ವಿಜೇತರನ್ನು ಕರೆದಿದ್ದರಿಂದಲೇ ಉಬ್ಬಿಹೋಗಿತ್ತು.

ಇರಲಿ, ಬೆಂಗಳೂರಿನಲ್ಲಿ ಇತ್ತೀಚೆಗೆ ಜರುಗುತ್ತಿರುವ ಅಂತಹ ಉತ್ಸವಗಳಲ್ಲಿ 'ಬೆಂಗಳೂರು ಲಿಟರೇಚರ್ ಫೆಸ್ಟಿವಲ್' ಎಂಬುದೂ ಒಂದು. ಆದರೆ ಅದು ಹೆಚ್ಚಾಗಿ ಜನರ ಗಮನಕ್ಕೆ ಬಂದಿರಲಿಲ್ಲ. ಅದಕ್ಕೆ ಒಂದು ಕಾರಣ ಅದು ದೂರದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆಯುತ್ತಿದ್ದದ್ದು ಮತ್ತು ಇನ್ನೊಂದು ಕಾರಣ ಅದಕ್ಕೂ ಇಲ್ಲಿನ ಬೆಂಗಳೂರಿನ ಜನರಿಗೂ ಕಿಂಚಿತ್ತೂ ಸಂಬಂಧವೇ ಇಲ್ಲದ್ದು.

ಈ ಉತ್ಸವದ ಆಯೋಜಕರಲ್ಲಿ ವಿಕ್ರಮ್ ಸಂಪತ್ ಎಂಬಾತ ಪ್ರಮುಖ. ಮೈಸೂರು ಒಡೆಯರನ್ನು ಕುರಿತು 600 ಪುಟಗಳ ಪುಸ್ತಕ ಬರೆದಿರುವುದು ಈತನ ಹೆಗ್ಗಳಿಕೆ. ತನ್ನನ್ನು ಇತಿಹಾಸಕಾರ, ಲೇಖಕ, ಚಿಂತಕ ಎಂದೆಲ್ಲ ಬಣ್ಣಿಸಿಕೊಳ್ಳುವ ಈ ಸಂಪತ್ ಇತ್ತೀಚೆಗೆ 'ದಿ ಮಿಂಟ್' ಎಂಬ ಪತ್ರಿಕೆಯಲ್ಲಿ ಪ್ರಶಸ್ತಿ ವಾಪಸಾತಿ ಬರಹಗಾರರನ್ನು ಕುರಿಗಳಿಗೆ ಹೋಲಿಸಿ ಅವರೆಲ್ಲ ರಾಜಕೀಯ ಚೇಲಾಗಳು ಎಂದು ಝಾಡಿಸಿದ್ದ. ಜೊತೆಗೆ ಒಂದಿಷ್ಟು ಬಲಪಂಥೀಯರ ಜೊತೆ ಸೇರಿಕೊಂಡು "ಇಲ್ಲಿಯ ತನಕ ಎಡಪಂಥೀಯರು ನಮ್ಮ ದೇಶದ ಇತಿಹಾಸವನ್ನು ತಮ್ಮ ಮೂಗಿನ ನೇರಕ್ಕೆ ಬರೆದಿದ್ದಾರೆ. ಈಗ ಅದನ್ನೆಲ್ಲ ಸರಿಪಡಿಸುವ ಕಾಲ ಬಂದಿದೆ" ಎಂಬಂತಹ ಮನವಿ ಪತ್ರಕ್ಕೆ ಸಹಿ ಹಾಕಿದ್ದ.

ಈ ಬಾರಿಯ ಲಿಟ್ ಫೆಸ್ಟ್‌ಗೆ ಕೆಲವು ಇತರೆ ಕನ್ನಡಿಗರೊಟ್ಟಿಗೆ ದಯಾನಂದ, ಆರೀಫ್ ರಾಜ ಮತ್ತು ಹಿರಿಯ ವಿಮರ್ಶಕ ಒ.ಎಲ್.ನಾಗಭೂಷಣ ಸ್ವಾಮಿಯವರನ್ನು ಆಹ್ವಾನಿಸಲಾಗಿತ್ತು. ಈ ಮೂವರಿಗೂ ಸಂಪತ್ ಬರೆದಿದ್ದ ಲೇಖನ ಮತ್ತು ಸಹಿ ಮಾಡಿದ್ದ ಮನವಿಯಲ್ಲಿನ ವಿವರಗಳು ಗೊತ್ತಾಗುತ್ತಿದ್ದಂತೆ ಅವರೆಲ್ಲರೂ ಸೌಜನ್ಯದಿಂದಲೇ ತಾವು ಉತ್ಸವದಲ್ಲಿ ಭಾಗವಹಿಸುವುದಿಲ್ಲ ಎಂದು ಹಿಂದೆ ಸರಿದಿದ್ದರು. ಆಗ ಸಂಪತ್ ಇವರೆಲ್ಲಾ ತನ್ನ ವಿರುದ್ಧ ವೈಯಕ್ತಿಕ ದಾಳಿ ಮಾಡುತ್ತಿದ್ದಾರೆಂದೂ, ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತಿದ್ದಾರೆಂದೂ ಆಧಾರ ರಹಿತವಾಗಿ ಆರೋಪಿಸಿ ಉತ್ಸವದ ಆಯೋಜಕನ ಸ್ಥಾನದಿಂದ ಕೆಳಗಿಳಿದ. ಮಾಧ್ಯಮಗಳು ಕೂಡ ಆತನ ರಾಜೀನಾಮೆ ಪತ್ರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದರಿಂದ ಮತ್ತು ದಯಾನಂದ, ಆರೀಫ್ ಮತ್ತು ಸ್ವಾಮಿಯವರು ಮಾಧ್ಯಮಗಳ ಮುಂದೆ ಜಗಳಕ್ಕೆ ಆಸ್ಪದ ನೀಡದಿದ್ದರಿಂದ ಆತ ಹೇಳಿದ್ದೇ ಸತ್ಯ ಎಂಬಂತೆ ರಾಜ್ಯದಲ್ಲಿ ಮಾತ್ರವಲ್ಲ, ರಾಷ್ಟ್ರಮಟ್ಟದ ಮಾಧ್ಯಮದಲ್ಲೂ ಸುದ್ದಿ ಆಯಿತು. ಆದರೆ ನಮ್ಮ ಕನ್ನಡದ ಬರಹಗಾರರು ಸಂಪತ್ ಆರೋಪಿಸಿರುವಂತೆ 'ಬಹಿಷ್ಕಾರ' ಸಂಸ್ಕೃತಿಯವರೂ ಅಲ್ಲ, ಆತನಷ್ಟು ಸೌಜನ್ಯರಹಿತ ವ್ಯಕ್ತಿಗಳೂ ಅಲ್ಲ, ಟೊಳ್ಳುತನವನ್ನು ಮೈಗೂಡಿಸಿಕೊಂಡವರೂ ಅಲ್ಲ ಎಂಬುದನ್ನು ತೋರಿಸಲು ನಮ್ಮ ಪತ್ರಿಕೆ ಈ ಸಂಚಿಕೆಯಲ್ಲಿ ಉತ್ಸವದಿಂದ ಹಿಂದೆ ಸರಿದ ಮೂವರ ಪತ್ರಗಳನ್ನು ಮಾತ್ರವಲ್ಲ, ಇಂತಹ ಉತ್ಸವಗಳಲ್ಲಿ ಕನ್ನಡಕ್ಕೆ ಮತ್ತು ಕನ್ನಡದ ಸಾಹಿತಿಗಳಿಗೆ ಆಗುವ ಅವಮಾನವನ್ನು ಕುರಿತು ಹಿರಿಯ ವಿಮರ್ಶಕ ಸಿ.ಎನ್.ರಾಮಚಂದ್ರನ್ ಅವರು ಬರೆದಿರುವ ಪತ್ರವನ್ನೂ ಪ್ರಕಟಿಸಿದ್ದೇವೆ. ಜೊತೆಗೆ ಸಂಪತ್ ಹೇಳಿರುವ ಸುಳ್ಳುಗಳಿಗೆ ದಯಾನಂದ ಮತ್ತು ಆರೀಫ್ ರಾಜ ಅವರು ಕೊಟ್ಟಿರುವ ಉತ್ತರ ರೂಪದ ಲೇಖನವನ್ನೂ ಪ್ರಕಟಿಸಿದ್ದೇವೆ.



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

ಅಂದಹಾಗೆ, ಸಂಪತ್ ಮತ್ತು ಆತನ ಸಂಗಡಿಗರು ಆಯೋಜಿಸುವ ಈ ಸಿರಿವಂತರ, ಇಂಗ್ಲಿಷ್-ಹಿಂದಿಮಯವಾದ ಲಿಟ್ ಫೆಸ್ಟ್‌ಗೆ ನಮ್ಮ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಳೆದ ಮೂರು ವರ್ಷಗಳಿಂದ 15 ಲಕ್ಷ ರೂಪಾಯಿಗಳನ್ನು ಕೊಡುತ್ತಿದೆ. ಜೊತೆಗೆ ಪ್ರವಾಸೋದ್ಯಮ ಇಲಾಖೆಯೂ ಲಕ್ಷಾಂತರ ರೂಪಾಯಿಗಳನ್ನು ನೀಡುತ್ತಿದೆ. ಕನ್ನಡಕ್ಕೆ, ಕನ್ನಡಿಗರಿಗೆ, ಕನ್ನಡದ ಬರಹಗಾರರಿಗೆ ಅವಮಾನ ಮಾಡುವ ಇಂತಹ ಉತ್ಸವಗಳಿಗೆ ಕನ್ನಡಿಗರು ತೆರಿಗೆ ರೂಪದಲ್ಲಿ ಕೊಟ್ಟಿರುವ ಹಣವನ್ನು ಯಾಕೆ ಕೊಡಬೇಕು? ಈಗಲಾದರೂ ಸಿದ್ದರಾಮಯ್ಯ ಇಂತಹ ದುಂದುವೆಚ್ಚಕ್ಕೆ ಕಡಿವಾಣ ಹಾಕುವರಾ? ■


...ತ್ಮೀಯ ಶೈನಿ ಆಂಟನಿ,

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾಗವಹಿಸಲು ನನ್ನಿಂದ ಸಾಧ್ಯವಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಇದರಿಂದಾಗಿ ...ಮಗೆ ಮತ್ತು ಕಾರ್ಯಕ್ರಮದ ಆಯೋಜಕರಿಗೆ ಆಗುವ ಅನಾನುಕೂಲತೆಗಾಗಿ ಕ್ಷಮೆ ಯಾಚಿಸುತ್ತೇನೆ. ಕಳೆದ ಎರಡು ದಿನಗಳಲ್ಲಿ ...ನ ಗಮನಕ್ಕೆ ಹಲವು ವಿಷಯಗಳು ಬಂದಿದ್ದರಿಂದ ನಾನು ಸಾಹಿತ್ಯ ಉತ್ಸವದಿಂದ ಹಿಂದೆ ಸರಿಯುತ್ತಿದ್ದೇನೆ. ತಮ್ಮ ಪ್ರಶಸ್ತಿಗಳನ್ನು ...ಹಿಂದಿರುಗಿಸುವ ಮೂಲಕ ಹೆಚ್ಚುತ್ತಿರುವ ಅಸಹಿಷ್ಣುತೆ ಬಗ್ಗೆ ಎಲ್ಲರ ಗಮನವನ್ನು ಸೆಳೆಯುತ್ತಿರುವ ಸಾಹಿತಿಗಳೊಂದಿಗೆ ನಾನು ...ಬಯಸುತ್ತೇನೆ. ಪ್ರಶಸ್ತಿಗಳನ್ನು ಹಿಂದಿರುಗಿಸುತ್ತಿರುವ ಸಾಹಿತಿಗಳ ಆತಂಕದ ಬಗ್ಗೆ ಕಿಂಚಿತ್ತೂ ಯೋಚಿಸದಿರುವವರ ಜೊತೆ ಈ ...ಹಿತ್ಯ ಉತ್ಸವದಲ್ಲಿ ಭಾಗವಹಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ.

ಎರಡನೆಯದಾಗಿ, ಈ ಹಿಂದೆ ಇದೇ ಉತ್ಸವದಲ್ಲಿ ಭಾಗವಹಿಸಿದ್ದ ನನ್ನ ಸ್ನೇಹಿತರೊಬ್ಬರು ಅಲ್ಲಿ ಕನ್ನಡ ಮತ್ತು ಕನ್ನಡ ...ಖಕರಿಗೆ ದೊರೆತ ಪ್ರಾಮುಖ್ಯತೆ ತೃಪ್ತಿಕರವಾಗಿರಲಿಲ್ಲ ಎಂದರು. ಅವರು ಹೇಳಿದ್ದನ್ನು ನಾನು ನಂಬುತ್ತೇನೆ. ಈ ಉತ್ಸವದ ...ಯೋಜಕರು ಕನಿಷ್ಠ ವೆಬ್‌ಸೈಟಿನಲ್ಲಾದರೂ ಮಾಹಿತಿಯನ್ನು ಕನ್ನಡದಲ್ಲೂ ಹಾಕಿಲ್ಲ. ನಾನು ಚಿಂತಿಸುವ ಮತ್ತು ಬರೆಯುವ ...ಷೆಯು ನಿಮ್ಮ ಆಯೋಜಕರಿಗೆ 'ಸ್ಥಳೀಯ' ಭಾಷೆಯಾಗಿ ಕಂಡಿದ್ದರಿಂದ ಮತ್ತು ಅದು ಇಂಗ್ಲಿಷ್ ಹಾಗೂ ಹಿಂದಿ ...ಹಿತ್ಯದಷ್ಟು ಮುಖ್ಯವಲ್ಲ ಎನಿಸಿರುವುದರಿಂದ ನಿಮ್ಮ ಉತ್ಸವದಲ್ಲಿ ಭಾಗವಹಿಸಲು ನನಗೆ ಇಚ್ಛೆ ಇಲ್ಲ.

ಹೌದು, ನಾನು, ಉತ್ಸವದಲ್ಲಿ ಭಾಗವಹಿಸಿ ನನ್ನ ಎಲ್ಲಾ ಆಲೋಚನೆಗಳನ್ನು ಅಲ್ಲಿಯೇ ...ಚಿಕೊಳ್ಳಬಹುದಿತ್ತು, ಆದರೆ ನಾವೀಗ ಅದೆಂತಹ ಪರಿಸ್ಥಿತಿಯಲ್ಲಿ ವಾಸಿಸುತ್ತಿದ್ದೇವೆಂದರೆ ಇಲ್ಲಿ ಅಭಿವ್ಯಕ್ತಿ ...ತಂತ್ರ್ಯ ಇದ್ದರೂ ಅವರು ಏನನ್ನು ಹೇಳುತ್ತಿದ್ದಾರೆ ಎಂದು ಕೇಳುವ ಸೂಕ್ಷ್ಮತೆ ಇಲ್ಲದಂತಾಗಿದೆ.

ಮತ್ತೊಮ್ಮೆ ನನ್ನಿಂದಾಗಿ ಕಾರ್ಯಕ್ರಮದ ಆಯೋಜಕರಿಗೆ ಆದ ಅನಾನುಕೂಲತೆಗಾಗಿ ಕ್ಷಮೆಯಾಚಿಸುತ್ತೇನೆ.



• ಒ.ಎಲ್. ನಾಗಭೂಷಣ ಸ್ವಾಮಿ (ಇಂಗ್ಲಿಷ್‌ನಿಂದ ಅನುವಾದಿಸಲಾಗಿದೆ)

ಆತ್ಮೀಯ ಶೈನಿ,

ನಿಮ್ಮ ಬಿ.ಎಲ್.ಎಫ್ 15ರ ಅವತರಣಿಕೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗದೇ ಇರುವುದಕ್ಕೆ ವಿಷಾದಿಸುತ್ತೇನೆ. ನನ್ನ ಈ ತತ್‌ಕ್ಷಣದ ತೀರ್ಮಾನಕ್ಕೆ ಕಾರಣವೇನೆಂದರೆ, ಈ ಕಾರ್ಯಕ್ರಮದ ಸಂಘಟಕರಾದ ವಿಕ್ರಮ್ ಸಂಪತ್ ...ವರು ದಿನಾಂಕ 16.10.2015 ರಂದು 'ದಿ ಮಿಂಟ್' ಪತ್ರಿಕೆಯಲ್ಲಿ ಬರೆದ ಲೇಖನ. ಪ್ರಜಾಪ್ರಭುತ್ವದಲ್ಲಿ ...ಶಸ್ತಿಯನ್ನು ಮರಳಿ ಕೊಡಬೇಕು ಅಥವಾ ಕೊಡಬಾರದು ಎಂಬ ವಾದವೂ ಒಂದು ಬಗೆಯ ಫ್ಯಾಸಿಸ್ಟ್ ಆಲೋಚನೆ. ...ಶಸ್ತಿಯನ್ನು ಕೊಡುವುದು ಅಥವಾ ಬಿಡುವುದು ಲೇಖಕನ ಸ್ವತಂತ್ರ ಮನೋವೃತ್ತಿಗೆ ಬಿಟ್ಟ ವಿಷಯವಾಗಿದೆ. ಇದನ್ನು ...ಜಕೀಯಪ್ರೇರಿತ ಎಂದು ಏಕಮುಖವಾಗಿ ತೀರ್ಮಾನಿಸಿರುವ ಸಂಪತ್ ಅವರ ಚಿಂತನೆ ಬಾಲಿಶವಾಗಿದೆ.


ಅವರು ತಮ್ಮ ಲೇಖನದಲ್ಲಿ ಸಾಹಿತಿಗಳು ತುರ್ತುಪರಿಸ್ಥಿತಿ ಸಂದರ್ಭದಲ್ಲಾಗಲಿ, ಗೋದ್ರಾ ಇತ್ಯಾದಿ ಘಟನೆಯ ...ಸಂದರ್ಭದಲ್ಲಾಗಲಿ ಪ್ರಶಸ್ತಿ ಮರಳಿಸಲಿಲ್ಲ ಎಂಬ ತಿಳಿವಳಿಕೆರಹಿತ ಪ್ರತಿಪಾದನೆ ಮಾಡಿದ್ದಾರೆ. ಬ್ರಿಟಿಷ್ ಆಡಳಿತದ ...ಸಾಮ್ರಾಜ್ಯಶಾಹಿ ಧೋರಣೆಯ ವಿರುದ್ಧ ಪ್ರತಿಭಟಿಸಿ ನೈಟ್‌ಹುಡ್ ಪ್ರಶಸ್ತಿ ಮರಳಿಸಿದ ಟ್ಯಾಗೋರರ ಹಾಗೂ ತುರ್ತು ...ಪರಿಸ್ಥಿತಿಯ ವೇಳೆ ಪದ್ಮಶ್ರೀ ಪ್ರಶಸ್ತಿ ಮರಳಿಸಿದ ಕಾರಂತರ ಉದಾಹರಣೆಗಳು ನಮ್ಮ ಮುಂದೆಯೇ ಇವೆ. ಅಲ್ಲದೇ ...ರ್ತು ಪರಿಸ್ಥಿತಿಯ ವೇಳೆಯಲ್ಲಿ ಪ್ರತಿಭಟಿಸಿ ನೌಕರಿಗಳನ್ನು ಕಳೆದುಕೊಂಡು, ತಿಂಗಳಾನುಗಟ್ಟಲೆ ಜೈಲುವಾಸ ಅನುಭವಿಸಿದ ...ದಿವಂಗತ ಚಂಪ ಅವರೂ ಸೇರಿದಂತೆ ಭಾರತದಾದ್ಯಂತ ನೂರಾರು ಬರಹಗಾರರು ಇದ್ದಾರೆ.

ಗೋದ್ರಾ, ಕಂಬಾಲಪಲ್ಲಿ ಹಾಗೂ ಕೈರ್ಲಾಂಜಿಯ ದುರ್ಘಟನೆಗಳನ್ನು ಚಳವಳಿ-ಹರತಾಳಗಳ ಮೂಲಕ ಸಾವಿರಾರು ...ಬರಹಗಾರರು ಆಯಾ ಕಾಲಕ್ಕೆ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಆ ಪೈಕಿಯ ಹೋರಾಟಗಳಿಗೆ ಹೋಲಿಸಿದರೆ ಪ್ರಶಸ್ತಿ ...ಮರಳಿಸುತ್ತಿರುವ ಇಂದಿನ ಕಾಲಘಟ್ಟದ ಈ ಚಳವಳಿಯು ಅತ್ಯಂತ ಕನಿಷ್ಠ ಮಟ್ಟದ ಪ್ರತಿಭಟನೆಯಾಗಿದೆ ಎಂಬುದು ...ನ ಅನಿಸಿಕೆ.

ಪ್ರಶಸ್ತಿಯನ್ನು ಮರಳಿಸಿಯೇ ಪ್ರತಿಭಟಿಸಬೇಕೆಂದೇನೂ ಇಲ್ಲ. ಅಲ್ಪಮೊತ್ತದ ಪ್ರಶಸ್ತಿಗಳನ್ನು ಮರಳಿಸಿದ ಮಾತ್ರಕ್ಕೆ ...ಯಾರೂ ಪ್ರಗತಿಪರ ಬರಹಗಾರರಾಗುವುದೂ ಇಲ್ಲ, ಪ್ರಶಸ್ತಿ ಮರಳಿಸದಿರುವುದು ಹೇಗೆ ಪ್ರತಿಗಾಮಿತನವಲ್ಲವೋ ...ಅಲ್ಪಮೊತ್ತದ ಪ್ರಶಸ್ತಿ ಮರಳಿಸುವುದರಿಂದ ಪ್ರಗತಿಪರರಾಗಿದ್ದೇವೆ ಎಂಬುದೂ ಒಂದು ಮೂರ್ಖತನ.

...ಹಾಗೆಯೇ ಇತಿಹಾಸಕಾರ ಎಡಪಂಥೀಯನಾಗಿರಲಿ ಅಥವಾ ಬಲಪಂಥೀಯನಾಗಿರಲಿ ...ಸ್ಥಿತಿಯನ್ನು ತನ್ನ ತಾತ್ವಿಕ ದೃಷ್ಟಿಕೋನಕ್ಕೆ ಅನುಗುಣವಾಗಿಯೇ ಅರ್ಥೈಸುತ್ತಾನೆ. ಈ ...ಶೈಲಿಯಲ್ಲಿ ಗಾಂಧೀಜಿಯವರಿಗೆ ಸೌಹಾರ್ದತೆ ಪ್ರತೀಕವಾಗಿ ಕಂಡ ಜಾತಿವ್ಯವಸ್ಥೆ ...ಅಂಬೇಡ್ಕರರಿಗೆ ಶೋಷಣೆಯ ಕೂಪವಾಗಿ ಕಂಡುಬಂದಿತು.

ಈ ಇತ್ಯಾದಿ ಇತ್ಯಾದಿ ತಾತ್ವಿಕ ಕಾರಣಗಳಿಗಾಗಿ ನಾನು ನಿಮ್ಮ ಕಾರ್ಯಕ್ರಮದಲ್ಲಿ ...ಪಾಲ್ಗೊಳ್ಳಲಾಗುತ್ತಿಲ್ಲ, ಕ್ಷಮಿಸಿ.



• ಆರಿಫ್ ರಾಜಾ

ಮಾನ್ಯರೆ..


ಬೆಂಗಳೂರು ಸಾಹಿತ್ಯ ಉತ್ಸವ 2015ರ ಕನ್ನಡ ಮತ್ತು ಸಾಹಿತ್ಯದ ಕುರಿತಾದ ಪ್ಯಾನೆಲ್ ಡಿಸ್ಕಷನ್ ಒಂದಕ್ಕೆ ನನ್ನನ್ನು ತಾವು ಆಹ್ವಾನಿಸಿದ್ದಿರಿ. ನನ್ನ ಪಾಲಿಗೆ ಅಕ್ಷರದ ಹಬ್ಬಗಳೆಂದರೆ ಅದು ಭಾಷೆಯೊಂದರ ಸಮಕಾಲೀನ ಚಲನಶೀಲನೆಯ ಪರಿಶೀಲನೆ, ಜನಸಮುದಾಯಗಳ ತವಕ-ತಲ್ಲಣಗಳಿಗೆ ಮುಖಾಮುಖಿಯಾಗಬೇಕಾದ ಸಾಹಿತ್ಯದ ಬದ್ಧತೆ- ಮತ್ತು ಆಳುವವರ್ಗದ ದಬ್ಬಾಳಿಕೆಗಳಿಂದ ಹೊಡೆತ ತಿಂದವರ ಜೊತೆ ನಿಲ್ಲಲು ವೇದಿಕೆಗಳು. ಸ್ವಾತಂತ್ರ್ಯಾನಂತರದ ಯಾವ ಕಾಲಘಟ್ಟದಲ್ಲಿಯೂ ಬರಹಗಾರರು ಮತ್ತು ಬರವಣಿಗೆಯು ಜನಸಾಮಾನ್ಯರಿಂದ ದೂರನಿಂತ ಉದಾಹರಣೆಗಳಿಲ್ಲ, ಸಮಾಜದಿಂದ ಹೊರತಾದ ಬರವಣಿಗೆಯು ಜೀವವಿರೋಧಿಯಾಗಿಯಷ್ಟೇ ಉಳಿದುಬಿಡುತ್ತದೆ ಎಂದು ನಾನು ನಂಬುತ್ತೇನೆ.

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲಿಗೆ ನಾನು ಒಪ್ಪಿಕೊಂಡಿದ್ದೆ. ನಂತರ ಕಾರ್ಯಕ್ರಮದ ಆಯೋಜಕರ ಬಗೆಗೆ ವಿವರಗಳಿಗೆಂದು ಒಂದಷ್ಟು ಓದಿಕೊಂಡಾಗ ಪ್ರೋಗ್ರಾಂನಲ್ಲಿ ಭಾಗವಹಿಸಬೇಕೆಂಬ ನನ್ನ ನಿರ್ಧಾರದ ಬಗ್ಗೆ ಇನ್ನೊಮ್ಮೆ ಆಲೋಚಿಸುವಂತಾಯಿತು. ಇತ್ತೀಚಿನ ಕೆಲ ತಿಂಗಳುಗಳಿಂದ ದೇಶದಲ್ಲಿನ ಅಸಹಿಷ್ಣುತೆಯನ್ನು ಪ್ರತಿಭಟಿಸಿ ಬರಹಗಾರರು, ಲೇಖಕರು, ಸಾಹಿತಿಗಳಿಂದ ಚಳವಳಿಯೋಪಾದಿಯಲ್ಲಿ ನಡೆಯುತ್ತಿರುವ ಪ್ರಶಸ್ತಿ ವಾಪಸಿ ಆಂದೋಲನವನ್ನು ಮೊದಲಿನಿಂದಲೂ ನಾನು ಬೆಂಬಲಿಸುತ್ತ ಬಂದವನು. ಒಂದು ದೇಶದೊಳಗೆ ಪ್ರಶ್ನೆಯೆತ್ತುವುದೇ ಅಪರಾಧ, ಕೆಳಜಾತಿಯವರು ಬದುಕಿರುವುದೇ ಅಪರಾಧ, ವೈಚಾರಿಕತೆಯನ್ನು ಮಾತನಾಡುವುದೇ ಅಪರಾಧ, ಏಕಮುಖಿ ಸಂಸ್ಕೃತಿಯನ್ನು ಒಪ್ಪದಿರುವುದೇ ಅಪರಾಧವೆಂಬ ಸರ್ವಾಧಿಕಾರವು ಹಬ್ಬುತ್ತಿರುವ ಹೊತ್ತಿನಲ್ಲಿ ಈ ಪ್ರಶಸ್ತಿ ವಾಪಸಿ ಆಂದೋಲನವು ಬರಲಿರುವ ಕೇಡುಕಿನ ಬಗ್ಗೆ ಎಚ್ಚರಿಕೆಯ ಗಂಟೆಯಾಗಿ ಹುಟ್ಟಿರುವುದು ಸ್ವಾಗತಾರ್ಹ.

ನನ್ನ ಗಮನಕ್ಕೆ ಬಂದಂತೆ ಬೆಂಗಳೂರು ಸಾಹಿತ್ಯೋತ್ಸವದ ಆಯೋಜಕರಲ್ಲಿ ಬಹಳಷ್ಟು ಮಂದಿಯು ಈ ಆಂದೋಲನವನ್ನು ಬೇರೆ ಬೇರೆ ಬಗೆಯ ತಪ್ಪುಗ್ರಹಿಕೆಯೊಳಗೆ ಹಿಡಿದು ಪ್ರಶಸ್ತಿ ವಾಪಸಾತಿ ಮಾಡಿದ ಬರಹಗಾರರು ಮತ್ತು ಸಾಹಿತಿಗಳ ನಡೆಯನ್ನು ಅವರಿಗಿಷ್ಟವಾಗುವ ಬಗೆಯಲ್ಲಿ ಖಂಡಿಸಿದ್ದಾರೆ. ಹೀಗೆ ಪ್ರತಿಭಟಿಸುವ ಹಕ್ಕು ಅವರಿಗೆ ಖಂಡಿತ ಇದೆ. ಇದನ್ನು ಸರಿತಪ್ಪಿನ ಕ್ರಮದೊಳಗೆ ನೋಡಲು ನನಗ್ಯಾವ ಅಧಿಕಾರವೂ ಇಲ್ಲ. ಆದರೆ ಈ ಪತ್ರದ ಮೊದಲಿಗೆ ವಿವರಿಸಿದಂತೆ ವ್ಯವಸ್ಥೆಯನ್ನು ನಡೆಸುವ ಪ್ರಭುತ್ವವನ್ನು ಮತ್ತು ದಬ್ಬಾಳಿಕೆಗಳ ವಿರುದ್ಧದ ಆಳುವವರ ಜಾಣಮೌನದ ಪರವಾಗಿ ನಿಲ್ಲುವುದು ಯಾವ ಬರಹಗಾರನಿಗೂ ಸಲ್ಲದ ನಡವಳಿಕೆ.

ಬರವಣಿಗೆ ಮತ್ತು ಸಾಹಿತ್ಯವು ಯಾವತ್ತು ಆಳುವವರ ಬ್ಯಾಂಡ್ ಬಾಜಾ ಬಾರಾತುಗಳ ಮೆರವಣಿಗೆಯ ಜೊತೆಗೆ ನಿಲ್ಲುತ್ತದೋ ಆವತ್ತು ಈ ಸಮಾಜ ಅವನತಿಗೊಳಗಾಗುತ್ತದೆ. ಇದಕ್ಕೆ ಬರೆಯುವವರೂ ಹೊಣೆಯಾಗುತ್ತಾರೆ. ಮೊದಲಿನಿಂದಲೂ ಈ ಬಾರಾತುಗಳಿಂದ ದೂರವುಳಿದಿರುವ ನನಗೆ ಆಳುವ ವರ್ಗದ ಪರವಾದ ನಿಲುವಿನ ಜೊತೆಯಿರುವ ಬೆಂಗಳೂರು ಸಾಹಿತ್ಯೋತ್ಸವದ ಕೆಲ ಆಯೋಜಕರೊಟ್ಟಿಗೆ ಗುರುತಿಸಿಕೊಳ್ಳುವುದು ಕಸಿವಿಸಿಯ ಸಂಗತಿ. ಅಲ್ಲದೆ, ದೇಶದ ಶ್ರೇಷ್ಠ ಇತಿಹಾಸಕಾರರನ್ನು ಖಂಡಿಸಿ ಬಲಪಂಥೀಯ ಮನಸ್ಸುಗಳು ಹೊರಡಿಸಿದ ಪ್ರಸ್ತಾಪ ಆರೋಪಗಳ ಪತ್ರಕ್ಕೆ ಕಾರ್ಯಕ್ರಮದ ಆಯೋಜಕರು ಸಹಿ ಮಾಡಿ ಜನವಿರೋಧಿ ಶಕ್ತಿಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಧೋರಣೆಗಳು ಮತ್ತು ನಿಲುವುಗಳು ಬೇರೆ ಇದ್ದರೂ ಗೆಳೆತನ ಸಾಧ್ಯ ಆದರೆ ಬರವಣಿಗೆಯ ಜಗತ್ತಿನಲ್ಲಿ ಬರೆಯುವವರು ನೊಂದು ಬಸವಳಿದು ಆತಂಕಕ್ಕೊಳಗಾಗಿ ತಮಗೆ ಸಂದ ಪ್ರಶಸ್ತಿ ಸಮ್ಮಾನಗಳನ್ನು ಹಿಂತಿರುಗಿಸುವಾಗ ಅವರನ್ನು ಖಂಡತುಂಡವಾಗಿ ಲೇಖನಗಳ ಅಕ್ಷರಗಳ ಮೂಲಕ ಹಿಂಸೆಗೊಳಪಡಿಸುವವರ ಜೊತೆಗೆ ಯಾವುದೂ ಅಸಾಧ್ಯ. ಬರೆಯುವವರ ಅಂತಃಕರಣದ ಆತಂಕವನ್ನೇ ಅರ್ಥಮಾಡಿಕೊಳ್ಳದವರು ಯಾವ ಸಾಹಿತ್ಯ, ಯಾವ ಬರವಣಿಗೆ, ಯಾವ ಉತ್ಸವದ ಮೂಲಕ ಜೀವಪರವಾದ ಏನನ್ನೂ ಅರ್ಥ ಮಾಡಿಕೊಳ್ಳಲಾರರು, ಮಾಡಿಸಲೂ ಆರರು. ಇದೆಲ್ಲ ಕಾರಣಗಳಿಗಾಗಿ ತಮ್ಮ ಆಹ್ವಾನಕ್ಕೆ ಮನಸಾರೆ ಧನ್ಯವಾದ ಹೇಳುತ್ತ ತಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಲು ನನಗೆ ಯಾವ ಬಗೆಯಲ್ಲಿಯೂ ಇಚ್ಛೆಯಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪ್ರೀತಿಯಷ್ಟೇ ಇರಲಿ.



• ದಯಾನಂದ ಟಿ.ಕೆ.

ಉತ್ತರ ಕನ್ನಡ ಮಾಂಸಾಹಾರಿಗಳು ಭಯೋತ್ಪಾದಕರೆಂದ ಹುಸಿ ಹಸಿರು ಸ್ವಾಮಿ


ಶಿರಸಿ ಸೀಮೆಯ ಹವ್ಯಕರ ಹುಸಿ ಹಸಿರು ಸ್ವಾಮಿ ಅದ್ಯಾಕೋ ಕೊಸರಾಡುತ್ತಿದ್ದಾನೆ! ಅಲ್ಲಿಗೆ ಹವ್ಯಕ ಬ್ರಾಹ್ಮಣರ ಮತ್ತೊಬ್ಬ ಮಠಾಧೀಶನೂ ದಿಕ್ಕು ತಪ್ಪಿದ ಸೂಚನೆಗಳು ಗೋಚರಿಸಲಾರಂಭಿಸಿದೆ. ರೇಪಿಸ್ಟ್ ರಾಘು ಸ್ವಾಮಿಯ ಪ್ರಬಲ ಪ್ರತಿಸ್ಪರ್ಧಿ ಎಂದೇ ಹಾರವರ ಕೇರಿಕೇರಿಗಳಲ್ಲಿ ಗುಪ್ತವಾಗಿ ಬಿಂಬಿತವಾಗಿರುವ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸ್ವಾಮಿ ಮನುಕುಲವನ್ನೇ ಮೂದಲಿಸುವ 'ಮಹಾಕಾರ್ಯಕ್ಕೆ' ಕೈಹಾಕಿದ್ದಾನೆ. ಮಾಂಸಾಹಾರಿಗಳು ಭಯೋತ್ಪಾದಕರು ಎಂಬ ಅಭೂತಪೂರ್ವ ಸಂಶೋಧನೆ ಸಾದರಪಡಿಸಿದ್ದಾನೆ! ತನ್ಮೂಲಕ ಆಹಾರ ಪದ್ಧತಿ ನೆಪವಾಗಿಟ್ಟುಕೊಂಡು ಸಮಾಜ ಒಡೆಯುವ ಪುರೋಹಿತಶಾಹಿ ಪರಾಕ್ರಮ ಪ್ರದರ್ಶಿಸುತ್ತಿದ್ದಾನೆ!!

ಸೋಗಲಾಡಿ ಸ್ವರ್ಣವಲ್ಲಿ ಸ್ವಾಮಿಗೆ 'ಹಸಿರು ಸ್ವಾಮಿ' ಎಂದು ಬಿರುದು ಬಾವಲಿ ಕೊಟ್ಟಿದ್ದು ಆತನ ಹವ್ಯಕ ಬ್ರಾಹ್ಮಣ ಬಳಗ. ಮಾಧ್ಯಮ ವಲಯದ ಮುಂಚೂಣಿಯಲ್ಲಿರುವ ಬ್ರಾಹ್ಮಣ ಸುದ್ದಿಗಾರರು ಗಂಗೂಸ್ವಾಮಿಯನ್ನು 'ಪರಿಸರ ಸ್ವಾಮೀಜಿ' ಎಂದು ಪ್ರಸಿದ್ಧಿ ಮಾಡಿದರು. ಈ ಅಡ್ಡ ಹೆಸರು ಗಂಗೂ ಸ್ವಾಮಿಗೆ ಸಂದರ್ಭದ ಪಿತೂರಿಯಿಂದ ಬಂದಿದ್ದೇ ಹೊರತು ಆತನ ಪರಿಸರ ಕಾಳಜಿ, ಬದ್ಧತೆ, ಅಧ್ಯಯನದಿಂದೇನೂ ಅಲ್ಲ. 1990ರ ದಶಕವದು. ಶಿರಸಿ-ಸಿದ್ಧಾಪುರ ಮತ್ತು ಯಲ್ಲಾಪುರ ತಾಲ್ಲೂಕುಗಳ ದಟ್ಟ ಹವ್ಯಕ ಜನವಸತಿ, ತೋಟ ಪಟ್ಟಿಯ ಬೇಡ್ತಿ ನದಿ ಕಣಿವೆಯಲ್ಲಿ ಜಲವಿದ್ಯುತ್ ಯೋಜನೆ ಸ್ಥಾಪಿಸುವ ಹುನ್ನಾರ ನಡೆದಿತ್ತು, ತನ್ನ ಶಿಷ್ಯಸಂಕುಲಕ್ಕೆ ಎದುರಾದ ಗಂಡಾಂತರ ಗುರು ಗಂಗುವನ್ನು ಎಚ್ಚರಿಸಿತ್ತು!


ಬೇಡ್ತಿ ಕೊಳ್ಳದ ಜನರ ಜೀವನ್ಮರಣದ ಪ್ರಶ್ನೆಯಾಗಿತ್ತು ಈ ಜಲವಿದ್ಯುತ್ ಯೋಜನೆ. ಹಾಗಾಗಿ ಕೊಳ್ಳದ ಜನರು ಕಿತ್ತೆದ್ದು ಹೋರಾಟಕ್ಕೆ ಅಣಿಯಾದರು. ಆತಂಕಿತ ಜನರು ಗಂಗೂ ಸ್ವಾಮಿಯನ್ನು ಮುಂದಿಟ್ಟುಕೊಂಡು ಬೇಡ್ತಿ ಕಣಿವೆಯಲ್ಲಿ ಐತಿಹಾಸಿಕ ಪಾದಯಾತ್ರೆ ನಡೆಸಿದರು. ಬೆಚ್ಚಿಬಿದ್ದ ಆಳುವ ಮಂದಿ ಯೋಜನೆ ನಿಲ್ಲಿಸಿದರು. ದೊಡ್ಡ ಕೀರ್ತಿ ಶಿಖರ ಗಂಗುಸ್ವಾಮಿ ಅನಾಯಾಸವಾಗಿ ಏರಿ ನಿಲ್ಲುವಂಥ ಸನ್ನಿವೇಶ ನಿರ್ಮಾಣವಾಗಿತ್ತು, ಬೇಡ್ತಿ ಯೋಜನೆ ತಡೆದು ನಿಲ್ಲಿಸಿದ ವೀರಾಧಿವೀರ, ಹಸಿರು ಸ್ವಾಮಿ, ಪರಿಸರ ಸ್ವಾಮಿ... ಎಂಬೆಲ್ಲ ಪರಿಸರ ಸಂಬಂಧಿ ಪ್ರಚಾರ-ಹೊಗಳಿಕೆ ಗಂಗೂ ಸ್ವಾಮಿಗೆ ಸಾಲುಸಾಲಾಗಿ ಒದಗಿಬಂತು...

ಒಂದೇ ಒಂದು ಹೋರಾಟದಿಂದ ಪರಿಸರ ಪ್ರೇಮಿ ಸ್ವಾಮಿ ಎಂಬ ಹೆಗ್ಗಳಿಕೆ ಹೊತ್ತ ಗಂಗೂ ಸ್ವಾಮಿ ಬೇಡ್ತಿ-ಅಘನಾಶಿನಿ ಜಲವಿದ್ಯುತ್ ಯೋಜನೆಗಳಿಗಿಂತಲೂ ಭಯಾನಕ-ಅನಾಹುತಕಾರಿ ಪರಿಸರ ನಾಶಕ ಸರ್ಕಾರಿ ಪ್ರಾಜೆಕ್ಟ್‌ಗಳು ಜಿಲ್ಲೆಗೆ ವಕ್ಕರಿಸಿದಾಗ ಅಷ್ಟು ಅರ್ಪಣಾಭಾವದಿಂದ ಆ ಚಳವಳಿಗಳಲ್ಲಿ ತೊಡಗಿಸಿಕೊಳ್ಳಲಿಲ್ಲ! ಬಹುಶಃ ಉತ್ತರ ಕನ್ನಡ ಜಿಲ್ಲೆಯ ಪರಿಸರ-ಪ್ರಕೃತಿ ಮೇಲೆ ಸರ್ಕಾರಿ ಯೋಜನೆಗಳು ಮಾಡಿದಷ್ಟು ಹಲ್ಲೆ ಬೇರೆಲ್ಲೂ ನಡೆದಿಲ್ಲ. ಉತ್ತರ ಕನ್ನಡವೆಂದರೆ ಒಂಥರಾ ಸರ್ಕಾರಿ ಯೋಜನೆಗಳ ಪ್ರಯೋಗಶಾಲೆ. ಆದರೆ ಬೇಡ್ತಿ ಮತ್ತು ಅಘನಾಶಿನಿ ಕೊಳ್ಳದಾಚೆಯ ಜಿಲ್ಲೆಯ ಪರಿಸರದ ಮೇಲಾದ ಬರ್ಬರ ದಾಳಿಗಳ್ಯಾವುದೂ ಗಂಗೂಸ್ವಾಮಿಯಲ್ಲಿ ಕಳವಳ ಮೂಡಿಸಲಿಲ್ಲ, ಹೋರಾಟಕ್ಕೆ ಹೊರಡುವ ಕೆಚ್ಚು ಕೆರಳಿಸಲಿಲ್ಲ, ಕಾರವಾರದ ಹಣಕೋಣದಲ್ಲಿ ಬರಲು ಅಣಿಯಾಗಿದ್ದ ಪ್ರಳಯಾಂತಕ ಕಲ್ಲಿದ್ದಲು ಸ್ಥಾವರದ ವಿರುದ್ಧ ಅಲ್ಲಿನ ಹಿಂದುಳಿದ ವರ್ಗದ ಜನರು ಕಷ್ಟ-ನಷ್ಟ-ನೋವು ಎದುರಿಸಿ ಹೋರಾಟ ಮಾಡುವಾಗ ಗಂಗೂ ಸ್ವಾಮಿಗದು ಕಾಣಿಸಲೇ ಇಲ್ಲ!!

ಇದು ಹಸಿರು ಸ್ವಾಮಿಯ ಪರಿಸರ ವೈರುಧ್ಯ! ಕಾಲಕ್ರಮೇಣ ಗಂಗೂ ಸ್ವಾಮಿಗೆ ಬ್ರಾಹ್ಮಣರ ಮುಳುಗಿಸುವ ಬೇಡ್ತಿ-ಅಘನಾಶಿನಿ ಯೋಜನೆ ಬಿಟ್ಟು ಬೇರ್ಯಾವುದೇ ಪರಿಸರಮಾರಕ ಯೋಜನೆಗಳ ಬಗ್ಗೆ ಕಾಳಜಿ ಇಲ್ಲವೆಂಬ ಪುಕಾರು ಎದ್ದಿತು! ವಿಪರ್ಯಾಸ ನೋಡಿ, ಕೈಗಾ ಅಣುಸ್ಥಾವರ ಯೋಜನೆ ವಿರುದ್ಧ ಉದ್ದುದ್ದ ಪ್ರವಚನ ಬಿಗಿಯುತ್ತಿದ್ದ ಗಂಗೂ ಸ್ವಾಮಿ ಅದೇ ಯೋಜನೆಯನ್ನು ಉದ್ಘಾಟಿಸಲೆಂದು ಕಾರವಾರಕ್ಕೆ ಅಂದಿನ ಸಂಘಪರಿವಾರದ ಪ್ರಧಾನಿ ವಾಜಪೇಯಿ ಭೇಟಿಗೆ ಹೋಗಿದ್ದರು. ಕೈಗಾಕ್ಕೆ ಹೋಗಿ ಗಂಗೂ ಸ್ವಾಮಿ ಪಿಎಂ ಸಾಹೇಬರ ಕಂಡು 'ಮಾತುಕತೆ' ನಡೆಸಿ ಬಂದಿದ್ದರು. ಉತ್ತರ ಕನ್ನಡದಲ್ಲಿ ಎಂತೆಂಥ ಪರಿಸರ ಹೋರಾಟ ನಡೆದು ಜನರು ಸಂಕಷ್ಟ-ಸಮಸ್ಯೆ ಅನುಭವಿಸಿದಾಗ ಅಲ್ಲೆಲ್ಲ ಈ ಸ್ವಯಂಘೋಷಿತ ಪರಿಸರ ಸ್ವಾಮಿ ಕಾಣಿಸಿಕೊಂಡಿದ್ದು ಅಷ್ಟಕ್ಕಷ್ಟೇ. ಈಗ ಮತ್ತದೇ ಬೇಡ್ತಿ ಕೊಳ್ಳದಲ್ಲಿ ಸ್ಥಾಪಿಸಲು ಉದ್ದೇಶಿತವಾದ ಕಿರು ವಿದ್ಯುತ್ ಯೋಜನೆಗಳ ವಿರೋಧಿ ಹೋರಾಟದ ಮುಂದಾಳತ್ವ ಗಂಗೂ ಸ್ವಾಮಿ ವಹಿಸಿಕೊಂಡಿದ್ದಾನೆ. ಯಥಾಪ್ರಕಾರ ಇದೂ ಹವ್ಯಕರಿಗೆ ಮಾರಕವಾದ ಯೋಜನೆಯೇ; ಗಂಗೂನ ಪರಿಸರವಾದಿ ಹೃದಯ ಸಹಜವಾಗಿ ಮಿಡಿಯುತ್ತಿದೆ.





ವಾಜಪೇಯಿ



ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸರಸ್ವತಿ

ಹಸಿರು ಸ್ವಾಮಿಯ ಆಷಾಢಭೂತಿತನ ಒಂದೆರಡಲ್ಲ. ಒಂದು ಎಕರೆ ಅಡಿಕೆ ತೋಟಕ್ಕಾಗಿ ಹತ್ತು ಎಕರೆ ಅರಣ್ಯ-ಪರಿಸರ ಹಾಳುಮಾಡುವ ಶಿಷ್ಯ ಕೋಟಿಯ ಗುರು ಈ ಗಂಗೂ ಸ್ವಾಮಿ! ಸ್ವರ್ಣವಲ್ಲಿ ಮಠದ ಹಲವು ಪ್ರತಿಷ್ಠಿತ ಶಿಷ್ಯೋತ್ತಮರು ಎಕರೆಗಟ್ಟಲೆ ಅರಣ್ಯ ಅತಿಕ್ರಮಿಸಿ ತೋಟ ಪಟ್ಟೇ ಮಾಡಿಕೊಂಡಿದ್ದಾರೆ. ತಾನೊಬ್ಬ ಪ್ರಶ್ನಾತೀತ ಪರಿಸರವಾದಿ, ಅಂತಾರಾಷ್ಟ್ರೀಯ ಖ್ಯಾತಿಯ ಹಸಿರು ಸರದಾರ, ವೃಕ್ಷಲಕ್ಷ ಆಂದೋಲನದ ರೂವಾರಿ ಎಂದೆಲ್ಲ ಒಣಪೋಸು ಕೊಡುವ ಅನಂತ ಹೆಗಡೆ ಆಶೀಸರ ಗಂಗೂಸ್ವಾಮಿಯ ಪರಿಸರ ಸಲಹೆಗಾರ. ಸದ್ರಿ ಸ್ವಾಮಿಯ ಆಚೀಚೆ ಈ ಅನಂತ ಹೆಗಡೆ ಸ್ವರ್ಣವಲ್ಲಿ ಮಠ ಕೃಪಾಪೋಷಿತ ಪರಿಸರ ಸಮಾರಂಭಗಳಲ್ಲಿ ಮತ್ತು ಬೇರೆ-ಬೇರೆ ಹಸಿರು ಸಭೆ-ಸಮಾವೇಶದಲ್ಲಿ ಠಳಾಯಿಸುತ್ತಿರುತ್ತಾನೆ. ಈ ಪರಿಸರ ವ್ಯಾಧಿಯೇ ಹತ್ತಾರು ಎಕರೆ ಅರಣ್ಯ ಕಬಳಿಸಿ-ಪರಿಸರ ನಾಶ ಮಾಡಿ ಸಮೃದ್ಧ ತೋಟ ಮಾಡಿಕೊಂಡಿದ್ದಾನೆ. ಅಷ್ಟೇ ಏಕೆ, ಸ್ವರ್ಣವಲ್ಲಿ ಸಂಸ್ಥಾನದ ವಿಸ್ತೀರ್ಣಕ್ಕಾಗಿ ಸ್ವಾಮಿ ಪರಿವಾರವೇ ಸೋಂದಾದ ಅರಣ್ಯ-ಕಾಡು ಆಪೋಷನ ಪಡೆದಿದೆ!!





ಅನಂತ ಹೆಗಡೆ ಆಶೀಸರ

ಯದ್ವಿ ಸರ್ಕಾರ ಕೋಟ್ಯಾಂತರ ರೂ. ಚರ-ಸ್ಥಿರ ಆಸ್ತಿಯ ಗೋಕರ್ಣ ದೇವಸ್ಥಾನ ಅನಾಮತ್ತು ಎತ್ತಿ ಸಗಣಿ ಸ್ವಾಮಿ ಜೋಳಿಗೆಯಲ್ಲಿಟ್ಟಾಗ ಸ್ವರ್ಣವಲ್ಲಿ ಸ್ವಾಮಿ ನಖಶಿಖಾಂತ ಉರಿದು ಬಿದ್ದಿದ್ದ; ಗೋಕರ್ಣಕ್ಕೆ ಕಲಿ ಪ್ರವೇಶವಾಗಿದೆ; ಪಾಯಸದಲ್ಲಿ ಕಲ್ಲು ಬಂದಿದೆ ಎಂದೆಲ್ಲ ಕನಲಿಹೋಗಿದ್ದ. ಅತ್ತ ರಾಘು ಮಾಣಿ ರಾಮಕಥೆ, ಕಾಮಕಥೆ, ಗೋಕಥೆ, ಕಾಮಮನ್ನ, ಗೋ ಉತ್ಪನ್ನ ಎಂದೆಲ್ಲ ತರಹೇವಾರಿ ಸುದ್ದಿ ಮಾಡುತ್ತಿದ್ದಾಗ ಸ್ವರ್ಣವಲ್ಲಿ ಗಂಗೂ ತಾನೂ ಜನಪ್ರಿಯನಾಗುವ ಸ್ಕೆಚ್ ಹಾಕಿಕೊಂಡಿದ್ದ. "ಅಡಿಕೆ ತೋಟಿಗರು ಸಾಲದ ಸೂಲದಲ್ಲಿ ಸಿಕ್ಕಿಬಿದ್ದಿದ್ದಾರೆ... ಅವರು ಸಹಕಾರಿ ಸಂಘಗಳಲ್ಲಿ ತೆಗೆದ ಆಸಾಮಿ ಸಾಲಮನ್ನಾ ಮಾಡಿ...." ಎಂದು ಕೂಗೆಬ್ಬಿಸಿದ್ದ. ಅಂದಿನ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಜತೆ ಸಖ್ಯವಿದ್ದ ಬೀದರ್‌ನ ಸಿಖ್ ಸಂತನ ಹಿಡಿದುಕೊಂಡು ಸ್ವಾಮಿ ಅಚ್ಚುಮೆಚ್ಚಿನ ಶಿಷ್ಯರು ಸರ್ಕಸ್ ಸಹ ನಡೆಸಿದ್ದರು. ಆದರೆ ಅದೆಲ್ಲ ಫ್ಲಾಫ್ ಆಗಿತ್ತು.

ಅಡಿಕೆಗೆ ಯೋಗ್ಯ ದರ ಸಿಗುತ್ತಿಲ್ಲ; ಆಸಾಮಿ ಸಾಲದ ಹೊರೆ ಹೆಚ್ಚಾಗಿದೆ. ತೋಟಿಗರು ಕಷ್ಟದಲ್ಲಿದ್ದಾರೆಂದು ಗಂಗೂ ಸ್ವಾಮಿ ಶೋ ಮಾಡುತ್ತಿರುವ ಸಂದರ್ಭದಲ್ಲೇ ಶಿರಸಿ ಸೀಮೆಯ ಬಾರ್‌ಗಳು ಮತ್ತು ಜೂಜಾಟದ ಕ್ಲಬ್‌ಗಳು ತುಂಬಿತುಳುಕುತ್ತಿವೆ; ಶಿರಸಿಯೊಂದರಲ್ಲೇ 15-20 ಹೆಂಡದ ಸಮಾರಾಧನೆಯ ಬಾರ್‌ಗಳಿದ್ದರೆ ಜೂಜಾಟದ ನಾಲ್ಕಾರು ಕ್ಲಬ್‌ಗಳಿವೆ. ಹಳ್ಳಿಗಳ ಹವ್ಯಕರ ಆಯ್ದ ಮನೆಗಳ ಮೆತ್ತಿನ (ಮಾಳಿಗೆ) ಮೇಲೆ ಇಸ್ಪೀಟಾಟ ಬಿರುಬೀಸಾಗಿ ನಡೆಯುತ್ತಿದೆ. ಇಲ್ಲೆಲ್ಲ ಗಿರಾಕಿಗಳು ಯಾರು ಗೊತ್ತಾ? ಗಂಗೂ ಸ್ವಾಮಿಯ ಅಡಿಕೆ ತೋಟಿಗ ಶಿಷ್ಯ ವರ್ಗದವರೇ ದೊಡ್ಡ ಗ್ರಾಹಕರು. ಅಡಿಕೆ ಬೆಲೆ ಬಿದ್ದಿದ್ದರೆ ಆಸಾಮಿ ಸಾಲ ಭಾರವಾಗಿದ್ದರೆ ಚೈನಿಬಾಜಿ ಇಷ್ಟು ಬಿಂದಾಸಾಗಿ ನಡೆಯುತ್ತಿತ್ತಾ? ಇದು ಗಂಗೂನ ದಿವ್ಯದೃಷ್ಟಿಗೇಕೆ ಕಾಣಿಸುತ್ತಿಲ್ಲ? ಜನಪ್ರಿಯತೆಗಾಗಿ ಅಮಾಯಕರನ್ನು ದಿಕ್ಕು ತಪ್ಪಿಸುವುದು ತರವೇ?

ಶಿಷ್ಯಸಮೂಹವನ್ನು ವ್ಯಸನದಿಂದ ಹೊರತಂದು ಸ್ವಸ್ಥ ಸಮಾಜ ಸ್ಥಾಪನೆಗೆ ಪ್ರಯತ್ನಿಸಬೇಕಿದ್ದ ಸ್ವಾಮೀಜಿ ಹೆಚ್ಚೆಚ್ಚು ಮಕ್ಕಳನ್ನು ಹೆತ್ತು ಹಿಂದೂ ಸಮಾಜ ಉದ್ಧಾರ ಮಾಡಿ, ಭಗವದ್ಗೀತೆ ಪಠಿಸಿ ಪಾವನರಾಗಿ ಎಂಬ ಅಭಿಯಾನ ಶುರು ಹಚ್ಚಿಕೊಂಡಿರುವುದು ತಮಾಷೆಯಾಗಿದೆ. ಬಿಜೆಪಿ ಸರ್ಕಾರದ ಕಾಲದಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಭಗವದ್ಗೀತೆ ಪ್ರಚಾರಕ್ಕೆ ಹೊರಟು ನೆಗೆಟಿವ್ ಸುದ್ದಿ ಶೂರನಾಗಿದ್ದ ಗಂಗೂ ಸ್ವಾಮಿ ಇವತ್ತಿಗೂ ಹಿಂದೂ ಮುಂದಾಳುಗಳ ಹಿಡಿತದ ಶಾಲೆಗಳಲ್ಲಿ, ಊರುಗಳಲ್ಲಿ ಗೀತಗಾಯನ ನಡೆಸುತ್ತಿದ್ದಾನೆ. ರಾಘು ಕಚ್ಚೆ ಹರುಕು ಕಸರತ್ತಿನಿಂದ ಹೆಸರು ಕೆಡಿಸಿಕೊಂಡಿರುವ ಸಂದರ್ಭದ ಲಾಭ ಪಡೆದು ಸ್ವರ್ಣವಲ್ಲಿ ಮಠದ ಸೀಮೆ ಹಿಗ್ಗಿಸಿಕೊಳ್ಳುವ ಹಿಡನ್ ಅಜೆಂಡಾ ಇದಾಗಿದೆ. ಗೀತೆ ಹಿಡಿದು ಹೊರಟರೆ ರಾಘುನ ಮಣಿಸಬಹುದೆಂಬ ಲೆಕ್ಕಾಚಾರ ಗಂಗೂ ಸ್ವಾಮಿಯದು. ಈ ರಾಘು-ಗಂಗೂ ಗುದ್ದಾಟದಲ್ಲಿ ಹವ್ಯಕರು ಮಾತ್ರ ಗೊಂದಲಗೊಂಡು ಕಂಗಾಲಾಗಿದ್ದಾರೆ; ಜತೆಗೆ ಶೂದ್ರ ಸಮೂಹವನ್ನೂ ಗೀತೆ ತೋರಿಸಿ ದಾರಿ ತಪ್ಪಿಸಲಾಗುತ್ತಿದೆ.

ಇಂಥ ಇತಿಹಾಸ-ಭೂಗೋಳ ಕಾವಿ ಜೀವಿ ಗಂಗೂಸ್ವಾಮಿ ಗೋಮಾಂಸ ಸೇವನೆ ವಿವಾದದಿಂದ ಕಲುಷಿತಗೊಂಡಿರುವ ವಾತಾವರಣದ ದುರ್ಲಾಭ ಪಡೆದು ಫೇಮಸ್ ಹಿಂದೂವಾದಿ ಸಂತನಾಗುವ ಭರದಲ್ಲಿ ಅಪದ್ಧ ನುಡಿದಿದ್ದಾನೆ! ಅದು ಆತನ ಬಳಗವೇ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಹಿಂದೂ ವಿಚಾರಧಾರರ 'ಸಂಕೀರಣ'. ಶಿರಸಿಯ ಬೈರುಂಬೆ ಎಂಬಲ್ಲಿ ಹಿಂದೂ ಸಂಸ್ಕೃತಿ ಜತೆ ಗಿಡ-ಮರಗಳ ಸಮೀಕರಿಸಿ ನೋಡುವ ಕಾವಿ ಕರಾಮತ್ತು ಅದಾಗಿತ್ತು, ಎಲ್ಲೆಲ್ಲಿಂದಲೋ ಪರಿಸರ ಪ್ರೀತಿಯ ಒಂದಿಷ್ಟು ಜನ ಸೇರಿದ್ದರು. ಅವರೆದುರು ಗಂಗೂ ಸ್ವಾಮಿ ಮಾಂಸಾಹಾರಿಗಳು ನೀಚರು; ಸಸ್ಯಾಹಾರಿಗಳು ಶ್ರೇಷ್ಠರೆಂದು ಪ್ರವಚನ ಮಾಡಿದ್ದಾನೆ. ಗಂಗೂ ಸ್ವಾಮಿಯ ಸನಾತನ ಸಿದ್ಧಾಂತದಂತೆ ಸಸ್ಯಾಹಾರ ಪ್ರಕೃತಿಯಾದರೆ ಮಾಂಸಾಹಾರ ವಿಕೃತಿ. ಜಾಗತಿಕವಾಗಿ ಭಯೋತ್ಪಾದನೆ ಮಾಡುತ್ತಿರುವವರೆಲ್ಲ ಮಾಂಸಾಹಾರಿಗಳೇ ಆಗಿದ್ದಾರೆ; ಮಾನವ ತಲೆ ತೆಗೆಯುವಷ್ಟರಮಟ್ಟಿಗೆ ವಿಕೃತಿ ಬೆಳೆಯಲು ಮಾಂಸಾಹಾರವೇ ಕಾರಣ. ಜಗತ್ತಿನ ಎಲ್ಲರನ್ನೂ ಸಸ್ಯಾಹಾರಿಗಳನ್ನಾಗಿ ಮಾ[illegible] ಆತಂಕವಾದ ನಿಂತುಹೋಗುತ್ತದೆಂದು ಗಂಗೂ [illegible] ಬೇಕಾಬಿಟ್ಟಿಯಾಗಿ ನಾಲಿಗೆ ಹರಿದಾಡಿಸಿದ್ದಾನೆ !

ಇಷ್ಟಕ್ಕೇ ಸ್ವರ್ಣವಲ್ಲಿ ಸ್ವಾಮೀಜಿಯ ವಿ[illegible] ಬಹುಸಂಖ್ಯಾತರ ಆಹಾರವನ್ನು ನಿಕೃಷ್ಟವಾಗಿ ಹೀಯಾಳ[illegible] ಲಹರಿ ನಿಂತಿಲ್ಲ, ನಾಡಿನ ಬುದ್ಧಿಜೀವಿಗಳು ಮಾಂಸಾ[illegible] ಸಹಮತ ವ್ಯಕ್ತಪಡಿಸುವುದು ತಪ್ಪಂತೆ; ಇದ[illegible] ಜಾಗತಿಕವಾಗಿ ಭಯೋತ್ಪಾದನೆಯಲ್ಲಿ ತೊಡಗಿ[illegible] ಮಾಂಸಾಹಾರಿ ಉಗ್ರರಿಗೆ ಬೆಂಬಲಿಸಿದಂತೆ ಆಗುತ್ತ[illegible] ಕೆಲವು ಬುದ್ಧಿಜೀವಿಗಳು ವೇದಕಾಲದಿಂದ[illegible] ಮಾಂಸಾಹಾರ ಮಾಡಲಾಗುತ್ತೆಂದು ಹೇಳಿರುವ[illegible] ಯಾವುದೇ ಆಧಾರ ಇಲ್ಲವಂತೆ. ಸಸ್ಯಾಹಾರ ಅವ[illegible] ಮಾಡಿ ಮಾಂಸಾಹಾರಕ್ಕೆ ಪ್ರಾಧಾನ್ಯತೆ ಕೊಡು[illegible] ಬುದ್ಧಿಜೀವಿಗಳ ನಡೆ ಖಂಡನಾರ್ಹವಂತೆ. ಇದು ಜಾ[illegible] ಆತಂಕವಾದಕ್ಕೆ ಪೂರಕವಾಗಿ ಕಂಡಿದೆ ದೈವಾಂಶಸಂ[illegible] ಗಂಗೂ ಸ್ವಾಮೀಜಿಗೆ!!

ಬುದ್ಧಿಜೀವಿಗಳಿಂದ ತನ್ನಂಥ ಕಾವಿಜೀ[illegible] ಬೂಟಾಟಿಕೆ ಬಯಲಾಗುತ್ತದೆಂಬ ನಂಜು ಗ[illegible] ಮಾತಿನಲ್ಲಿ ಅಡಗಿದೆ. ಯಾವುದೇ ವೈದ್ಯಕೀಯ ಅ[illegible] ವೇದಾಂತದ ಆಧಾರ-ಪುರಾವೆ ಇಲ್ಲದೆ ಹಿಂದೂತ್ವ [illegible] ಗುರಿಯಿಂದ ಒದರಾಡಿರುವ ಗಂಗೂ ಸ್ವಾ[illegible] ಮಾತುಗಾರಿಕೆಯಲ್ಲಿ ಬ್ರಾಹ್ಮಣಿಕೆ ಮಸಲತ್ತಿರು[illegible] ಎಂಥವರಿಗೂ ಗೋಚರಿಸುತ್ತದೆ. ಮಾನವ [illegible] ಬೆಳವಣಿಗೆ, ಪರಿಸರ, ಬದುಕಿನ ರೀತಿ-ನೀತಿಯ ಆಧಾ[illegible] ಆಹಾರ ಪದ್ಧತಿ ಬೆಳೆದುಬಂದಿದೆ. ಆದಿಕಾಲದಲ್ಲಿ ಪ್ರಾ[illegible] ಮನುಷ್ಯ ಆಹಾರವಾಗಿತ್ತು, ಆ ವಂಶಾವಳಿಯವರೇ [illegible] ಜನರೆಂಬ ಸರಳ ಸತ್ಯ ಗಂಗೂನ ಹಿಂದೂತ್ವದ ಪೊರ[illegible] ಕಂಗಳಿಗೆ ಅದ್ಹೇಗೆ ಕಾಣಿಸೀತು?


ಭಾರತೀಯ ಸನಾತನ ಸಂಸ್ಕೃತಿಯ ಕ[illegible] ಪರಂಪರೆಯಲ್ಲಿ ಹಾಲು-ತುಪ್ಪ ಸೇವಿಸುತ್ತಾ, ಮ[illegible] ಅನ್ನ ಸುರಿಯುತ್ತ ಬೆಳೆದ ಅದೆಷ್ಟು ಜನ ಸಮಾಜ[illegible] ರಾಗಿಲ್ಲ? ಅತ್ಯಾಚಾರಿ-ಅನಾಚಾರಿಗಳಾಗಿಲ್ಲ? ರಾಘು [illegible] ಮಾಂಸಾಹಾರ ಮಾಡಿದ್ದರಿಂದಲೇ ಅಸಂಖ್ಯ ಹೆ[illegible] ಅತ್ಯಾಚಾರ ಮಾಡಿದನಾ? ಶುದ್ಧ ಸಸ್ಯಾಹಾರಿ [illegible] ಅದೆಷ್ಟೋ ಕಾವಿಗಳು ಹೊಡಿ-ಬಡಿ-ಕೊಚ್ಚು-ಕೊಲ್ಲು [illegible] ಪ್ರಸಾರಕರಾಗಿಲ್ಲ? ಆಹಾರದಿಂದ ಯಾರೂ [illegible] ಶ್ರೇಷ್ಠರಾಗಲು ಸಾಧ್ಯವಿಲ್ಲ, ವ್ಯವಹಾರ-ವಿಚಾರ ಸರಿ[illegible] ಮನುಷ್ಯತ್ವವಿದ್ದರಷ್ಟೇ ಆತಂಕವಾದ ನಿಲ್ಲುತ್ತದೆ. [illegible] ಗಂಗೂ ಸ್ವಾಮಿಯ ಶಿಷ್ಯರಾದ ಅದೆಷ್ಟು ಹ[illegible] ಮಾಂಸಾಹಾರ ಸೇವಿಸುತ್ತಿಲ್ಲ? ಶಿರಸಿ ಸೀಮೆಯ ಬಾ[illegible] ಮಾರುವೇಶದಲ್ಲಿ ಗಂಗೂ ಸ್ವಾಮಿ ಪ್ರವೇಶಿಸಿದರೆ ಜನಿ[illegible] ಮಾಂಸಾಹಾರ ಕಣ್ಣಾರೆ ಕಾಣಬಹುದು! [illegible] ಸಾತ್ವಿಕರಾಗಿಸುವ ಮಂತ್ರದಂಡ ಗಂಗೂನಲ್ಲಿ ಇಲ್ಲ?

ಇದೆಲ್ಲಕ್ಕಿಂತ ಹೆಚ್ಚಾಗಿ ಸ್ವರ್ಣವಲ್ಲಿ [illegible] ತಲತಲಾಂತರದಿಂದ ಶೂದ್ರ ಸಮೂಹದ ರಾಮ ಕ್ಷ[illegible] (ಶೇರುಗಾರರು) ನಡೆದುಕೊಂಡು ಬಂದಿದ್ದಾರೆ. [illegible] ಪಕ್ಕಾ ಮಾಂಸಾಹಾರಿಗಳು. ಹಾಗಿದ್ದರೆ ಈ ಶೇ[illegible] ಶಿಷ್ಯರು ನೀಚರೆಂದು ಗಂಗೂ ಸ್ವಾಮಿ ಭಾವಿ[illegible] ಈ ಕೀಳುಜನರ ಕಾಣಿಕೆ-ದೇಣಿಗೆ-ಸಮ್ಮಾನ-ನ[illegible] ಇಲ್ಲವಾ ಮಡಿ-ಮೈಲಿಗೆ? ಬಹುಸಂಖ್ಯಾತರ [illegible] ಅವಶ್ಯವಾದ ಆಹಾರಕ್ಕೆ ಕಲ್ಲು ಹಾಕುವ, ಆ [illegible] ಒಳಿತು-ಕೆಡಕುಗಳ ಬಗ್ಗೆ ಸಾರಾಸಾರ ಯೋ[illegible] ಮನಸೋಯಿಚ್ಛೆ ಕಾವಿ ತೊಟ್ಟ ಸರ್ವಸಂಗ [illegible] ಮಾತಾಡೋದು ಪ್ರಕೃತಿಯಾ? ಕಾವಿಯ[illegible] ವಿಕೃತಿಯಾ?

ಸಮಾಜದ ಶಾಂತಿ-ಸಹಬಾಳ್ವೆ ಮೂಲ ಉದ್[illegible] ಬೇಕಿದ್ದ ಕಾವಿ ಸ್ವಾಮಿ ಆಹಾರದ ಹೆಸರಲ್ಲಿ ಸ[illegible] ಮನಸ್ಸುಗಳನ್ನು ಮುರಿಯುವ ಬ್ರಾಹ್ಮ[illegible] ಸರ್ವಶ್ರೇಷ್ಠರೆಂದು ಹೇಳಿ ಅಬ್ರಾಹ್ಮಣರ ಹೀಯಾಳಿ[illegible] ಅಕ್ಷಮ್ಯವೇ ಸರಿ. ಇದು ಪ್ರಕೃತಿ ನಿಯಮಕ್ಕೆ ವಿರು[illegible] ಪಾಠ ಸ್ವರ್ಣವಲ್ಲಿಯ ಸೋಗಲಾಡಿ ಸ್ವಾಮಿಗೆ [illegible] ಕಲಿಸುವ ಕಾಲ ಬಂದಿದೆ!!

■ ಶುದ್ದೋ[illegible]

ಮಾಂಟೋನ 'ಮಿಶ್ಟೇಕ್' ಅನ್ನು ದಯವಿಟ್ಟು 'ಕರೆಕ್ಷನ್' ಮಾಡಬೇಡಿ



ಹರೀಶ್ ಪೂಜಾರಿ

ಸಂಪಾದಕರಿಗೆ ಪತ್ರ

ಪತ್ರಿಕೆಯು ಕಳೆದ ವಾರದ ಸಂಚಿಕೆಯಲ್ಲಿ ...ವಾಗಿರುವ ನನ್ನ ಲೇಖನದ ಶೀರ್ಷಿಕೆ 'ಬಂಟ್ವಾಳದಲ್ಲಿ ... ಮಿಸ್ಟೇಕ್' ಎಂದು ಅಚ್ಚಾಗಿದೆ. ನಾನು ಲೇಖನದ ...ಕೆ ಮತ್ತು ಇತರ ಕಡೆಗಳಲ್ಲಿ ಮಿಶ್ಟೇಕ್ ಎಂದು ...ಚ್ಚಿಸಿದ್ದೆ. ಅದು ಮಾಂಟೋನ ಸುಪ್ರಸಿದ್ಧ ಕಿರು ...ಾಂದರ ಇಂಗ್ಲಿಷ್ ಅನುವಾದದ ಶೀರ್ಷಿಕೆ. ಮಾಂಟೋ ...ವಿನಲ್ಲಿ ಬರೆದ ತನ್ನ ಈ ಕತೆಗೆ 'ಸಾರಿ' (sorry) ... ಶೀರ್ಷಿಕೆ ಕೊಟ್ಟಿದ್ದಾನೆ. ಆ ಕತೆಯಲ್ಲಿ ಚಾಕು ...ವ ತಾನು ಹೊಟ್ಟೆ ಸೀಳಿದವನತ್ತ ಕಣ್ಣು ಹಾಯಿಸಿ ... ಛೀ, ಛೀ... ಮಿಶ್ಟೇಕ್ ಹೋ ಗಯಾ" ಎಂದು ...ಿಸುತ್ತಾನೆ. ಕತೆಯ ಇಂಗ್ಲಿಷ್ ಅನುವಾದದಲ್ಲೂ ಆ ಮಿಶ್ಟೇಕ್ ಎಂದೇ ಅಚ್ಚಾಗಿದೆ. ಯಾರು ಏನು ಸಹ ...ಲ್ಲದ ಅಪರಿಚಿತನೊಬ್ಬನನ್ನು ಕತೆಯಲ್ಲಿ ಕೊಂದೇ ...ವವ ರಾಜಕೀಯ ಮುಖಂಡನಲ್ಲ; ಧರ್ಮಗುರುವೂ ಅಲ್ಲ; ಸಾಮಾಜಿಕ ಧುರೀಣನೂ ಅಲ್ಲ, ಅವನೊಬ್ಬ ಯಃಕಶ್ಚಿತ್ ಮನುಷ್ಯ; ಸಾಮಾನ್ಯರಲ್ಲಿ ಸಾಮಾನ್ಯ. ಮಾಂಟೋ ತನ್ನ ಕತೆಯಲ್ಲಿ ಕೋಮು ಹಿಂಸೆಯ ಈ ವಿಲಕ್ಷಣ ವೈಪರೀತ್ಯವನ್ನು ಇಷ್ಟು ಭಾರವಾದ ಶಬ್ದಗಳಲ್ಲಿ ಹೇಳುವುದಿಲ್ಲ, ಮಿಶ್ಟೇಕ್ ಎಂಬ ಶಬ್ದದ ದೇಸೀ ಉಚ್ಚಾರದ ಮೂಲಕ ಅದನ್ನು ಧ್ವನಿಸುತ್ತಾನೆ. ತಾನೇ ಕೈಯಾರೆ ಮಾಡಿದ ಕೊಲೆಯನ್ನು ಆ ಮನುಷ್ಯ ಅದೊಂದು ಪ್ರಮಾದ, 'ಮಿಶ್ಟೇಕ್' ಎಂದು ಚಿಲ್ಲರೆಗೊಳಿಸುವುದು ಕೋಮು ಹಿಂಸೆಯ ಕ್ಷುದ್ರತೆ ಹಾಗೂ ಸಂವೇದನಾ ಶೂನ್ಯತೆಯನ್ನು ಬಿಂಬಿಸುತ್ತದೆ. ಮಿಶ್ಟೇಕ್ ಎಂಬ ಶಬ್ದಪ್ರಯೋಗ ಮಾಂಟೋನ ಈ ಕತೆಯ ಅವಿಭಾಜ್ಯ ಅಂಗವಾಗಿದೆ.

ನೀವು ಈ ಮಿಶ್ಟೇಕ್ ಅನ್ನು ಮಿಸ್ಟೇಕ್ ಎಂದು ಸರಿಪಡಿಸಿಕೊಂಡದ್ದು ನನಗೆ ಮಾಂಟೋನ ಇನ್ನೊಂದು ಖ್ಯಾತ ಕಿರುಕತೆ 'ಇಸ್ಲಾಹ್'ವನ್ನು ನೆನಪಿಸುತ್ತದೆ. (ಇಸ್ಲಾಹ್ ಎಂಬ ಉರ್ದು ಶಬ್ದದ ಅರ್ಥ ಕೂಡ ಸರಿಪಡಿಸುವುದು.) ಆ ಕತೆಯ ಒರಟು ಅನುವಾದ ಹೀಗಿದೆ.

'ಯಾರು ನೀನು?'

'ನೀವು ಯಾರು?'

'ಹರ ಹರ ಮಹಾದೇವ್. ಹರ ಹರ ಮಹಾದೇವ್.'

'ಹರ ಹರ ಮಹಾದೇವ್. ಹರ ಹರ ಮಹಾದೇವ್.'

'ನೀನು ನಮ್ಮವ ಎಂದು ಹೇಳುವುದಕ್ಕೆ ಆಧಾರವೇನು?'

'ನನ್ನ ಹೆಸರು ಧರಮ್‌ಚಂದ್.'

'ಅದು ಸಾಲದು.'

'ನಾಲ್ಕೂ ವೇದಗಳಲ್ಲಿ ಏನು ಬೇಕಾದರೂ ಕೇಳಿ, ಹೇಳುತ್ತೇನೆ.'

'ನಮಗೆ ಅದೆಲ್ಲ ಗೊತ್ತಿಲ್ಲ, ನೀನು ನಮ್ಮವ ಎನ್ನಲು ನಮಗೆ ಆಧಾರ ಬೇಕು.'

'ಏನು? ಏನು ಬೇಕು?'

'ಎಲ್ಲಿ ನಿನ್ನ ಪ್ಯಾಂಟ್ ಬಿಚ್ಚು.'

ಅವನು ಪ್ಯಾಂಟ್ ಬಿಚ್ಚಿದ್ದಾಗ "ಅವನನ್ನು ಕೊಲ್ಲಿ" ಎಂಬ ಕೂಗೆದ್ದಿತು.

'ಸ್ವಲ್ಪ ತಡೆಯರಿ; ಪ್ಲೀಸ್. ನಾನು ನಿಮ್ಮವನೆ, ನಿಮ್ಮ ಸೋದರನ ಹಾಗೆ; ದೇವರಾಣೆಗೂ ನಾನು ನಿಮ್ಮ ಸೋದರ.'

'ಹಾಗಿದ್ದರೆ ನಿಂದು ಅದು ಯಾಕೆ ಹಾಗೆ?'

'ನಾನು ಹಾದು ಬರುವ ಏರಿಯಾದಲ್ಲಿ ಅವರದ್ದೇ ಕಾರುಬಾರು. ನಾನು ನನ್ನ ಜೀವ ಉಳಿಸಿಕೊಳ್ಳಲು ನಾನು ಹಾಗೆ ಮಾಡಿಸಲೇಬೇಕಾಯಿತು. ಇದೊಂದೇ ಮಿಸ್ಟೇಕ್. ನನ್ನದು ಉಳಿದ ಎಲ್ಲಾ ಸರಿಯಾಗಿದೆ.'

ಅವನ ಆ ಮಿಸ್ಟೇಕ್, ಜೊತೆಗೆ ಅವನನ್ನು ಸಹ ಉಡಾಯಿಸಿ ತೆಗೆಯಲಾಯಿತು.

ಮಾಂಟೋನ ಕತೆಗಳಲ್ಲಿ ಹಿಂಸೆ ನಡೆಸುವ ಸಾಮಾನ್ಯ ಜನ ಅದರಿಂದಾದ ರಕ್ತಪಾತ, ಸಾವುನೋವುಗಳನ್ನು ಕಣ್ಣಾರೆ ನೋಡುತ್ತಾರೆ; ಅದರ ಭೀಕರತೆಯನ್ನು ಎದುರಿಸಲಾರದೆ ಮಿಶ್ಟೇಕ್, ಸಾರಿ ಇತ್ಯಾದಿ ಮಾತುಗಳಲ್ಲಿ ಅದನ್ನು ತೇಲಿಸಿಬಿಡುತ್ತಾರೆ. ಆದರೆ ಆ ಹಿಂಸೆಯ ಕಾರಣ ಪುರುಷರಾಗಿರುವ ರಾಜಕೀಯ, ಧಾರ್ಮಿಕ ನೇತಾರರು ಹಿಂಸೆಯಲ್ಲಿ ನೇರವಾಗಿ ಭಾಗವಹಿಸುವುದಿಲ್ಲ, ಅದರ ಪರಿವೆಯೇ ಅವರಿಗಿರುವುದಿಲ್ಲ, ಹಾಗಾಗಿ ಅವರನ್ನು ಆತ್ಮಸಾಕ್ಷಿಯೂ ಕಾಡುವುದಿಲ್ಲ. ಮಾಂಟೊ ಕೋಮುಹಿಂಸೆಯ ಈ ವಿಪರ್ಯಾಸವನ್ನು ನಮಗೆ ಕಾಣಿಸುವುದು ತನ್ನ ವಿಶಿಷ್ಟ ಶಬ್ದ ಪ್ರಯೋಗಗಳ ಮುಖಾಂತರ.



ಮಾಂಟೋ ತನ್ನ ಕತೆಗಳಲ್ಲಿ ಉರ್ದು ಭಾಷೆಯನ್ನು ಅದರ ಅರ್ಥ, ಲಯ, ಧ್ವನಿ, ಶ್ಲೇಷೆ, ದ್ವಂದ್ವಾರ್ಥಗಳೆಲ್ಲದರ ಜೊತೆ ದುಡಿಸಿಕೊಳ್ಳುತ್ತಾನೆ. ಅವನ ಕೆಲವು ಕತೆಗಳನ್ನು ಅನುವಾದಿಸುವುದಂತೂ ಒಂದು ದುಸ್ಸಾಹಸವೇ ಸರಿ. ಹಾಗಾಗಿ ಅವನ ಕತೆಗಳ ಮೂಲ ಶಬ್ದಗಳನ್ನು ಅವು ಇರುವ ಹಾಗೆಯೇ ಸಾಧ್ಯವಿದ್ದಷ್ಟು ಮಟ್ಟಿಗೂ ಅನುವಾದದಲ್ಲಿಯೂ ಉಳಿಸಿಕೊಳ್ಳುವುದು ಅಗತ್ಯ.

■ ಜಿ.ರಾಜಶೇಖರ್

ದ್ದರಾಮಯ್ಯನಿಗೆ ಒಂದು ಮಾತೇಳ್ತಿರಾ ಸಾರ್!

"ಅದೊಂದು ಕಾಲದಲ್ಲಿ ಈ ಸಮಾಜ ನಮ್ಮನ್ನು ...ಸುತ್ತಿತ್ತು. ಆದರೆ ನಾವು ಉತ್ತರಿಸಲು ಹೋಗಲಿಲ್ಲ. ...ಟೀಕೆಯನ್ನು ಸಹಿಸಿಕೊಂಡೆವು. ಗಾಂಧಿ ಕೊಂದವರೆಂದು ...ಿದರು. ಆದರೂ ನಾವು ಬಾಯಿಬಿಡಲಿಲ್ಲ, ಆದರೀಗ ...ಗಿದೆ, ಸಂಘ ಪರಿವಾರದ ಶ್ರಮದಿಂದ ಎಡಪಂಥೀಯರ ...ಗಳಿಗೆಲ್ಲಾ ನಮ್ಮ ಸಮಾಜವೇ ಉತ್ತರ ಕೊಡುತ್ತಿದೆ. ...ಥದೊಂದು ಪರಿಶ್ರಮಕ್ಕೆ ನಾವು ಇಷ್ಟು ದಿನ ...ಮಬೇಕಾಯ್ತು, ಇನ್ನ ನಮ್ಮ ಕೆಲಸ ತುಂಬ ಸರಾಗವಾಗಿ ...ಯುತ್ತವೆ. ಬರಲಿರುವ ದಿನಗಳು ಉಜ್ವಲವಾಗಿವೆ."

...ಥಹದೊಂದು ಭಾಷಣ ಸಂಘ ಪರಿವಾರದ ಬೈಟಕ್ಕಿನಲ್ಲಿ ...ರವಾಗುತ್ತಿದೆಯಂತಲ್ಲಾ, ಚೆಡ್ಡಿಗಳ ಈ ಅಭಿಪ್ರಾಯ ..., ಅವರಷ್ಟು ನಿಂದನೆಯನ್ನು ಸಹಿಸಿಕೊಂಡವರಿಲ್ಲ, ಮನೆ ...ರು ಎಂತಹ ನಿಂದನೆಯನ್ನು ಕೂಡ ಸಹಿಸಿಕೊಳ್ಳಬಲ್ಲರು. ...ದರೆ ನಿಂದನೆಗೆ ಕಿವಿಗೊಟ್ಟರೆ ಮನೆಹಾಳು ಮಾಡುವ ...ರ್ಯಕ್ರಮವೇ ಸ್ಥಗಿತಗೊಂಡಂತೆ. ಹೀಗೆ ಅರ್ಧ ...ಮಾನಕ್ಕೂ ಮಿಕ್ಕಿ ಸಮಾಜದ ನಿಂದನೆ ಸಹಿಸಿ ಮುನ್ನಡೆದ ...ಗಳು, ತಮ್ಮ ಪ್ರಗತಿಯ ದ್ಯೋತಕವಾಗಿ ಚೆಡ್ಡಿಯನ್ನು ...ಸಿ ಪ್ಯಾಂಟು ಹಾಕಿಕೊಳ್ಳಲಿವೆಯಂತಲ್ಲಾ, ಥೂತ್ತೇರಿ!

* * * *

...ಚೆಡ್ಡಿ ಬದಲಿಗೆ ಪ್ಯಾಂಟು ಧರಿಸುವುದು ಅವುಗಳ ...ತಿಯ ಸಂಕೇತವೆಂದೇ ಹೇಳಬೇಕು. ಏಕೆಂದರೆ ಒಂದು ...ದಲ್ಲಿ ಬಿದಿರು ದಡಿಗಂತೂ ಕಾಸು ಕೊಡುವಂತಿರಲಿಲ್ಲ. ...ಿ ಖಾಕಿ ಬಟ್ಟೆಗೆ ಹಣ ತೆರಬೇಕಿತ್ತು, ಆಗ ಅವುಗಳ ...ಬಿದ್ದ ಹಣದಿಂದ ಚೆಡ್ಡಿಯನ್ನು ಮಾತ್ರ ...ಲಿಸಿಕೊಳ್ಳಬಹುದಾಗಿತ್ತು, ಆದ್ದರಿಂದ ಬಿಳಿಚಿಕೊಂಡ ...ಿಷ್ಟ ಕಾಲುಗಳು ಕಾಣುವಂತೆ ಚೆಡ್ಡಿಯಲ್ಲೇ ಕಾಲಹಾಕಿದ ...ಗಳಿಗೀಗ ಸುಸ್ಥಿತಿ ಪ್ರಾಪ್ತಿಯಾಗಿದೆ. ಅದು ವಾಜಪೇಯಿ ...ಯಾದಾಗಲೇ ಪ್ರಾರಂಭವಾಗಿದೆ. ತಥಾಕಥಿತ ಚೆಡ್ಡಿಗಳ ...ರ ಪದ್ಧತಿ ಬದಲಾಗಿದೆ. ಇನ್ನು ವೇಷವೂ ...ವಾಗಬೇಕಲ್ಲವೆ. ಬದಲಾವಣೆ ಪ್ರಕೃತಿಯ ನಿಯಮ. ...ಿ ಚೆಡ್ಡಿಯೊಳಗಿದ್ದುದ್ದು ಪ್ಯಾಂಟು ಬಂದಕೂಡಲೇ ...ಸಿಗುದುವುದು ಅಷ್ಟರಲ್ಲೇ ಇದೆಯಲ್ಲವೆ, ಥೂತ್ತೇರಿ!!

* * * *

ನಮ್ಮ ನಿಂದನೆಗೆ ಸಮಾಜವೇ ಉತ್ತರ ಕೊಡುತ್ತದೆ ...ದು ಚೆಡ್ಡಿ ವೀರರು ಹೇಳುತ್ತಿರುವಾಗ, ಆ ಸಮಾಜ ...ನಾಪ್ಪದಿರಬಹುದೆಂದು ನೋಡಿದರೆ ಸಾಣೆ ...ವಾಗುತ್ತಿದೆಯಲ್ಲಾ, ಈ ವಿಷಯದಲ್ಲಿ ಕನ್ನಡ ...ತ್ಯದಲ್ಲಿ ನವೋದಯ ಸಾಹಿತಿಗಳು, ಪ್ರಗತಿಶೀಲ ...ಿಗಳಿದ್ದರೆ ಹೆಗ್ಗೋಡು ಕಡೆಯ ನವ್ಯರ ಸೋಗಿಗ ...ಗಳು ಇದ್ದಾರಂತಲ್ಲಾ, ಇವರೆಲ್ಲಾ ತಮ್ಮ ತಮ್ಮ ಜನಿವಾರಗಳನ್ನು ಕಿತ್ತು ಎಸೆದು ಬರೆದರೂ ಕೂಡ ದೇಹದೊಳಗಿನ ನರನಾಡಿಗಳೇ ಜನಿವಾರದ ಕೆಲಸ ನಿರ್ವಹಿಸುತ್ತ ಬಂದರಂತಲ್ಲಾ, ಇದೀಗ ಲಂಕೇಶ್, ತೇಜಸ್ವಿ ಮುಂತಾದ ದೈತ್ಯರು ಬದುಕಿಲ್ಲದ ಕಾರಣಕ್ಕೆ ಈ ಸಾಹಿತಿಗಳು ಪುನಃ ರಾಜಾರೋಷವಾಗಿ ಜನಿವಾರ ತೆಗೆದು ಧರಿಸಿ ಅದರಲ್ಲೇ ಬೆನ್ನು ತುರಿಸುತ್ತ ತಮ್ಮ ಕಾರ್ಯಕ್ರಮಗಳಿಗೆ ಕಂಬಾರ, ದಲಿತ ಕವಿ ಸಿದ್ದಲಿಂಗಯ್ಯ ಎಂಬ ವಾಮನಾಕೃತಿಯನ್ನು ಹುಡುಕುತ್ತಿವೆಯಂತಲ್ಲ, ಮೋಟು ಮರ ಗಾಳಿ ಮಿಂಡ ಎನ್ನುವಂತೆ, ಬಂಡಾಯದ ಯಾವ ಬಿರುಗಾಳಿಗೂ ಬಗ್ಗದ ಸಿದ್ದಲಿಂಗಯ್ಯ ಅತ್ತ ಯಡಿಯೂರಪ್ಪನನ್ನ ಅಭಿನವ ಅಂಬೇಡ್ಕರ್, ನವನವೀನ ಬಸವಣ್ಣ ಎಂದು ಹೊಗಳುತ್ತಲೇ ಕುರ್ಚಿ ಬಿಟ್ಟು ಎದ್ದರಂತಲ್ಲಾ, ಈಗ ಪೇಜಾವರನ ಜೊತೆ ಕಾಣಿಸಿಕೊಂಡು



"ನಮ್ಮ ಕೇರಿಗೂ ಒಮ್ಮೆ ಬನ್ನಿ ಗುರುಗಳೆ. ನಮ್ಮ ಜನ್ಮ ಪಾವನವಾಗುತ್ತೆ" ಎನ್ನುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * *

ಚೆಡ್ಡಿಗಳು ಹೇಳುವಂತಹ ಸಮಾಜದ ಮುಖಂಡರಾದ ಸುಮತೀಂದ್ರ ನಾಡಿಗ ಎಂಬ ಕವಿ ಸಾಹಿತ್ಯದ ಎಲ್ಲಾ ಯುಗದಲ್ಲೂ ಕಾಣಿಸಿಕೊಂಡು ಎಷ್ಟು ಕೆರೆದರೂ ಅದರ ಸಾಹಿತ್ಯವೆಲ್ಲಾ ತಾನು ಒಬ್ಬ ಕವಿ ಎಂದು ಹೇಳಿಕೊಳ್ಳುವ ಮಟ್ಟಕ್ಕೇ ಉಳಿಯಿತೇ ಹೊರತು, ಯಾವುದೂ ನಿಲ್ಲಲಿಲ್ಲವಂತಲ್ಲಾ, ಇದರಿಂದ ಬೇಸರಗೊಂಡಿರುವ ಸುಮತೀಂದ್ರನೆಂಬ ಚೆಡ್ಡಿ ಗಿರಾಕಿ "ದೊಡ್ಡ ಕವಿಗಳೆನ್ನಿಸಿಕೊಂಡವರೂ ಕೂಡ ದೊಡ್ಡ ಕವಿತೆ ಬರೆಯಲಿಲ್ಲ, ಆದರೆ ನಾನು ಬರೆದಿದ್ದೇನೆ" ಎಂದು ಕೊಚ್ಚಿಕೊಳ್ಳುತ್ತಲೇ, "ಕುವೆಂಪು ನಾಡಗೀತೆ ಕೂಡ ಒಳ್ಳೆಯ ಕವಿತೆಯಲ್ಲ" ಎಂದಿದೆಯಂತಲ್ಲಾ, ಸಿಂಹಕ್ಕೆ ಮುಪ್ಪು ಬಂದಾಗ ಇಲಿ ಬಂದು ತಲೆ ತುರಿಸಿತಂತೆ ಎನ್ನುವಂತೆ, ಈ ನಾಡಿಗ ಅರ್ಧ ಶತಮಾನದ ನಂತರ ಕುವೆಂಪು ನಾಡಗೀತೆ ಒಳ್ಳೆಯ ಕವಿತೆಯಲ್ಲ ಎಂದು ಬಡಬಡಿಸಿದೆ. ಸರ್ವಜನಾಂಗದ ಶಾಂತಿಯ ತೋಟವನ್ನು ಪ್ರತಿಪಾದಿಸುವ ಕವನ ಈ ಚೆಡ್ಡಿ ವೀರನಿಗೆ ಒಳ್ಳೆಯ ಕವನವಾಗಲು ಸಾಧ್ಯವೆ. ಇಂತಹ ಹೇಳಿಕೆ ಕೊಡುವ ಮುನ್ನ ಪುನರೂರು ಪಂಚೆ ನೆನಪಾಗಲಿಲ್ಲವೇ, ಥೂತ್ತೇರಿ!!

* * * *

ಫೋನ್ ರಿಂಗಾಯ್ತು, ನೋಡಿದರೆ ವಾಟಿಸ್ಸೆ ನಂಬರು. ಏನಿರಬಹುದೆಂದು ಕುತೂಹಲದಿಂದಲೇ ಆನ್ ಮಾಡಿದೆ.

"ಹಲೋ ನಾನು ವಾಟಿಸ್ಸೆ ಸಾರ್."

"ಹೇಳು ವಾಟಿಸ್ಸೆ, ಏನ್ ಸಮಾಚಾರ?"

"ಕರೆನ್ಸಿ ಪ್ರಾಬ್ಲಮ್."

"ಆಯ್ತು ಹಾಕುಸ್ತಿನಿ, ಹೇಳು."

"ಸಿದ್ದರಾಮಯ್ಯ ನಿಮ್ಮ ಜೊತೆ ಯಂಗವ್ರುರೆ ಸಾ?"

"ಯಲ್ಲಾರತ್ರನೂ ಯಂಗವ್ರುರೊ ಅಂಗವ್ರುರೆ."

"ಅದೂ ಒಂಥರಾ ಇದೆಯ ಬಿಡಿ. ನಡವಳಿಕೆಲಿ ಸಮಾಜವಾದ ಇಟಗಳದು ಗ್ರೇಟ್."

"ಹೌದು ವಾಟಿಸ್ಸೆ, ಸೋನಿಯಾ ಗಾಂಧಿ ಬಂದ್ರೂ ಕೂಡ ಇವುರ್ತಾವಲ್ಲಿ ಬಂದ್ರೂ ಅಂತವರೆ ವರತೂ ಒಂಚೂರೂ ಗಲಿಬಿಲಿಯಾಗದಿಲ್ಲ."

ಥೂತ್ತೇರಿ

ಯಾಹೂ

"ನಂದೊಂದು ರಿಕ್ವೆಸ್ಟ್ ತಲುಪುಸ್ತಿರಾ?"

"ಅದೇನ್ಹೇಳು."

"ಏನಿಲ್ಲಾ, ಊರ ಕಡೆ ವಲಿ ಕುಯ್ತಾ ಅವ್ರುರೆ. ವಲ ಕೂದ ಜನ ಸುಸ್ತಾಗಿ ಒಂದಿಷ್ಟು ಡ್ರಿಂಕ್ಸ್ ಮಾಡನ ಅಂತ ಹೋದ್ರೆ ಒಂದು ಕ್ವಾಟ್ರಿಗೆ ಐವತ್ತು ರೂಪಾಯಿ ಕೊಡಬೇಕು."

"ಹೌದು ಕುಡಿಯಕ್ಕೆ ಅಂತ ಹೋದ್ರೆ ಅಷ್ಟಾಯ್ತದೆ."

"ಅಷ್ಟಾದ್ರು ಕೂಡ, ಸೈಡ್ಸ್ ಸ್ನಾಕ್ಸ್‌ಗೆ ಅಂತ ಎಷ್ಟಾಯ್ತದೆ ಗೊತ್ತ ಸಾರ್? ಟೋಟಲ್ಲಿ ಹಂಡ್ರೆಡ್ ರುಪೀಸ್ ಆಯ್ತದೆ."

"ಅಲ್ಲಿಗೆ ತಿಂಗಳಿಗೆ ಮೂರು ಸಾವ್ರರಾಯ್ತು."

"ನೋಡಿ ಸಾರ್ ನನ್ನಂತ ಸಾಮಾನ್ಯ ಪ್ರಜೆ ಈ ಸರಕಾರಕ್ಕೆ ತಿಂಗಳಿಗೆ ಮೂರು ಸಾವಿರ ಕೊಡ್ತಿನಿ ಅಂದ್ರೆ ಏನಾಯ್ತು."

"ಸರಕಾರಕ್ಕೆ ಸರಾಪಿಗಿಂತ್ಲೂ ಆದಾಯ ಬಂದಂಗಾಯ್ತು."

"ಅದ್ಕೆ ನಾನೇಳದು ಸಾರ್. ಈ ಸಿದ್ದರಾಮಯ್ಯ ಹಿಂದೆ ನಮ್ಮ ಕಷ್ಟ ನೋಡಿ ಥರ್ಟಿ ರುಪೀಸ್‌ಗೆ ಒಂದು ಒಳ್ಳೆ ಡ್ರಿಂಕ್ಸ್ ಬುಡಕ್ಕೆ ಮಾಡಿದ್ದ. ಸಾರ್, ಈ ವಿರೋಧ ಪಕ್ಷದ ನನ್ನ ಮಕ್ಕಳು ಅದುಕು ಕಲ್ಲಾಕಿದ್ರು ಸಾರ್."

"ಈಗದಕೇನು ಮಾಡಬೇಕು?"

"ಏನಿಲ್ಲ, ಡ್ರಿಂಕ್ಸು ನಮ್ಮ ಲೈಫಿನ ಒಂದು ಭಾಗ ಸಾರ್. ಅದ್ಕೆ ಹೆಲ್ತಿಯಾಗಿರಬೇಕು. ರೇಟು ಜಾಸ್ತಿಯಿರ ಬಾರ್ದು. ಅಂಥದ್ದೊಂದು ಡ್ರಿಂಕ್ಸ್ ಬುಟ್ರೆ ಅವ್ರುರ ಒಂದು ರೂಪಾಯಿ ಕೆಜಿ ಅಕ್ಕಿ ಕಾರ್ಯಕ್ರಮಕ್ಕಿಂತ್ಲೂ ಗ್ರೇಟು ಸಾರ್."

"ಈ ವಿಷಯದಲ್ಲಿ ನೀವೇ ಒಂದು ನಿಯೋಗ ಹೋಗಿ ಸಿದ್ದರಾಮಯ್ಯನಿಗೆ ಮನವಿ ಕೊಡಿ."

"ಅಂಗಂತಿರಾ?"

"ಅದಕ್ಕಿಂತ ಮೊದ್ಲು ಕುಮಾರಣ್ಣನ ಭೇಟಿ ಮಾಡಿ. ಕನ್‌ವಿನ್ಸ್ ಮಾಡಿ. ಬಿಜೆಪಿಗಳಂತೂ ಏನು ಮಾಡಿದ್ರೂ ವಿರೋದುಸ್ತವೆ."

"ನಿಜ ಸಾರ್, ಆ ನನಮಕ್ಳ ಮಾತಾಡಸಕ್ಕೆ ಹೇಸಿಗೆ ನನಿಗೆ."

"ಅದ್ಕೆ ಕುಮಾರಣ್ಣನ ಭೇಟಿ ಮಾಡಿ ಕನ್‌ವಿನ್ಸ್ ಮಾಡಿ."

"ಒಂದು ವೇಳೆ ಇದು ವರ್ಕ್ ಫ್ರೋಗ್ರಾಂ ಆಗಿ ನಮ್ಮಂಥೋರೆಲ್ಲಾ ಸಿದ್ದರಾಮಯ್ಯನಿಗೆ ಸಪೋರ್ಟ್ ಮಾಡ್ತಿವಿ ಅಂದ್ರೆ ಏನ್ಮಾಡದು ಸಾರ್?"

"ಥೂತ್ತೇರಿ!!!" ■

ಬೆಂಗಳೂರ್ ಲಿಟರೇಚರ್ ಫೆಸ್ಟಿವಲ್ ಎಂಬ ಸಾಹಿತ್ಯ ಉತ್ಸವದ ಸುತ್ತ ಈಗ ಚರ್ಚೆಗಳು ನಡೆಯುತ್ತಿವೆ. ಮೂರು ವರ್ಷಗಳ ಹಿಂದೆ ಈ ಉತ್ಸವವನ್ನು ಹುಟ್ಟುಹಾಕಿದ್ದು ಮತ್ತು ಅದನ್ನು ನಡೆಸಿಕೊಂಡು ಬಂದದ್ದು ವಿಕ್ರಮ್ ಸಂಪತ್ ಎಂಬ ಇಂಗ್ಲಿಷ್ ಬರಹಗಾರ. ಹಿರಿಯ ಸಂಶೋಧಕ ಎಂ.ಎಂ.ಕಲಬುರ್ಗಿ ಹತ್ಯೆ ಮತ್ತು ದಾದ್ರಿಯಲ್ಲಿ ಅಮಾಯಕ ಮುಸಲ್ಮಾನ ಇಖ್ಲಾಕ್ ಅವರ ಕೊಲೆ ಪ್ರಕರಣಗಳ ನಂತರ ದೇಶದಾದ್ಯಂತ ವಿವಿಧ ಭಾಷಾ ಲೇಖಕರು ತಮ್ಮ ಪ್ರಶಸ್ತಿಗಳನ್ನು ಹಿಂದಿರುಗಿಸಿದರು ಮತ್ತು ವಿವಿಧ ಅಕಾಡಮಿಗಳಿಗೆ ರಾಜೀನಾಮೆ ನೀಡಿದರು. ಎಲ್ಲೆಡೆ ಹೆಚ್ಚುತ್ತಿರುವ ಅಸಹಿಷ್ಣುತೆ ವಿರುದ್ಧ ಇವತ್ತಿಗೂ ನಡೆಯುತ್ತಿರುವ ಈ ಅವಾರ್ಡ್ ವಾಪಸಿ ಆಂದೋಲನವು ಆಯಾ ಲೇಖಕರ ವೈಯಕ್ತಿಕ ನಿರ್ಧಾರದ ಮೇಲೆ ಸಂಭವಿಸಿದ್ದೇ ಹೊರತು ಅದು ಒಂದು ಸಂಘಟಿತ ಚಳವಳಿಯಲ್ಲ. ... ಪ್ರಶಸ್ತಿಗಳನ್ನು ಹಿಂದಿರುಗಿಸುತ್ತಿರುವ

ಆದರೆ ವಿಕ್ರಮ್ ಸಂಪತ್ ಅಕ್ಟೋಬರ್ ತಿಂಗಳಲ್ಲಿ 'ದಿ ಮಿಂಟ್' ಎಂಬ ಇಂಗ್ಲಿಷ್ ಪತ್ರಿಕೆಗೆ ಒಂದು ಲೇಖನವನ್ನು ಬರೆದು ಪ್ರಶಸ್ತಿಗಳನ್ನು ಹಿಂದಿರುಗಿಸುತ್ತಿರುವ ಬರಹಗಾರರನ್ನು 'ರಾಜಕೀಯ ಚೇಲಾಗಳು' ಎಂದು ಜರೆದಿದ್ದರು. ಜೊತೆಗೆ ದೇಶದ ನೂರಾರು ಪ್ರಮುಖ ಇತಿಹಾಸತಜ್ಞರು ಮತ್ತು ವಿಶ್ವವಿದ್ಯಾಲಯಗಳ ಪಂಡಿತರು ಹೆಚ್ಚುತ್ತಿರುವ ಅಸಹಿಷ್ಣುತೆಯನ್ನು ಖಂಡಿಸಿದ್ದನ್ನೂ ಟೀಕಿಸಿದ್ದ ವಿಕ್ರಮ್ ಸಂಪತ್. ಈ ವಿದ್ಯಮಾನಗಳ ಹಿನ್ನೆಲೆಯಲ್ಲಿ ಈ ಉತ್ಸವದಲ್ಲಿ ಭಾಗವಹಿಸದಿರಲು ಹಿರಿಯ ವಿಮರ್ಶಕರಾದ ಓ.ಎಲ್.ನಾಗಭೂಷಣ ಸ್ವಾಮಿ ಮತ್ತು ಯುವ ಕವಿಗಳಾದ ಆರೀಫ್ ರಾಜ ಹಾಗೂ ಟಿ.ಕೆ.ದಯಾನಂದ್ ನಿರ್ಧರಿಸಿದರು. ಆಗ ವಿಕ್ರಮ್ ಸಂಪತ್ ಈ ಉತ್ಸವದ ಆಯೋಜಕ ಸ್ಥಾನದಿಂದ ಕೆಳಗಿಳಿದರಾದರೂ ಕನ್ನಡದ ಈ ಬರಹಗಾರರು ತನ್ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆಂದೂ ಅವರೆಲ್ಲ 'ಅಸಹಿಷ್ಣು ಮಾಫಿಯಾ'ದಂತೆ ವರ್ತಿಸಿದ್ದಾರೆಂದೂ ಆರೋಪಿಸಿದರು. ಆತನ ಆರೋಪಗಳಿಗೆ ಇಲ್ಲಿ ಟಿ.ಕೆ. ದಯಾನಂದ್ ಮತ್ತು ಆರೀಫ್ ರಾಜ ಸೂಕ್ತ ಉತ್ತರ ನೀಡಿದ್ದಾರೆ.

ವಿಕ್ರಮ್ ಸಂಪತ್‌ರ ಸುಳ್ಳುಗಳಿಗೊಂದು ಉತ್ತರ

ಮೊದಲಿಗೆ ಒಂದನ್ನು ಸ್ಪಷ್ಟಪಡಿಸುತ್ತೇನೆ. ನಾನು, ಕವಿ ಆರಿಫ್ ರಾಜ ಮತ್ತು ವಿಮರ್ಶಕರಾದ ಓ.ಎಲ್. ನಾಗಭೂಷಣ್ ಮೂವರು ಸಹ ಬೆಂಗಳೂರು ಸಾಹಿತ್ಯೋತ್ಸವದಿಂದ ಹೊರಗುಳಿಯಲು ನಿರ್ಧರಿಸಿದೆವೇ ಹೊರತು ಸಾಹಿತ್ಯೋತ್ಸವಕ್ಕೆ ಬಹಿಷ್ಕಾರ ಹಾಕಿಲ್ಲ, ನಮ್ಮ ಪತ್ರದಲ್ಲಿಯೂ ಸಹ ಎಲ್ಲಿಯು ಬಹಿಷ್ಕಾರ ಎಂಬ ಪದವನ್ನೇ ನಾವು ಬಳಸಿಲ್ಲ, ಆದರೆ ವಿಕ್ರಮ್ ಸಂಪತ್ ಮತ್ತು ಸಾಹಿತ್ಯೋತ್ಸವದ ಸಂಘಟಕರು ನಾವು 'ಹೊರಗುಳಿಯುತ್ತೇವೆ' ಎಂದಿದ್ದನ್ನು 'ಬಹಿಷ್ಕರಿಸಿದ್ದಾರೆ' ಎಂದು ತಮಗೆ ಬೇಕಾದಂತೆ ತಿರುಚಿಕೊಂಡಿದ್ದಾರೆ.

ಪ್ರಶಸ್ತಿ ಮರಳಿಸುತ್ತಿರುವ ಬರಹಗಾರರು, ಇತಿಹಾಸಕಾರರು, ವಿಜ್ಞಾನಿಗಳು, ಚಿತ್ರ ನಿರ್ದೇಶಕರ ಈ ನಡೆ ಅವರ ವೈಯಕ್ತಿಕ ಪ್ರತಿಭಟನೆಯ ವಿಧಾನ. ಸ್ವ ಇಚ್ಛೆಯಿಂದ ತಮ್ಮದೇ ಬಗೆಯಲ್ಲಿ ಪ್ರತಿಭಟಿಸುತ್ತಿರುವ ಬರಹಗಾರರನ್ನು ಪ್ರತಿರೋಧಿಸುವ, ನಿಂದಿಸುವ, ತಪ್ಪು ಮಾಹಿತಿಗಳ ಮೂಲಕ ಅವರ ಘನತೆಗೆ ಸಾರ್ವಜನಿಕವಾಗಿ ಚ್ಯುತಿ ತರುವ ಯಾವ ಅಧಿಕಾರವು ಯಾರಿಗೂ ಇಲ್ಲ, ಇದನ್ನು ಮೂಲನೆಲೆಯಲ್ಲಿ ಅರ್ಥೈಸಿಕೊಳ್ಳದ ಬೆಂಗಳೂರು ಸಾಹಿತ್ಯೋತ್ಸವದ ಆಯೋಜಕರಲ್ಲಿ ಒಬ್ಬರಾದ ವಿಕ್ರಮ್ ಸಂಪತ್ ಅವರು ಈ ಪ್ರಶಸ್ತಿ ವಾಪಸಾತಿ ಚಳವಳಿಯನ್ನು ತಪ್ಪು ಮಾಹಿತಿಗಳಿಂದ ಕಿಕ್ಕಿರಿದ ಲೇಖನವೊಂದರ ಮೂಲಕ ಖಂಡಿಸಿದ್ದಾರೆ.


'ನಾನೇಕೆ ನನ್ನ ಪ್ರಶಸ್ತಿಯನ್ನು ವಾಪಸ್ಸು ಮಾಡುವುದಿಲ್ಲ.' ಎಂಬ ತಲೆಬರಹದ ಆ ಲೇಖನದಲ್ಲಿ ಪ್ರಶಸ್ತಿ ವಾಪಸು ಮಾಡದೆ ಇರಲು ತಮಗಿರುವ ಕಾರಣಗಳನ್ನು ಉಲ್ಲೇಖಿಸಿದ್ದಾರೆ. ಅವರ ಈ ವೈಯಕ್ತಿಕ ಅನಿಸಿಕೆಯ ಕುರಿತಂತೆ ಯಾರ ಅಭ್ಯಂತರವೂ ಇಲ್ಲ, ಮುಂದುವರೆದು ಈಗಾಗಲೇ ಆಂದೋಲನದ ಸ್ವರೂಪ ಪಡೆದಿರುವ ಪ್ರಶಸ್ತಿ ವಾಪಸಾತಿ ಪ್ರಕ್ರಿಯೆಯಲ್ಲಿ ತಮಗೆ ಸಂದ ಪ್ರಶಸ್ತಿಗಳನ್ನು ಮರಳಿಸಿದ ಬರಹಗಾರರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಶ್ನಿಸುವುದು ಎಷ್ಟರ ಮಟ್ಟಿಗೆ ಸರಿಯಾದುದು ಎಂಬ ಬಗ್ಗೆ ಅವರು ಯೋಚಿಸುವುದಿಲ್ಲ, ದೇಶದಲ್ಲಿ ಹಿಂದೆ ನಡೆದ ಬಹಳಷ್ಟು ಕೋಮುಗಲಭೆ-ಹತ್ಯಾಕಾಂಡಗಳನ್ನು ಯಾವ ಬರಹಗಾರರೂ ಪ್ರತಿಭಟಿಸಲಿಲ್ಲ ಎಂಬಂತಹ ಹಸಿಸುಳ್ಳುಗಳನ್ನು ಹೇಳುವ ವಿಕ್ರಮ್ ಸಂಪತ್ ಎಂಬ ಇತಿಹಾಸಕಾರರ ಗಮನಕ್ಕೆ ಇದಕ್ಕೆ ಸಂಬಂಧಿಸಿದಂತೆ ಇರುವ ಮೂಲ ಮಾಹಿತಿಗಳನ್ನು ಪರಿಶೀಲಿಸುವಷ್ಟು ವ್ಯವಧಾನವಿಲ್ಲ, ದಿನಪತ್ರಿಕೆಗಳನ್ನು ನಿಯಮಿತವಾಗಿ ಓದುವ ಯಾರಿಗಾದರೂ ಸಿಖ್ಖರ ಮೇಲೆ ನಡೆದ ಹತ್ಯಾಕಾಂಡ, ಹಾಶಿಂಪುರ ನರಮೇಧ, ಗೋಧ್ರಾ ಗಲಭೆ, ಎಮರ್ಜೆನ್ಸಿಯಂತಹ ಸಮಾಜವಿರೋಧಿ ಘಟನೆಗಳನ್ನು ದೇಶದ ನೂರಾರು ಬರಹಗಾರರು ಖಂಡಿಸಿದ್ದಾರೆ, ಪ್ರತಿಭಟಿಸಿದ್ದಾರೆ, ಜೈಲು ಸೇರಿದ್ದಾರೆ, ಕವಿತೆ, ಲೇಖನ ಇತ್ಯಾದಿ ಸಾಹಿತ್ಯ ಪ್ರಕಾರಗಳ ಮೂಲಕ ಪ್ರತಿಭಟಿಸಿದ್ದಾರೆ. ರವೀಂದ್ರನಾಥ ಟ್ಯಾಗೋರರು ತಮ್ಮ ರೈಟ್‌ಹುಡ್ ಪ್ರಶಸ್ತಿಯನ್ನು ಹಿಂದಿರುಗಿಸಿದ್ದರು ಎಂಬ ಅರಿವು ಇಲ್ಲ, ಹಾಗೆಯೇ ಶಿವರಾಮ ಕಾರಂತರು ಪದ್ಮ ಪ್ರಶಸ್ತಿಯನ್ನು ಮರಳಿಸಿದ್ದು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಎಂಬುದನ್ನು ವಿಕ್ರಂ ಸಂಪತ್ ಬೇಕೆಂದೇ ಉಲ್ಲೇಖಿಸದೆ ಮರೆಯುತ್ತಾರೆ ಮತ್ತು ಇವೆಲ್ಲ ಸಂದರ್ಭಗಳಲ್ಲಿ ಪ್ರಶಸ್ತಿ ಮರಳಿಸದ ಬರಹಗಾರರು ಆಗ ಒಂದೂ ಮಾತು ಆಡಲಿಲ್ಲವೇಕೆ? ಎಂದು ಸಂಘಪರಿವಾರದ ಭಕ್ತರು ಕೇಳುವ ಪರಮ ಅಜ್ಞಾನದ ಪ್ರಶ್ನೆಯನ್ನು ಲೇಖನದಲ್ಲಿ ಕೇಳುತ್ತಾರೆ.


ಒಬ್ಬ ಹೈಸ್ಕೂಲ್ ವಿದ್ಯಾರ್ಥಿಗೆ ತಿಳಿದಿರಬಹುದಾದ ಈ ಮೂಲ ಮಾಹಿತಿ ಇತಿಹಾಸತಜ್ಞರಾದ ವಿಕ್ರಂ ಸಂಪತ್‌ರಿಗೆ ತಿಳಿಯದಿರುವುದು ಹಾಸ್ಯಾಸ್ಪದ ವಿಚಾರ. ಸಾಹಿತ್ಯೋತ್ಸವದಲ್ಲಿ ಭಾಗವಹಿಸಲು ನಮಗೆ ಮುಜುಗರ ಹುಟ್ಟಿಸಿದ್ದು ಇದೇ ಹಸಿಸುಳ್ಳುಗಳಿಂದ ತುಂಬಿದ ಲೇಖನ. ಜೊತೆಗೆ ಪ್ರಶಸ್ತಿ ವಾಪಸಾತಿಯನ್ನು ಪ್ರಶ್ನಿಸಲು ಬಿಜೆಪಿ, ಸಂಘಪರಿವಾರ ಮತ್ತು ಕರ್ಮಠ ಬಲಪಂಥೀಯವಾದಿಗಳು ಯಾವೆಲ್ಲ ವಾದಸರಣಿಗಳನ್ನು ಬಳಸಿದ್ದರೋ, ಅವೆಲ್ಲ ವಾದಗಳು ವಿಕ್ರಂ ಸಂಪತ್ ಅವರದ್ದೂ ಆಗಿದ್ದುದು ಆ ಲೇಖನದಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಅಸಹಿಷ್ಣುತೆಯ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ಮೌನವಹಿಸಿರುವ ಪ್ರಭುತ್ವಕ್ಕೆದುರಾಗಿ ಎದ್ದಿರುವ ಬರಹಗಾರರ ಪ್ರತಿಭಟನೆಯ ಜೊತೆಗೆ ನಿಲ್ಲುವುದು ಅತ್ಯಂತ ಜೀವಪರ ನಿಲುವು. ಈ ನಿಲುವಿಗೆ ವ್ಯತಿರಿಕ್ತವಾದ ಪ್ರಭುತ್ವದ ನಿರ್ಲಕ್ಷ್ಯದ ಪರವಾದ ನಿಲುವಿನ ವಿಕ್ರಮ್ ಸಂಪತ್‌ರ ಆಯೋಜನೆಯ ಸಾಹಿತ್ಯೋತ್ಸವದಲ್ಲಿ ಅವರೊಟ್ಟಿಗೆ ಗುರುತಿಸಿಕೊಳ್ಳುವುದು ಅತ್ಯಂತ ಮುಜುಗರ ಹುಟ್ಟಿಸುವ ಸಂಗತಿ ಅನ್ನಿಸಿತು. ಅವರ ಆಹ್ವಾನಕ್ಕೆ ನಮ್ಮ ಧನ್ಯವಾದಗಳನ್ನು ತಿಳಿಸಿ ನಮ್ಮ ಭಾಗವಹಿಸುವಿಕೆ ಸಾಧ್ಯವಾಗುವುದಿಲ್ಲವೇಕೆ ಎಂಬುದಕ್ಕೆ ಮೇಲಿನ ಸಕಾರಣಗಳನ್ನು ಕೊಟ್ಟು ನಮ್ಮ ನಡುವೆ ಪ್ರೀತಿಯಷ್ಟೇ ಇರಲಿ ಎಂಬ ಸಾಲಿನೊಂದಿಗೆ ಸೌಹಾರ್ದಯುತವಾಗಿಯೇ ಸಾಹಿತ್ಯೋತ್ಸವದಿಂದ ನಾವು ಮೂವರು ಹೊರಗುಳಿದೆವು. ನಮ್ಮ ನಿಲುವು ಜೀವಪರವಾದ ಸಂಗತಿಗಳೊಟ್ಟಿಗೆ ಇರುತ್ತದೆಯೇ ಹೊರತು ಅಸಹಿಷ್ಣುತೆಗೆ ಜೀವತೆತ್ತ ಸಾಮಾನ್ಯ ಜನಗಳ ಹೆಣಗಳನ್ನು ನಿರ್ಲಕ್ಷಿಸಿ ಪ್ರಭುತ್ವದ ಪರವಾಗಿ ನಿಲ್ಲುವ ವಿಕ್ರಮ್ ಸಂಪತ್‌ರ ಜೀವವಿರೋಧಿ ನಿಲುವಿನೊಟ್ಟಿಗೆ ಯಾವತ್ತಿಗು ಇರುವುದಿಲ್ಲ.

ನಾವು ಬರೆದ ಪತ್ರದಲ್ಲಿ ವಿಕ್ರಮ್ ಸಂಪತ್‌ರ ತಲೆದಂಡಕ್ಕೆ ಕುರಿತಂತೆ ಯಾವುದೇ ಬೇಡಿಕೆಗಳಾಗಲೀ, ಆಗ್ರಹವಾಗಲೀ, ಆಜ್ಞೆಗಳಾಗಲೀ ಅಥವ ನಿರೀಕ್ಷೆಯಾಗಲಿ ಇರಲಿಲ್ಲ, ಹಾಗೆ ಹೇಳುವುದು ಎಷ್ಟು ಮೂರ್ಖತನವಾಗುತ್ತದೆಯೆಂಬ ಸಾಮಾನ್ಯ ಜ್ಞಾನ ನಮಗಿದೆ. ವಿಕ್ರಮ್ ಸಂಪತ್ ಹೊರಗುಳಿದರೆ ಮಾತ್ರ ನಾವು ಸಾಹಿತ್ಯೋತ್ಸವದಲ್ಲಿ ಭಾಗವಹಿಸುತ್ತೇವೆ, ಇಲ್ಲವಾದರೆ ನಾವು ಭಾಗವಹಿಸುವುದಿಲ್ಲ ಎಂದು ನಾವೆಲ್ಲಿಯು ಹೇಳಿಲ್ಲ, ನಮ್ಮ ಪತ್ರದಲ್ಲಿಯು ಅದರ ಉಲ್ಲೇಖವಿಲ್ಲ, ಈ ಬಗೆಯ ಯಾವ ಪ್ರಸ್ತಾವವೂ ನಮ್ಮ ಕಡೆಯಿಂದ ಆಯೋಜಕರಿಗೆ ರವಾನೆಯಾಗದೆ ಇರುವಾಗ ವಿಕ್ರಮ್ ಸಂಪತ್ ಅವರು ನಾವು ಸಾಹಿತ್ಯೋತ್ಸವಕ್ಕೆ ಬಹಿಷ್ಕಾರ ಹಾಕಿದ್ದೇವೆಂಬ ತಿರುಚಿದ ಸುಳ್ಳನ್ನು ರಾಷ್ಟ್ರೀಯ ಮಾಧ್ಯಮಗಳ ಮುಂದೆ ಅದು ಹೇಗೆ ಹೇಳಿದರು ಎಂಬುದು ನಮ್ಮ ಪ್ರಶ್ನೆ. ಈ ಸಂಬಂಧ ವಿಕ್ರಮ್ ಅವರು ನಮ್ಮೊಟ್ಟಿಗೆ ಯಾವ ಮಾತನ್ನೂ ಆಡಿಲ್ಲ, ನಾವು ಅವರಿಗೆ ಯಾವ ಬೇಡಿಕೆಯನ್ನೂ ಇಡದೆ ಇರುವಾಗ ಸಂಘಟನಾ ಸಮಿತಿಗೆ ರಾಜಿನಾಮೆ ಕೊಡುವ ಅವಶ್ಯಕತೆ ಅವರಿಗೆ ಯಾವ ಉದ್ದೇಶಕ್ಕಾಗಿ ಉದ್ಭವವಾಯಿತು ಎಂಬುದನ್ನು ವಿಕ್ರಮ್ ಸಂಪತ್ ಅವರೇ ಸ್ಪಷ್ಟಪಡಿಸಬೇಕು. ಆದರೆ ಈ ಸ್ಪಷ್ಟನೆಗೆ ಬದಲಾಗಿ ಅವರು ತಮ್ಮ ತಲೆದಂಡದ ಹೊಣೆಗಾರಿಕೆಯನ್ನು ನಮ್ಮ ತಲೆಗೆ ಕಟ್ಟಿದ್ದಾರೆ. ನಂತರ ಇದ್ದಕ್ಕಿದ್ದಂತೆ ದುರಂತ ಅಂತ್ಯಕ್ಕೊಳಗಾದ ಹುತಾತ್ಮ ನಾಯಕರಂತೆ ವರ್ತಿಸುತ್ತ ಸಿಂಪತಿ ಪಾಲಿಟಿಕ್ಸ್ ಶುರು ಹಚ್ಚಿಕೊಂಡಿದ್ದಾರೆ. ಈ ಸಿಂಪತಿ ಗೈನಿಂಗ್ ಪ್ರಕ್ರಿಯೆಯಲ್ಲಿ ನಮ್ಮನ್ನು 'ಬಹಿಷ್ಕಾರ ಹಾಕಿದ ಬರಹಗಾರರು' ಎಂದು ಸಂಬೋಧಿಸುತ್ತ ತಮಗೆ ಸಂದ ಹುತಾತ್ಮಗಿರಿಯ ... ಸಂಭ್ರಮದಿಂದ ಒಪ್ಪಿಕೊಂಡಿದ್ದಾರೆ. ಯಾರೂ ಕೇಳದೆ ಇ... ಸ್ಥಾನತ್ಯಾಗವನ್ನು ಇವರಿಗೆ ಮಾಡಲು ಹೇಳಿದ್ದು ಯಾ... ಖಂಡಿತವಾಗಿಯೂ ನಾವಲ್ಲ, ಇದು ಅವರ ವೈ... ನಿರ್ಧಾರ. ಅದಕ್ಕು ನಮಗು ಯಾವ ಸಂಬಂಧವೂ ... ಅವರ ನಿರ್ಧಾರಕ್ಕೆ ಹೊಣೆಗಾರರನ್ನಾಗಿ ಕಂಡಕಂಡ... ಬೆರಳು ತೋರಿಸುವುದು ಅವರ ವ್ಯಕ್ತಿತ್ವಕ್ಕೆ ತಕ್ಕ... ವರ್ತನೆಯಲ್ಲ.

ಮಾಧ್ಯಮಗಳಲ್ಲಿ ಯಾವ ಕನಿಷ್ಠಮಟ್ಟದ ಮುಜುಗ... ಇಲ್ಲದೆ ತಮ್ಮನ್ನು ತಾವು ಥಿಂಕಿಂಗ್ ಇಂಡಿವಿಜುಯ... ಸ್ಕಾಲರ್, ರೈಟರ್, ಹಿಸ್ಟೋರಿಯನ್ ಎಂದು ಸ್ವಘೋ... ಮಾಡಿಕೊಳ್ಳುವ ವಿಕ್ರಮ್ ಸಂಪತ್ ಅ... ಅವರಿಗಿರುವಷ್ಟೇ ಸ್ವಾಭಿಮಾನವು ಉಳಿದ ಬರಹಗಾರ... ಇರುತ್ತದೆ ಎಂಬ ಕನಿಷ್ಠಮಟ್ಟದ ಜ್ಞಾನ ಇದ್ದಂತಿಲ್ಲ. ಅ... ಆಯೋಜಿಸಿದ ಸಾಹಿತ್ಯೋತ್ಸವಕ್ಕೆ ಬರಲೊಪ್ಪದ ... ಮತ್ತು ಕೇರಳದ ಬರಹಗಾರರು ಸಹಿಷ್ಣು... ಮಾಫಿಯಾದವರಂತೆ ಕಾಣುತ್ತಾರೆ. ಭಾಗವಹಿಸಲಾಗು... ಕ್ಷಮೆಯಿರಲಿ ಎಂದು ಪತ್ರ ಬರೆದವರು ಬಹಿಷ್ಕಾರ ... ದುಷ್ಕರ್ಮಿಗಳಾಗಿ ಕಾಣುತ್ತಾರೆ. ನಾನೇಕೆ ಪ್ರಶಸ್ತಿ ವಾ... ಮಾಡುವುದಿಲ್ಲ ಎಂದು ಹೇಳುವ ಡೆಮೊಕ್ರೆಟಿಕ್ ... ಪಾಯಿಂಟ್ ನನಗಿರುವುದು ತಪ್ಪೇ? ಎಂದು ಪ್ರಶ್ನಿ... ವಿಕ್ರಂ ಸಂಪತ್ ಅವರು ಅದೇ ಬಗೆಯ ಡೆಮೊ... ವ್ಯೂ ಪಾಯಿಂಟ್ ಪ್ರಶಸ್ತಿ ವಾಪಸ್ಸು ಮಾಡಿದವ... ಸಹಜವಾಗಿ ಇರುತ್ತದೆಂಬುದು ಹೊಳೆಯಲಿಲ್ಲವೆ? ಅ... ಸ್ವಾತಂತ್ರ್ಯದ ಪ್ರಶ್ನೆ ಬಂದಾಗ ತಮ್ಮ ವಾದ ಮತ್ತು ಲೇ... ಸುಳ್ಳುಗಳನ್ನು ಸಮರ್ಥಿಸಿಕೊಳ್ಳುವ ಸಂ... ಸಾಹಿತ್ಯೋತ್ಸವದಿಂದ ಹೊರಗುಳಿಯುವ ... ಸೌಹಾರ್ದಯುತ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ, ... ವಾಪಸಾತಿ ಬರಹಗಾರರ ಸ್ವಾತಂತ್ರ್ಯದ ಪ್ರಶ್ನೆ ಬ... ಅದನ್ನು ಮನಸೋ ಇಚ್ಛೆ ನಿಂದಿಸತೊಡಗುತ್ತಾರೆ.

ಸಾಹಿತ್ಯೋತ್ಸವದಿಂದ ನಾವು ಹೊರಗು... ದಿನದಿಂದಲೂ ನಾವು ಈ ಬೆಳವಣಿಗೆಯ ಬಗ್ಗೆ ಎಲ್ಲಿ... ಚರ್ಚಿಸುತ್ತಿಲ್ಲ, ಒಂದೇ ಒಂದು ಫೇಸ್ ಬುಕ್ ಪೋ... ಹಾಕಿಲ್ಲ, ಟ್ವೀಟ್ ಮಾಡಿಲ್ಲ, ರಾಷ್ಟ್ರೀಯ ಮತ್ತು ... ಮಟ್ಟದ ಟಿವಿ ಚಾನೆಲ್‌ಗಳು ಪ್ಯಾನೆಲ್ ಡಿಸ್... ಸಂದರ್ಶನವೆಂದು ನಮ್ಮನ್ನು ಸಂಪರ್ಕಿಸಿದಾಗಲೂ ... ನಾವು ಭಾಗವಹಿಸಿ ನಮ್ಮ ಮಾತುಗಳನ್ನು ಆಡುವ, ... ಮೇಲೊಬ್ಬರು ಕೆಸರೆರಚುವ, ಆರೋಪ-ಪ್ರತ್ಯಾರೋಪ... ಎಡೆ ಮಾಡಿಕೊಟ್ಟಿಲ್ಲ, ಯಾಕೆಂದರೆ ಜನರೆದುರು... ವಿವಾದವನ್ನು ಎಳೆದೊಯ್ಯುವುದು ನಮಗೆ ಒಪ್ಪಿಗೆ ಇ... ಹಾಗೇನಾದರೂ ಆಗಿದ್ದರೆ ಬೆಂಗಳೂರು ಸಾಹಿತ್ಯೋ... ಮುಖಕ್ಕೆ ಮಸಿ ಬೀಳುತ್ತಿತ್ತು, ಒಂದು ಸಾಹಿತ್ಯೋ... ಯೋಜನೆಯ ಕಷ್ಟನಷ್ಟಗಳನ್ನು ನಾವೂ ಬಲ್ಲವಾ... ಕಾರ್ಯಕ್ರಮಕ್ಕೆ ವಿನಾಕಾರಣದ ಆರೋಪ-ಪ್ರತ್ಯಾರೋ... ಸಂಘರ್ಷದಿಂದ ಘಾಸಿಯಾಗುವುದು ನಮಗೆ ಒಪ್ಪಿಗೆ... ಕಾರಣ ಈ ಹಂತದಲ್ಲಿ ಅತ್ಯಂತ ಸಂ... ಕಾಯ್ದುಕೊಂಡೆವು. ಎಲ್ಲಿಯೂ ನಮ್ಮ ನಿರ್ಧಾರಕ್ಕೆ ಪ್ರ... ಸಾಹಿತ್ಯೋತ್ಸವದ ಆಯೋಜಕರಿಗಾಗಲೀ ವಿಕ್ರಮ್ ಸಂ... ಅವರಿಗಾಗಲೀ ಗುರಿಯಿಟ್ಟು ಯಾವ ಮಾಧ್ಯಮದೊ... ಮಾತನಾಡಲಿಲ್ಲ, ಇದಕ್ಕೆ ವ್ಯತಿರಿಕ್ತವಾಗಿ ವಿಕ್ರಮ್ ಸಂ... ತಾವು ರಾಜೀನಾಮೆ ಕೊಟ್ಟ ಹುತಾತ್ಮಗಿರಿಗೆ ... ದೊರೆತ ದೇಶಾದ್ಯಂತದ ಬೆಂಬಲದ ಹುರು... ಫೇಸ್‌ಬುಕ್, ಟ್ವಿಟರ್, ಟಿವಿ ಚಾನೆಲ್‌ಗಳಲ್ಲಿ ... ಪುಂಖಾನುಪುಂಖವಾಗಿ ನಮ್ಮ ವಿರುದ್ಧ ಆರೋ... ಸುರಿಮಳೆಗರೆದರು. ಸಹಿಷ್ಣುತೆ ಮಾಫಿಯಾದವ... ಜರಿದರು.





ಸಾಹಿತ್ಯೋತ್ಸವದ ಭಾಗವಾದ ಪ್ರಕಾಶ್ ವಾಡಿಯವರು ನಮ್ಮನ್ನು ಸೇರಿದಂತೆ ತ್ಯೋತ್ಸವದಿಂದ ಹೊರಗುಳಿದ ಸಾರಾ ಜೋಸೆಫ್, ಾನಂದನ್, ಓ.ಎಲ್.ನಾಗಭೂಷಣ್ ಎಲ್ಲರು ಸೇರಿ ಸಂಪತ್ ಅವರನ್ನು ಬಲವಂತವಾಗಿ ಕೆಳಗಿಳಿಸಿದ್ದು ತೆ, ಬರ್ಬರತೆ, ರಕ್ತಸಿಕ್ತ ಮನಸ್ಥಿತಿಯ ದ್ಯೋತಕದ ಷ್ಟುಗಳು, ಏನೂ ಗೊತ್ತಿಲ್ಲದ ಮೂಢರು ಎಂದು ವೊಂದರಲ್ಲಿ ಅಪಮಾನಿಸುವಾಗ ಅದನ್ನು ಖಂಡಿಸದೆ ರು. ಟಿವಿ ಚಾನೆಲ್ಲುಗಳಲ್ಲಿ ಕುಳಿತು ಕನ್ನಡದ ಕರನ್ನು ಹೇಳಹೆಸರಿಲ್ಲದವರು, ಸೆಲ್ಫ್ ಇಂಪಾರ್ಟೆಂಟ್ ಗಳು, ಇಗೋ ಸೆಂಟ್ರಿಕ್‌ನವರು, ಅವರಿಗೆ ಬದನೆಕಾಯಿ ತ ಬೆಳೆಯುವ ವಿಧಾನ ಗೊತ್ತಿಲ್ಲ, ಪಬ್ಲಿಸಿಟಿಗೋಸ್ಕರ ೆ ವರ್ತಿಸುತ್ತಿದ್ದಾರೆ ಎಂದು ತಮ್ಮದೆಂಥ ಮನಸ್ಥಿತಿಯ ನಾಲಿಗೆ ಎಂಬುದನ್ನು ದೃಢಪಡಿಸಿದರು. ಕ್ಕೂ ವಿಕ್ರಮ್ ಸಂಪತ್ ಖಂಡಿಸದೆ ಬೆಂಬಲಿಸಿದರು. -ರಾಷ್ಟ್ರಮಟ್ಟದ ಪತ್ರಿಕೆಗಳ ಸಂದರ್ಶನದ, ಟಿವಿ ನೆಲ್ಲುಗಳ ಡಿಸ್ಕಷನ್ ಆಹ್ವಾನವನ್ನು ನಿರಾಕರಿಸಿ ನವುಳಿದ ನಾವು ಪಬ್ಲಿಸಿಟಿಗೆ ಹಪಹಪಿಸುವರಾಗಿ ಗೊಂಡೆವು. ಚಾನೆಲ್ಲಿನಿಂದ ಚಾನೆಲ್ಲಿಗೆ ಚಕ್ರಕಟ್ಟಿಕೊಂಡು ಗಿದ ಪ್ರಕಾಶ್ ಬೆಳವಾಡಿ ಮತ್ತು ವಿಕ್ರಮ್ ಸಂಪತ್ ು ಪಬ್ಲಿಸಿಟಿಯ ಹಂಗೇ ಇಲ್ಲದ ಸಾಧುಸಂತರಾಗಿ ರಹೊಮ್ಮಿದರು.

ಟಿಪ್ಪು ಸುಲ್ತಾನ್ ವಿವಾದದ ಬಗೆಗೆ ನಮ್ಮ ಮೂವರ ದಲ್ಲಿ ನಾವೇನೂ ಉಲ್ಲೇಖಿಸದಿದ್ದರೂ ನಾವು ದಿರುವ ದೂರನ್ನು ಹುಟ್ಟಿಸಿಕೊಂಡು ಟಿಪ್ಪು ಜಯಂತಿ ೋಧಿಸಿದ್ದಕ್ಕೆ ಸಾಹಿತ್ಯೋತ್ಸವಕ್ಕೆ ಬಹಿಷ್ಕಾರ ಹಾಕಿದರೆಂದು ಮ್ ಸಂಪತ್ ನಮ್ಮ ವಿರುದ್ಧ ಸುಳ್ಳುಗಳ ಮೇಲೆ ್ಳು ಹೇಳಿದರು. ನನ್ನ ವಿರುದ್ಧವಾಗಿ ಪರ್ಸನಲೈಸ್ಡ್ ಪೇನ್ ನಡೆಸುತ್ತಿದ್ದಾರೆಂದು ಸುಳ್ಳು ಆರೋಪ ಮಾಡಿದರು. ಮ್ ಸಂಪತ್‌ರನ್ನು ಮುಖತಃ ಸಹ ನೋಡಿರದ ಗೆ ಅವರ ಮೇಲೆ ದ್ವೇಷ ಸಾಧಿಸಿ, ಅವರ ಹೆಸರಿಗೆ ಕ ತಂದು, ಸಾಹಿತ್ಯೋತ್ಸವಕ್ಕೆ ತೊಂದರೆ ಕೊಟ್ಟು ಗಾಗುವ ಲಾಭವೇನೆಂಬುದನ್ನು ಅವರೇ ಹೇಳಬೇಕು. ತ್ಯೋತ್ಸವದಲ್ಲಿ ಭಾಗವಹಿಸುವವರಿಗೆ ಮಾಧ್ಯಮ ್ಥೆಗಳು ಮತ್ತು ಎಡಪಂಥೀಯರು ಫೋನ್ ಕರೆ ಮಾಡಿ ವು ಭಾಗವಹಿಸಿದರೆ ಬೆಂಗಳೂರಿನಲ್ಲಿ ಕೋಮುಗಲಭೆ ುವ ಭಯ ಹುಟ್ಟಿಸಿ ಬೆದರಿಕೆ ಹಾಕಿದರೆಂದು" ಾಧ್ಯಮಗಳಲ್ಲಿ ವಿಕ್ರಮ್ ಸಂಪತ್ ಹೇಳಿದ್ದು ಅವರ ುಹಾಪೋಹ ಆಧರಿಸಿದ ಭ್ರಮೆಗಳಿಗೆ ದೊಡ್ಡ ದಾಹರಣೆ. ಇಲ್ಲದ್ದನ್ನು ಊಹಿಸಿಕೊಂಡು ತನಗೆ ತಾನೇ ಮೆಗಳಿಗೆ ಬಿದ್ದು ನರಳುವ ಕಾಯಿಲೆಗೆ ಸಾಹಿತ್ಯ ಿಯದಲ್ಲಿ ಸಂಸ ಸಿಂಡ್ರೋಂ ಅನ್ನುತ್ತಾರೆ. ಹೀಗೆ ಎಲ್ಲ ಗೆಯ ದೋಷಾರೋಪಗಳು, ಅಪಮಾನಗಳು, ದನೆಯನ್ನು ಸಾಹಿತ್ಯೋತ್ಸವದಿಂದ ಹೊರಗುಳಿದವರ ಗ್ಗೆ ವಿಕ್ರಮ್ ಸಂಪತ್ ನಡೆಸುವುದು ಸಹಿಷ್ಣುತೆಯೋ, ಬಗೆಯ ಕೆಸರೆರಚಾಟದಿಂದ ಆರೋಪ ್ಯಾರೋಪಗಳಿಂದ ಸಾಹಿತ್ಯೋತ್ಸವದ ಘನತೆಗೆ ಧಕ್ಕೆ ರುತ್ತದೆಂದು ಇವೆಲ್ಲ ನಿಂದನೆಯನ್ನು ಸಹಿಸಿಯೂ ಯಾವ ಾಧ್ಯಮದಲ್ಲಿಯೂ ಆರೋಪಗಳನ್ನು ಮಾಡಲು ಹೋಗದೆ ನಕ್ಕೆ ಶರಣಾದ ನಮ್ಮದು ಸಹಿಷ್ಣುತೆಯೋ ಎಂಬುದನ್ನು ಾರಾದರು ಇಲ್ಲಿ ಅರ್ಥ ಮಾಡಿಕೊಳ್ಳಬಹುದು.

ಸಾಹಿತ್ಯೋತ್ಸವದಲ್ಲಿ ಭಾಗವಹಿಸುವ ಗ್ಲಿಷ್ ಮತ್ತು ಹಿಂದಿ ಬರಹಗಾರರಿಗೆ ಶೇಷ ಪ್ರಾಶಸ್ತ್ಯ ನೀಡಲಾಗುತ್ತದೆ. ಅದೇ ಮಯದಲ್ಲಿ ಕನ್ನಡದ ಪ್ರತಿನಿಧಿಗಳಿಗೆ ರಡನೇ ದರ್ಜೆ ಬರಹಗಾರರಂತೆ ಡೆಸಿಕೊಳ್ಳಲಾಗುತ್ತದೆ. ಇದನ್ನೇ ಗಭೂಷಣ್ ಅವರು ತಮ್ಮ ಪತ್ರದಲ್ಲಿ ಲ್ಲೇಖಿಸಿದ್ದಾರೆ. ಬೆಂಗಳೂರು ಹಿತ್ಯೋತ್ಸವದ ಆಹ್ವಾನವನ್ನು ಮನ್ನಿಸಿ ್ಯ ಮಾಡಿದೆವೆಂದು ಬಹಳಷ್ಟು ಮಂದಿ ನ್ನಡದ ಬರಹಗಾರರು ತಮ್ಮ ಅನುಭವ ಂಚಿಕೊಂಡಿದ್ದಾರೆ. ಸ್ಥಳೀಯತೆಯನ್ನು ಗೊಳ್ಳುವ ನೆಪಮಾತ್ರದ ಆಶಯದಿಂದ ಾತ್ರ ಆಯ್ದ ಕನ್ನಡದ ಬರಹಗಾರರನ್ನು ಸಿಕೊಂಡು ಕಾರ್ಯಕ್ರಮಗಳಲ್ಲಿ ಕನ್ನಡ ೇಖಕರನ್ನು ನಿರ್ಲಕ್ಷಿಸುತ್ತಾರೆಂಬ ಭಿಪ್ರಾಯವು ಈ ಹಿಂದೆ ಬೆಂಗಳೂರು ಾಹಿತ್ಯೋತ್ಸವದಲ್ಲಿ ಭಾಗವಹಿಸಿ ವರಲ್ಲಿದೆ. ಸಾಹಿತ್ಯ ಬರವಣಿಗೆಗೆ ್ಟೂ ಸಂಬಂಧವಿರದ ರವಿಶಂಕರ್ ರೂಜಿಯವರಂತಹ ಸ್ಪಿರಿಚ್ಯುಯಲ್ ರುಗಳು, ಅವರ ಪಾದ ಮುಟ್ಟಿ ಕ್ಕೆ ಸ್ವಾಗತಿಸುವ ವಿಕ್ರಮ್ ಸಂಪತ್, ಸಾಪಾತಿಗೂ ಯುರೋಪಿಯನ್ ಲೇಖಕರ ಗಳನ್ನು ಕೋಟ್ ಮಾಡುವ ಆಂಗ್ಲ ವ್ಯಾಮೋಹಿಗಳು, ಾಲೀಸಿಗಳು, ಸರ್ಕಾರದ ಮಂತ್ರಿಗಳದ್ದೇ ಆಟಾಟೋಪ

ಸಾಹಿತ್ಯೋತ್ಸವದಲ್ಲಿ ಕನ್ನಡಕ್ಕೆ ಅವಮಾನ

ಬೆಂಗಳೂರು ಸಾಹಿತ್ಯೋತ್ಸವದ ಸುತ್ತ ಈಗ ಚರ್ಚೆಗಳು ನಡೆಯುತ್ತಿವೆ. ಈ ಸಾಹಿತ್ಯೋತ್ಸವದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ಇಲ್ಲ ಎಂಬ ಕಾರಣಕ್ಕೆ ಹಿರಿಯ ವಿಮರ್ಶಕ ಓ.ಎಲ್. ನಾಗಭೂಷಣ ಸ್ವಾಮಿ ಭಾಗವಹಿಸುವಿಕೆಯಿಂದ ಹಿಂದೆ ಸರಿದಿದ್ದಾರೆ. ಅವರ ನಿಲುವು ಸರಿಯಾದದ್ದು ಎಂಬುದಕ್ಕೆ ಇದೇ ಸಾಹಿತ್ಯೋತ್ಸವದಲ್ಲಿ ಎರಡು ವರ್ಷಗಳ ಹಿಂದೆ ಮತ್ತೋರ್ವ ಹಿರಿಯ ವಿಮರ್ಶಕ ಸಿ.ಎನ್. ರಾಮಚಂದ್ರನ್ ಅವರಿಗಾದ ಅನುಭವವೇ ಸಾಕ್ಷಿ.

ರಾಮಚಂದ್ರನ್ ಅವರು ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ:


"ಬೆಂಗಳೂರು ಸಾಹಿತ್ಯೋತ್ಸವವನ್ನು ಕುರಿತ ಗೌರಿ ಲಂಕೇಶ್ ಅವರ ಲೇಖನವನ್ನು ಓದಿ ಮತ್ತು ಆ ಉತ್ಸವದ ಬಗ್ಗೆ ನಡೆಯುತ್ತಿರುವ ವಾದವಿವಾದಗಳನ್ನು ಗಮನಿಸಿ, ಎರಡು ವರ್ಷಗಳ ಹಿಂದೆ ನಾನು ಆ ಉತ್ಸವದಲ್ಲಿ ಭಾಗವಹಿಸಿದಾಗ ನನಗಾದ ಅನುಭವವನ್ನು ಓದುಗರ ಮುಂದಿಡುತ್ತಿದ್ದೇನೆ. ನಾನು ವಿಕ್ರಂ ಸಂಪತ್ ಅವರನ್ನು ಇದುವರೆಗೆ ನೋಡುವ ಸಂದರ್ಭ ಬಂದಿಲ್ಲ ಮತ್ತು ನಾನು ಯಾವ ಅವಾರ್ಡನ್ನೂ ಹಿಂತಿರುಗಿಸಿಲ್ಲ.

ಮೂರು ವಾರಗಳ ಹಿಂದೆ ಡಾ. ಚಂದ್ರಶೇಖರ ಕಂಬಾರರು ಈ ಉತ್ಸವದಲ್ಲಿ ಭಾಗವಹಿಸಲು ನನ್ನನ್ನು ಆಹ್ವಾನಿಸಿದಾಗ ನನಗೆ ಅದರಲ್ಲಿ ಆಸಕ್ತಿಯಿಲ್ಲವೆಂದು ಹೇಳಿದೆ. ಏಕೆಂದು ಅವರು ಕಾರಣವನ್ನು ಕೇಳಿದಾಗ ನನ್ನ ಅನುಭವವನ್ನು ಅವರಿಗೆ ತಿಳಿಸಿದೆ; ಅದನ್ನೇ ಈಗ ದಾಖಲಿಸುತ್ತಿದ್ದೇನೆ.

ಎರಡು ವರ್ಷಗಳ ಹಿಂದೆ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆದ ಇದೇ ಉತ್ಸವದಲ್ಲಿ ಭಾಗವಹಿಸಲು ನನ್ನ ಹಿರಿಯ ಮಿತ್ರರಾಗಿದ್ದ ಪ್ರೊ. ಶ್ರೀನಿವಾಸ ಹಾವನೂರರ ಸಹೋದರಿ ಸಂಪರ್ಕಿಸಿ, ಒಂದೆರಡು ಗೋಷ್ಠಿಗಳ ವಿಷಯಗಳನ್ನು ಪ್ರಸ್ತಾಪಿಸಿ, ನನಗೆ ಯಾವುದರಲ್ಲಿ ಭಾಗವಹಿಸಲು ಆಸಕ್ತಿಯಿದೆಯೆಂದು ಕೇಳಿದಾಗ, ಭಾಷಾಂತರ ಗೋಷ್ಠಿಯಲ್ಲಿ ಭಾಗವಹಿಸುತ್ತೇನೆಂದು ಹೇಳಿದೆ. ಆದರೆ, ನನ್ನ ಹತ್ತಿರ ಕಾರ್ ಇಲ್ಲವೆಂದು, ವಾಹನ ವ್ಯವಸ್ಥೆ ಮಾಡಲಾಗುತ್ತದೆಯೆ ಎಂದು ಕೇಳಿದಾಗ ಅವರು ಸಿಟಿ ಟ್ಯಾಕ್ಸಿ ಮಾಡಿಕೊಂಡು ಬರಲು ಹೇಳಿದರು. ಸರಿ ಎಂದು ತುಂಬಾ ಉತ್ಸಾಹದಿಂದ ಒಂದು ವಾರ ಭಾಷಾಂತರವನ್ನು ಕುರಿತು ಇಂಗ್ಲಿಷ್‌ನಲ್ಲಿ ಟಿಪ್ಪಣಿಗಳನ್ನು ಮಾಡಿಕೊಂಡೆ. ಒಂದೆರಡು ದಿನಗಳಲ್ಲಿ ಆ ಗೋಷ್ಠಿಯ ನಿರ್ವಾಹಕಿ (ಬೆಂಗಳೂರಿನವರು) ನನ್ನನ್ನು ಸಂಪರ್ಕಿಸಿ, ಆ ಗೋಷ್ಠಿಯಲ್ಲಿ ಭಾಗವಹಿಸುವ ಇತರ ವಿದ್ವಾಂಸರ ಹೆಸರುಗಳನ್ನು ಹೇಳಿದರು; ನನಗೆ ಯಾರೂ ಗೊತ್ತಿರಲಿಲ್ಲ.

ಗೋಷ್ಠಿ ಮಧ್ಯಾಹ್ನ ಇದ್ದುದರಿಂದ ನಾನು ಎರಡು ಗಂಟೆಗೆ ಹೊರಡಲು ಸಿದ್ಧವಾಗುತ್ತಿದ್ದಾಗ ನಿರ್ವಾಹಕಿ ನನ್ನನ್ನು ಸಂಪರ್ಕಿಸಿ, ತುಂಬಾ ಸಂಕೋಚದಿಂದ ಅವರು ನನ್ನೊಡನೆ ಬರಬಹುದೆ ಎಂದು ಕೇಳಿದರು; ನಾನು ಆಗಲಿ ಎಂದು ಹೇಳಿದೆ. ದಾರಿಯಲ್ಲಿ, ಮಾತನಾಡುವಾಗ ಗೋಷ್ಠಿಯ ರೂಪುರೇಷೆ ಕೇಳಿದಾಗ ಅವರು ಹೇಳಿದ್ದು ಇಷ್ಟೇ: "ನನಗೆ ಹೇಳಿರುವುದು ಒಂದೇ ವಾಕ್ಯ: 'keep it chatty and keep it short. ತುಂಬಾ ಗಂಭೀರವಾಗಿರುವುದು ಬೇಡ.'"

ಉತ್ಸವದ ಸ್ಥಳವನ್ನು ಸೇರಿದಾಗ, ನಮ್ಮ ಗೋಷ್ಠಿಯ ಸ್ಥಳ ಎಲ್ಲಿ ಎಂದು ಹುಡುಕಿದೆವು; ಯಾರೂ ವ್ಯವಸ್ಥಾಪಕರು ಎಲ್ಲಿಯೂ ಕಾಣಲಿಲ್ಲ. ಕೊನೆಗೆ, ಹಾವನೂರರ ಸಹೋದರಿ ನಮ್ಮನ್ನು ಕಂಡು, ಗೋಷ್ಠಿಯ ಸ್ಥಳಕ್ಕೆ ಕರೆದುಕೊಂಡು ಹೋಗಿ, "ಇಲ್ಲಿಯೇ ಇರಿ; ನಾಲ್ಕು ಗಂಟೆಗೆ ಪ್ರಾರಂಭವಾಗಬಹುದು" ಎಂದರು. ಗೋಷ್ಠಿ ಪ್ರಾರಂಭವಾದಾಗ, ಸುಮಾರು 25-30 ಶ್ರೋತೃಗಳಿದ್ದಿರಬಹುದು. ಮೊದಲಿಗೆ ನಾನು ಮಾತನಾಡಿ, ಭಾಷಾಂತರದ ಸಮಸ್ಯೆಗಳನ್ನು ವಿವರಿಸಿದೆ; ಯಾರಿಗೂ ಆಸಕ್ತಿಯಿರಲಿಲ್ಲವೆಂದು ನನಗೆ ತೋರಿತು. ಅನಂತರ ಹಿಂದಿಯಲ್ಲಿ ಬರೆಯುವ 'ತುಂಬಾ ಪ್ರಸಿದ್ಧ'ರೆಂದು ಪರಿಚಯಿಸಿದ ವಿದುಷಿ ತಮ್ಮ ಹಿಂದಿ ಅನುವಾದಗಳಿಗೆ ಎಂತಹ ಮೆಚ್ಚುಗೆ ಸಿಕ್ಕಿದೆ ಎಂದು ಮಾತನಾಡಿದರು. ಅನಂತರ ಉಳಿದ ಇಬ್ಬರು. ಅವರೆಲ್ಲರೂ ಸ್ನೇಹಿತರೊಡನೆ ಮಾತನಾಡುವಂತೆ ವೈನೋದಿಕ ಶೈಲಿಯಲ್ಲಿ ಮಾತನಾಡಿ ರಂಜಿಸಿದರು.



ಗೋಷ್ಠಿಯ ನಂತರ, ನಾನು ಹೊರಡುತ್ತೇನೆಂದು ಹೇಳಿ ಟ್ಯಾಕ್ಸಿ ಖರ್ಚಿನ ಬಗ್ಗೆ ಕೇಳಿದಾಗ "ಇಲ್ಲಿ ಬರುವ ಎಲ್ಲರೂ ತಮ್ಮ ತಮ್ಮ ಕಾರುಗಳಲ್ಲಿ ಬರುತ್ತಾರೆ; ಆದುದರಿಂದ ಪ್ರಯಾಣದ ಖರ್ಚನ್ನು ಕೊಡಲಾಗುತ್ತದೋ ಇಲ್ಲವೋ ಗೊತ್ತಿಲ್ಲ" ಎಂದು ಹೇಳಿ, ಸುಮಾರು ಅರ್ಧಗಂಟೆಯ ನಂತರ "ಇದು ನಿಮಗೆ ವಿಶೇಷ" ಎಂದು ವಾಹನದ ಖರ್ಚನ್ನು (ರೂ 500) ಕೊಟ್ಟರು. ನಾನು ಅಲ್ಲಲ್ಲಿ ಸುತ್ತಾಡಿದೆ; ಕೆಲವರು ಬೀರ್ ಕುಡಿಯುತ್ತಾ ಕೆಲವರು ಹರಟೆ ಹೊಡೆಯುತ್ತಾ ಕೆಲವರು 'ಪ್ರಸಿದ್ಧ ಹಾಗೂ ಗ್ಲಾಮರಸ್' ಆದ ಹಿಂದಿ ಕವಿಗಳ ಮಾತು ಕೇಳುತ್ತಾ ಇದ್ದರು. ಮೂರೂ ದಿನಗಳ ಕಾರ್ಯಕ್ರಮಗಳಲ್ಲಿ 'ವಿಶೇಷ ಉಪನ್ಯಾಸ', 'ಸಂದರ್ಶನ', 'ಚರ್ಚೆ' ಇತ್ಯಾದಿಗಳಲ್ಲಿ ಕಾಣಿಸಿಕೊಂಡಿದ್ದವರು (ಉತ್ಸವದ ಕೇಂದ್ರ ಬಿಂದುಗಳಾಗಿದ್ದವರು) ಇಬ್ಬರೇ ಇಬ್ಬರು - ಹಿಂದಿ ಸಾಹಿತ್ಯ-ಚಲನಚಿತ್ರ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿದ್ದ ಕವಿ-ಸಾಹಿತಿಗಳು. ಎಲ್ಲೆಲ್ಲಿಯೂ ಇಂಗ್ಲಿಷ್ / ಹಿಂದಿ ಸಂಭಾಷಣೆ. ನಾನಿಲ್ಲಿ ಕಳೆದುಹೋಗಿದ್ದೇನೆ; ಇಂತಹ 'ಗ್ಲಾಮರಸ್' ಸಮಾವೇಶಗಳಲ್ಲಿ ಭಾಗವಹಿಸಲು ನಾನು unfit ಎನಿಸಿತು.


ಪ್ರಾಮಾಣಿಕವಾಗಿ ಮತ್ತೂ ಒಂದು ವಿಷಯವನ್ನು ಪ್ರಸ್ತಾಪಿಸಬೇಕು. ಅಂದೇ ಪ್ರೊ. ವಿವೇಕ ರೈ ಅವರು ನಡೆಸಿಕೊಟ್ಟ 'ತುಳು ಸಾಹಿತ್ಯ-ಸಂಸ್ಕೃತಿ'ಗಳನ್ನು ಕುರಿತ ಗೋಷ್ಠಿ ತುಂಬಾ ಯಶಸ್ವಿಯಾಯಿತು. ಎಂದರೆ, ಆಸಕ್ತ ಕೇಳುಗರೂ ಗಮನೀಯವಾಗಿದ್ದರು (ಸುಮಾರು 100%). ಆ ಗೋಷ್ಠಿಯ ಯಶಸ್ಸನ್ನು ಗಮನಿಸಿ, ಅದೇ ತಂಡವನ್ನು ಕೆಲವು ತಿಂಗಳುಗಳ ನಂತರ ನಡೆದ 'ದೆಹಲಿ ಉತ್ಸವ'ಕ್ಕೂ ಆಹ್ವಾನಿಸಿದ್ದರು.

ಇದರ ಅರ್ಥ, ರಾಷ್ಟ್ರೀಯ ನೆಲೆಯಲ್ಲಿ ನಡೆಯುವ 'ಉತ್ಸವ'ಗಳಲ್ಲಿ ಇಂಗ್ಲಿಷ್-ಹಿಂದಿ ಲೇಖಕರು ವಿಜೃಂಭಿಸುವುದು ಮತ್ತು ಹೆಚ್ಚಿನ ಕಾರ್ಯಕ್ರಮಗಳು 'ರಾಷ್ಟ್ರೀಯ ನೆಲೆಯಲ್ಲಿ' ಪ್ರಖ್ಯಾತರಾದವರ ಸುತ್ತ ನಡೆಯುವುದು, ಪ್ರಾಯಶಃ, ಅನಿವಾರ್ಯ ಮತ್ತು ಅಂತಹ ಉತ್ಸವಗಳಲ್ಲಿ ಭಾಗವಹಿಸುವುದು ಅಥವಾ ಬಿಡುವುದು ಲೇಖಕರ ಆಯ್ಕೆಗೆ ಬಿಟ್ಟದ್ದು."

■ ಸಿ. ಎನ್. ರಾಮಚಂದ್ರನ್

(ಕೃಪೆ: ಅವಧಿ)

ನಡೆಯುವ ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಕನ್ನಡದ ಸಂಸ್ಕೃತಿಯಾಗಲೀ, ಕನ್ನಡದ ಲೇಖಕರಿಗಾಗಲಿ ಕನಿಷ್ಠ ಗೌರವವೂ ದೊರೆಯುವುದಿಲ್ಲವೆಂಬುದು ನಮ್ಮೊಡನೆ ಮಾತನಾಡಿದವರ ಅಭಿಪ್ರಾಯ. ಇವುಗಳನ್ನು ನಾಗಭೂಷಣ್ ಅವರು ಎತ್ತಿ ತೋರಿಸಿದರೆ ಅವುಗಳನ್ನು ಸರಿಪಡಿಸಿಕೊಳ್ಳುವ ಸಂಯಮ ತೋರಿಸದ ಸಂಘಟಕರು ಮತ್ತು ವಿಕ್ರಮ್ ಸಂಪತ್ ಪ್ರಶ್ನೆಯೆತ್ತಿದ ನಮ್ಮನ್ನು ಸಹಿಷ್ಣುತೆಯ ಮಾಫಿಯಾಗಳೆಂದು ಹಣೆಪಟ್ಟಿ ಹಚ್ಚುತ್ತಾರೆ. ಆ ಮೂಲಕ ಕನ್ನಡಕ್ಕೆ, ಕನ್ನಡದ ಲೇಖಕರಿಗೆ, ಕನ್ನಡದ ಮನಸ್ಸುಗಳಿಗೆ ಅಪಮಾನವೆಸಗುತ್ತಾರೆ, ಕನಿಷ್ಠಮಟ್ಟದ ಪ್ರಜ್ಞೆಯೂ ಇಲ್ಲದೆ ತಮ್ಮ ಅಸಹಿಷ್ಣುತೆಯನ್ನು ಪ್ರದರ್ಶಿಸುತ್ತಾರೆ. ಎರಡು ಭಿನ್ನ ನಿಲುವುಗಳ ಗುಂಪುಗಳ ನಡುವೆ ಸಂವಹನ ಸಾಧ್ಯ ವಾಗುವುದು ಖಂಡಿತವಾಗಿಯೂ ಸಾಧ್ಯ. ಆದರೆ ಬಿಜೆಪಿಯನ್ನು ಪ್ರಶ್ನಿಸಿದರೆ ಪಾಕಿಸ್ತಾನಕ್ಕೆ ಕಳಿಸುವ, ಧರ್ಮದ ಅನುಯಾಯಿಗಳ ಅತಿರೇಕ ಪ್ರಶ್ನಿಸಿದರೆ ಕೊಲೆ ಬೆದರಿಕೆ ಹಾಕುವ, ಭಿನ್ನದನಿಯ ಪ್ರಶ್ನೆಗಳನ್ನು ಸ್ವೀಕರಿಸಲು ಸಹ ಒಪ್ಪದ, ನಿರಾಕರಣೆಯಂತಹ ಸಣ್ಣ ಅಂಶವನ್ನೂ ಸ್ವೀಕರಿಸದ, ವಿಮರ್ಶೆಯನ್ನು ಕೇಳಿಸಿಕೊಳ್ಳದವರ ಜೊತೆಗೆ ಯಾವ ಸಂಬಂಧವೂ ಸಾಧ್ಯವಿಲ್ಲ. ವಿಕ್ರಮ್ ಸಂಪತ್‌ರ ಲೇಖನಗಳನ್ನು ಸೂಕ್ಷ್ಮವಾಗಿ ಓದಿದರೆ ಅದು ಮೇಲೆ ವಿವರಿಸಿದ ಬಲಪಂಥದವರ ಜನಪ್ರಿಯ ಗುಣಗಳನ್ನೇ ಧ್ವನಿಸುತ್ತವೆ. ಅಭಿಪ್ರಾಯವನ್ನು ಒಪ್ಪದವರ ವಿರುದ್ಧ ಅಪಪ್ರಚಾರ ನಡೆಸುವ, ಭಿನ್ನ ವಾದಗಳನ್ನು ಕೇಳಲು ಸಿದ್ಧವಿಲ್ಲದ, ಏಕಮುಖಿ ಸಂಸ್ಕೃತಿ-ವಾದವನ್ನು ಇತರರ ಮೇಲೆ ಹೇರುವ ಪಂಥವೊಂದರ ಸುಳ್ಳುಬುರುಕರೊಡನೆ ಗುರುತಿಸಿಕೊಳ್ಳುವುದು ಜೀವಪರ ನಿಲುವಿರುವ ಯಾರಿಗಾದರು ಆಗದೆ ಇರುವ ಸಂಗತಿ.




ಟಿ.ಕೆ. ದಯಾನಂದ್

ಆರಿಫ್ ರಾಜ



■ ಟಿ.ಕೆ. ದಯಾನಂದ್, ಆರಿಫ್ ರಾಜ

ಹುಚ್ಚ ವೆಂಕಟ್‌ನ ಇಂದಿನ ಪರಿಸ್ಥಿತಿಗೆ ಯಾರು ಹೊಣೆ



ವೆಂಕಟ ಮೊದಲೇ ಅರೆಹುಚ್ಚ. ಆತನಿಗೆ ಹೈ ಬೀಪಿ, ಸ್ಕಿಜೋಫೇನಿಯಾ ಮುಂತಾದ ಕಾಯಿಲೆಗಳಿವೆ. ಅಂಥಾ ವ್ಯಕ್ತಿಯನ್ನು ತಮ್ಮ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಜೈಲು ಪಾಲಾಗುವಂತೆ ಮಾಡಿದ್ದು ಯಾರು?

ಜಗತ್ತಿನ ಮೂಲೆಮೂಲೆಗಳಲ್ಲೂ ತನ್ನ ಫ್ಯಾನ್ಸ್ ಇದ್ದಾರೆ ಎಂದು ಅಬ್ಬರಿಸುತ್ತಾನೆ ವೆಂಕಟ್. ಆದರೆ ಇವತ್ತು ಜೈಲಿನೊಳಗೆ ಕೊಳೆಯುತ್ತಾ ಬಿದ್ದಿರುವ ಇವನಿಗೆ ಜಾಮೀನು ಕೊಟ್ಟು ಬಿಡಿಸಿಕೊಳ್ಳಲು ಒಬ್ಬನೂ ಮುಂದೆ ಬರುತ್ತಿಲ್ಲ! ವೆಂಕಟ ಪೂರ್ತಾ ಹುಚ್ಚನಾಗುವ ಹಾದಿಯಲ್ಲಿದ್ದಾನೆ. ಈ ಅನಾಹುತಕ್ಕೆ ಹೊಣೆ ಯಾರು?

ಇವತ್ತು ಎಲ್ಲೆಡೆ ಹುಚ್ಚ ವೆಂಕಟ್‌ನದೇ ಸುದ್ದಿ. ಸಾಮಾನ್ಯ ಜನರು ವಿಧಾನ ಪರಿಷತ್ ಚುನಾವಣೆ ಬಗ್ಗೆ ಮಾತಾಡುತ್ತಿಲ್ಲ, ವಿಧಾನಸಭೆಯೊಳಗೆ ನಡೆಯುತ್ತಿರುವ ಬಿಸಿಬಿಸಿ ಕಲಾಪಗಳ ಬಗ್ಗೆ ಚರ್ಚಿಸುತ್ತಿಲ್ಲ. "'ಬಿಗ್ ಬಾಸ್'ನಿಂದ ಗೆಟ್‌ಔಟ್ ಆಗಿ, ಅಂಬೇಡ್ಕರ್ ಬಗ್ಗೆ ಅದೇನೋ ಮಾತಾಡಿ ಜೈಲಿಗೆ ಹೋದನಲ್ಲಾ ಹುಚ್ಚ ವೆಂಕಟ್, ಅವನ ಗತಿ ಏನಾಯ್ತು?" ಎಂದು ಜನ ಮಾತಾಡುತ್ತಿದ್ದಾರೆ! ಈ ಮಟ್ಟಿಗೆ ಹುಚ್ಚ ವೆಂಕಟ್ ಫೇಮಸ್ ಆಗಿದ್ದಾನೆ. ಏನು ಹೆಸರು ಬಂದರೇನು, ಕೈಗಿಲ್ಲ ಬಾಯಿಗಿಲ್ಲ. ಇವತ್ತು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದೊಳಗೆ ಕೊಳೆಯುತ್ತಾ ಬಿದ್ದಿರುವ ಹುಚ್ಚ ವೆಂಕಟ್‌ಗೆ ಜಾಮೀನು ಕೊಡುವವರೂ ದಿಕ್ಕಿಲ್ಲ! ಆವತ್ತು ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಬಗ್ಗೆ ಹಗುರವಾಗಿ ಮಾತನಾಡಿದ ಅಂತ ಕೇಸು ಬಿತ್ತಲ್ಲಾ, ಆವತ್ತು ಹುಚ್ಚನ ಸೋದರ ಕುಶಾಲ್ ಬಾಬು ಅವನನ್ನು ಪುಸಲಾಯಿಸಿ ಪೊಲೀಸರ ಮುಂದೆ ಶರಣಾಗತಿ ಮಾಡಿಸಿದ್ದು ಸರಿಯಷ್ಟೇ. ಮುಂದೇನಾಯ್ತು? ಪೊಲೀಸರು ಅವನನ್ನು ನ್ಯಾಯಾಲಯಕ್ಕೆ ಒಪ್ಪಿಸಿದರು. ಹುಚ್ಚನ ಕಡೆಯ ವಕೀಲರು ಬಂದು ವಾದ ಮಂಡಿಸುವ ಮುನ್ನವೇ ಸನ್ಮಾನ್ಯ ಹುಚ್ಚ ವೆಂಕಟ್ ನ್ಯಾಯಾಲಯದ ಮುಂದೆ ತಾನು ಅಂದಿದ್ದು ತಪ್ಪು, ಕ್ಷಮಿಸಿಬಿಡಿ ಸ್ವಾಮಿ ಎಂದು ತಪ್ಪೊಪ್ಪಿಕೊಂಡಿದ್ದ! ಈತ ಬುದ್ಧಿವಂತನೇ ಆಗಿದ್ದರೆ ತಾನು ಯಾವ ಸಂದರ್ಭದಲ್ಲಿ

ಅರಿವುಗೇಡಿ ಆಂಕರ್, ಜೈಲುಪಾಲಾದ ವೆಂಕಟ

ಆವತ್ತು ನ್ಯೂಸ್ ಚಾನಲ್ ಒಂದಕ್ಕೆ ಸಂದರ್ಶನ ಕೊಡುತ್ತಿದ್ದ ಹುಚ್ಚ ವೆಂಕಟೇಶ್, 'ರೇಪ್ ಸಂತ್ರಸ್ತೆಯರ ... ಮಾತಾಡುತ್ತಿರುವಾಗ "ರೇಪ್ ಮಾಡಿದವರನ್ನು ಸಾಯಿಸಬೇಕು" ಎಂದು ಆವೇಶದಲ್ಲಿ ಮಾತನಾಡಿದ್ದು ನಿಜ. ... ಸಂದರ್ಶಕ "ಇದಕ್ಕೆಲ್ಲಾ ನಮ್ಮ ಕಾನೂನಿನಲ್ಲಿ ಅವಕಾಶ ಇಲ್ಲವಲ್ಲ ಸಾರ್" ಎಂದರು.

"ಕಾನೂನು.. ಯಾರ್ ಮಾಡಿದ್ದು?" ಎಂದು ಹುಚ್ಚ ಅಬ್ಬರಿಸಿದಾಗ ಸಂದರ್ಶಕಿಯೊಬ್ಬಳು ಮೆಲ್ಲಗೆ "ಅಂಬೇಡ... ಎಂದು ಉಸುರಿದ್ದಳು. ಆವಾಗ ದಿಢೀರ್ ರೈಜಾದ ಹುಚ್ಚ ವೆಂಕಟ್ "ನನ್ ಯಕ್ಕಾ" ಎಂದುಬಿಟ್ಟ!

ಹಾಗಾದರೆ ಕಾನೂನು, ಐಪಿಸಿ ಸೆಕ್ಷನ್ ಬರೆದಿದ್ದು ಅಂಬೇಡ್ಕರಾ? ಅವರು ಸಂವಿಧಾನವೆಂಬ ಪ್ರಜಾಪ್ರಭ... ಕಿರೀಟರಚಿಸಿ, ಅದರಡಿ ನ್ಯಾಯ ನೀತಿ ಮೂಲ ಸಾಗಬೇಕೆಂದು ತಿಳಿಸಿದ್ದರು ಅಷ್ಟೇ. ಐಪಿಸಿ ಸೆಕ್ಷನ್‌ಗಳನ್ನು ರಚ... ಆಗಿನ ಬ್ರಿಟಿಷರು. ಈಗ ಕೆಲವು ಸೆಕ್ಷನ್‌ಗಳಿಗೆ ಸರ್ಜರಿ ನಡೆದು ತಿದ್ದುಪಡಿ ಮಾಡಲಾಗುತ್ತದೆ. ಇದನ್ನೂ ... ಕಾನೂನು ತಜ್ಞರು ಮಾಡುತ್ತಾರೆ. ಅರಿವುಗೇಡಿ ಆಂಕರ್ ತಪ್ಪಾಗಿ ಅರ್ಥೈಸದಿದ್ದರೆ ಹುಚ್ಚವೆಂಕಟ್ ಏಕೆ ಅಂಬೇಡ... ಅಪಮಾನ ಮಾಡುತ್ತಿದ್ದ?

ಹಾಗಂದೆ? ತಾನು ಹಾಗೆನ್ನಲು ಪ್ರಚೋದಿಸಿದವರ್‍ಯಾರು? ಎಂಬುದನ್ನು ಸಂದರ್ಭಸಹಿತ ವಿವರಿಸುತ್ತಿದ್ದ. ಆದರೆ ಹುಚ್ಚ ಹಾಗೆ ಮಾಡಲೇ ಇಲ್ಲ, ಈತ ತಪ್ಪೊಪ್ಪಿಕೊಂಡ ನಂತರ, ನ್ಯಾಯಾಲಯದ ಅವಧಿ ಮೀರಿದಾಗ ಈತನ ಕಡೆಯ ವಕೀಲರು ಓಡೋಡಿ ಬಂದರು. ತಡವಾಗಿದ್ದಕ್ಕೆ ಜೆರಾಕ್ಸ್ ಮಾಡಿಸಲು ಹೋಗಿಬಿಟ್ಟಿದ್ದೆ ಎಂಬ ಕಾರಣ ಕೊಟ್ಟಿದ್ದರು! ಮಾನ್ಯ ನ್ಯಾಯಾಲಯ ವೆಂಕಟ್ ತಾವೇ ತಪ್ಪೊಪ್ಪಿಕೊಂಡಿರುವುದರಿಂದ ವಾದ ಮಂಡಿಸುವ ಅವಶ್ಯಕತೆಯೇ ಇಲ್ಲ ಎಂದು ತಿಳಿಸಿ, ಡಿಸೆಂಬರ್ 4, 2015 ರವರೆಗೆ ಆತ ಜೈಲಿನಲ್ಲಿರಲಿ ಎಂದು ಆದೇಶಿಸಿತ್ತು. ಸೋ.. ವೆಂಕಟ್ ಜೈಲಿಗೆ ಹೋದ. ಕೆಲವು ಪೊಲೀಸ್ ಅಧಿಕಾರಿಗಳ



ಸಹಾಯದಿಂದ ಹುಚ್ಚ ವೆಂಕಟ್‌ಗೆ ಮಾನಸಿಕ ತಜ್ಞರಿಂದ ಪರೀಕ್ಷೆ ಮಾಡಿಸಲಾಯ್ತು. ಆಗ ಈತನಿಗೆ 'ಸ್ಕಿಜೋಫೇನಿಯಾ' ಎಂಬ ಕಾಯಿಲೆ ಇರುವುದು ಗೊತ್ತಾಯಿತು. ಹುಚ್ಚ ವೆಂಕಟನ ಸೋದರ ಕುಶಾಲ್ ಬಾಬು ಈ ಪಾಯಿಂಟ್ ಇಟ್ಟುಕೊಂಡು ತಮ್ಮ ವಕೀಲರ ಮೂಲಕ ಜಾಮೀನಿಗೆ ಅರ್ಜಿ ಹಾಕಿಸಿದ್ದರು. ನಾಲ್ಕು ದಿನಗಳಲ್ಲಿ ಜಾ... ಮಂಜೂರಾಯಿತು. 'ಹುಚ್ಚ ವೆಂಕಟ್‌ಗೆ ಬೇಲ್ ನಾಳೆ ಹೊರಬರ್‍ತಾನೆ, ಮುಂದೇನು?' ಎ... ಮೀಡಿಯಾಗಳು ಬಾಯಿ ಬಾಯಿ ಬಡಿದುಕೊಂಡು ಹೊಟ್ಟೆ ತುಂಬಿಸಿಕೊಂಡವು! ಆದರೆ ಜಾ... ಮಂಜೂರು ಮಾಡಿದ್ದ ನ್ಯಾಯಾಲಯ ಹುಚ್ಚ ವ... ವೈಯಕ್ತಿಕವಾಗಿ 25 ಸಾವಿರ ರೂಪಾಯಿ ಕಟ್ಟ... ಜೊತೆಗೆ ಆತನ ಪರವಾಗಿ ಯಾರಾದರೂ ಸರ್ಕಾರಿ ನ... ಶೂರಿಟಿ ಕೊಡಬೇಕು ಎಂಬ ಷರತ್ತು ವಿಧಿಸಿತು... ಷರತ್ತುಗಳನ್ನು ಗೌರವಿಸಿದರೆ ತಾನೆ ಬೇಲ್ ಪ್ರೊ... ಕಂಪ್ಲೀಟ್ ಆಗುವುದು! 25 ಸಾವಿರ ರೂ ಭರಿಸು... ಇಲ್ಲ, ಸರ್ಕಾರಿ ನೌಕರರೂ ಬರಲಿಲ್ಲ! ಸೋ, ವೆಂಕಟ್‌ನಿಗೆ ಮಾನ್ಯ ನ್ಯಾಯಾಲಯದಿಂದ ಜಾ... ದೊರೆತಿದ್ದರೂ ಆತ ಜೈಲಿಂದ ಹೊರಬರಲಾಗದೆ ಕೊಳೆಯಬೇಕಾದ ದುಸ್ಥಿತಿ ಬಂದೊದಗಿತು! ಅರಿವುಗೇಡಿ ಮಾಧ್ಯಮಗಳು ಏನೇನೋ ಒದರತೊಡ... ಹುಚ್ಚ ವೆಂಕಟ್ ಜೈಲೊಳಗೆ ಕಿರುಚಾಡುತ್ತಿದ್ದಾನಂತೆ. ... ಗೋಡೆಗೆ ತಲೆ ಚಚ್ಚಿಕೊಂಡು ರಕ್ತ ಸುರಿಯುತ್ತಿದೆ... ಮುಂತಾಗಿ ರೋಚಕ ವರದಿ ಮಂಡಿಸುವುದರ ... ಹುಚ್ಚ ವೆಂಕಟ್‌ನ ಸಿನಿಮಾ ರೀಲು ಬಿತ್ತರಿಸಿ, ... ಮ್ಯಾಚ್ ಮಾಡಿ 'ಜೀವನ ಚಕ್ರ' ಚಿತ್ರದ 'ನನ್ನವರು ... ಇಲ್ಲ... ಯಾರಿಗೆ ಯಾರೂ ಇಲ್ಲ' ಎಂಬ ... ಹಾಕಿಬಿಟ್ಟವು! "ನನ್ಮಗಂದ್ ಯಾರೂ ಶೂರಿಟಿ ಕೊ... ಲ್ಲೋ.. ಇಷ್ಟು ಫ್ಯಾನ್ಸ್ ಇದ್ದೀರಿ ಎಲ್ ಸಾಯ್ತಿದ್ದೀ... ಎಂಬಿತ್ಯಾದಿಯಾಗಿ ಮಿಮಿಕ್ರಿ ಡೈಲಾಗ್‌ಗಳನ್ನು ಉ... ಬಿಟ್ಟವು! ಇವರಿಗೇನು ಮನುಷ್ಯತ್ವವೇ ಇಲ್ಲವಾ? ... ವೆಂಕಟ್ ಜೈಲಿನೊಳಗೆ ನಿಜವಾಗಿಯೂ ಅರಚಾಡಿ ... ಚಚ್ಚಿಕೊಂಡನಾ? ಇವರು ಹೋಗಿ ನೋಡಿದ್ದರಾ? ಇ... ಗಮನಿಸಿ ವಾಸ್ತವಾಂಶವನ್ನು ತೆರೆದಿಡಲೆಂದೇ ಪತ್ರಿಕೆ ...

ಸಿನಿಮಾ ವ್ಯಾಮೋಹದಿಂದ ಹುಚ್ಚರಾದವರೆಷ್ಟೋ!

ಎಲ್. ವೆಂಕಟ್‌ರಾಮ್ ಉರುಫ್ ಹುಚ್ಚ ವೆಂಕಟ್‌ನ ಇಂದಿನ ದುಸ್ಥಿತಿಗೆ ಆತನ ಸಿನಿಮಾ ಹುಚ್ಚೇ ಕಾರಣ ಎನ್ನುವವರಿದ್ದಾರೆ. ಅದರಲ್ಲೂ 'ಹೀರೋ' ಆಗಿಯೇ ಮಿಂಚಬೇಕು ಎಂಬ ಕೆಟ್ಟ ಹಠ ಇವನದ್ದು! ಇವನ ರೂಪಕ್ಕೆ, ದಢೂತಿ ದೇಹಕ್ಕೆ, ನಡೆ-ನುಡಿಗೆ ವಿಲನ್ ಪಾತ್ರವೇ ಹೊರತು ಇನ್ನಾವ ಪಾತ್ರವೂ ಸೂಟ್ ಆಗುವುದಿಲ್ಲ! ಹೀಗೆ 'ಹೀರೋ' ಆಗಬೇಕು ಎಂದು ಗಾಂಧಿನಗರಕ್ಕೆ ಕಾಲಿಟ್ಟ ವೆಂಕಟ್, ಯಾರೋ ಗೆಳೆಯರನ್ನು ನಿರ್ಮಾಪಕರನ್ನಾಗಿಸಿ 'ಸ್ವತಂತ್ರಪಾಳ್ಯ' ಎಂಬ ಸಿನಿಮಾ ತೆಗೆಸಿದ್ದ. ಅದು ಸೋತಿತ್ತು, ಎರಡನೇ ಸಲ ತನ್ನ ಅಪ್ಪನನ್ನು ಕಾಡಿಬೇಡಿ ಇರುವುದೊಂದು ಸೈಟು ಮಾರಿಸಿ 50 ಲಕ್ಷ ಕಿತ್ತುಕೊಂಡು ಬಂದು 'ಹುಚ್ಚ ವೆಂಕಟ್' ಸಿನಿಮಾ ತೆಗೆದ. ಇದೂ ಸೋತಿತು: ಅತ್ತ ಕುಟುಂಬವೂ ಮುಳುಗಿತು. ಇತ್ತ ಇವನೂ ಅರೆಹುಚ್ಚನಾದ!



ಈ ಸಿನಿಮಾ ಹುಚ್ಚಿನ ಮಧ್ಯೆ 'ಬಿಗ್ ಬಾಸ್' ಮನೆಗೆ ಹೋಗಿ ಒಂದಿಷ್ಟು ಮನರಂಜನೆ ನೀಡಿದ. ಜೊತೆಗೆ ತಾನೂ ಹೆಸರು ಮಾಡಿದ. ಆದರೆ ಈ ಜನಪ್ರಿಯತೆಯನ್ನು ಸದ್ಬಳಕೆ ಮಾಡಿಕೊಂಡನೆ? ಪಾಪ ಜೈಲಿಗೆ ದಾರಿ ಮಾಡಿಕೊಂಡ! ಇನ್ಯಾವರೂ ನಾಳೆ ಜೈಲಿಂದ ಬಿಡುಗಡೆಯಾದ ಮೇಲೆ 'ಪೋರ್ಕಿ ಹುಚ್ಚ ವೆಂಕಟ್' ಮಾಡ್ತೀನಿ ಎನ್ನುತ್ತಾನೆ! ಈತ ಮನೆಗೆ ಬಂದ್ರೆ ಮತ್ತೆ ಸಿನಿಮಾ ತೆಗೆಯಲು ಮನೆ ಮಠ ಮಾರಿಸುತ್ತಾನೆ ಅಂತ ಇವನ ಕುಟುಂಬದವರು 'ನಿಮ್ಹಾನ್ಸ್'ಗೆ ಸೇರಿಸುವಂತೆ ಪೊಲೀಸರನ್ನೇ ವಿನಂತಿಸುತ್ತಿದ್ದಾರೆ!


ಹುಚ್ಚ ವೆಂಕಟ್ ಕತೆ ಇದಾದರೆ, ಇನ್ನೊಂದಿಬ್ಬರು ಸಿನಿಮಾ ವ್ಯಾಮೋಹಿಗಳ ಕತೆ ಹೀಗಿದೆ ಕೇಳಿ..

ನಿಮಗೆ ನಾಗರಾಜು ಅಲಿಯಾಸ್ ಕಾನಿಷ್ಕಾ ನಾಗರಾಜ್ ಎಂಬಾತನ ಬಗ್ಗೆ ಗೊತ್ತಿದೆಯಾ? ಈ ಹುಡುಗ ಶಿರಸಿ ಕಡೆಯವ. ಸಿನಿಮಾ ನಟನಾಗಬೇಕೆಂಬ ಹುಚ್ಚಿನಿಂದ ಬೆಂಗಳೂರಿಗೆ ಬಂದಿದ್ದ. ಅದು ಹೇಗೋ ಹರಸಾಹಸಪಟ್ಟು ಖ್ಯಾತ ನಿರ್ದೇಶಕ ದಿನೇಶ್‌ಬಾಬುರವರ ಪರಿಚಯ ಮಾಡಿಕೊಂಡ. 'ಸುಪ್ರಭಾತ' ಚಿತ್ರ ಮಾಡಿ ಆದಾಗಲೇ ಫೇಮಸ್ ಆಗಿದ್ದ ದಿನೇಶ್ ಬಾಬು, ನಂತರ ಉಷಾಕಿರಣ್ ಮೂವೀಸ್‌ಗಾಗಿ 'ಚಿತ್ರ' ಸಿನಿಮಾ ಮಾಡುವ ಸಿದ್ಧತೆಯಲ್ಲಿದ್ದರು. ಪ್ರಭುದೇವನ ತಮ್ಮ ನಾಯಕ ನಟ. ಅವನ ಗೆಳೆಯರ ಬಳಗದಲ್ಲಿ ಅನಿರುದ್, ಮಾಸ್ಟರ್ ಆನಂದ್ ಜೊತೆಗೆ ಈ ಶಿರಸಿ ನಾಗರಾಜನೂ ಸೇರಿಕೊಂಡ! 'ಚಿತ್ರ' ಸೂಪರ್ ಹಿಟ್ ಆಯಿತು. ದಿನೇಶ್ ಬಾಬು ಅವರ ಮುಂದಿನ ಸಿನಿಮಾ 'ಚಿಟ್ಟೆ'ಯಲ್ಲೂ ನಾಗರಾಜ್‌ಗೆ ಪಾತ್ರ ಸಿಕ್ಕಿತು.

ಹೀಗೆ ಎರಡು ಸಿನಿಮಾಗಳಲ್ಲಿ ನಟಿಸಿದರೂ ನಾಗನಿಗೆ ಮುಂದೆ ಅವಕಾಶಗಳೇ ಸಿಗಲಿಲ್ಲ, ಹೊಟ್ಟೆಗಿಲ್ಲದೆ ಕಾನಿಷ್ಕಾ ಅಂಗಳದಲ್ಲಿ ಕೈಚಾಚಿದ, ಅಕ್ಷರಶಃ ಹುಚ್ಚನಾಗಿ ಅಲೆದು ಹಾಳಾದ. ಈಗ ಅವನೆಲ್ಲಿರುವನೋ?

ನಿಮಗೆ 'ಹಳ್ಳಿ ಹೈದ ಪ್ಯಾಟೆಗ್ ಬಂದ' ರಿಯಾಲಿಟಿ ಶೋನ ರಾಜೇಶ್ ಗೊತ್ತಲ್ಲಾ. ಅವನನ್ನು ಹೆಚ್.ಡಿ.ಕೋಟೆ ಕಾಡಿನಿಂದ ಬೆಂಗಳೂರಿಗೆ ಕರೆ ತಂದು ಹಾಳು ಮಾಡಿದ್ದು ಟಿವಿ ಜನ. ಇವರು ಅರ್ಧ ಹಾಳುಗೆಡವಿದ ನಂತರ ರಾಜೇಶನನ್ನು ಯಾವನೋ ಪಾಪಿ 'ಜಂಗಲ್ ಜಾಕ್' ಸಿನಿಮಾಗೆ ಹೀರೋ ಮಾಡಿದ. ಸಿನಿಮಾವೂ ಓಡಲಿಲ್ಲ, ರಾಜೇಶನಿಗೆ ಸರಿಯಾಗಿ ಕಾಸೂ ಸಿಗಲಿಲ್ಲ. ಹಳ್ಳಿ ಬಿಟ್ಟು ಸಿಟಿಗೆ ಬಂದಿದ್ದ ರಾಜೇಶನಿಗೆ ಮೆಂಟೆನ್ ಮಾಡಲು ಕಷ್ಟವಾಯ್ತು, ಮುಂದೆ ಇನ್ಯಾವನೋ ಒಬ್ಬ ರಾಜೇಶನನ್ನು ಹಾಕಿಕೊಂಡು 'ಲವ್ ಈಸ್ ಪಾಯಿಸನ್' ಅಂತ ಫಿಲಂ ತೆಗೆದ. ಈ ಸಿನಿಮಾವೂ ಓಡಲಿಲ್ಲ.

ಹೀರೋ ರಾಜೇಶನ ಬದಲು ಬೆತ್ತಲೆ ರಾಣಿ ಪೂನಂ ಪಾಂಡೆಗೆ ಸ್ವಲ್ಪ ಪ್ರಚಾರ ಸಿಕ್ಕಿತು. ರಾಜೇಶ ಮತ್ತೆ ಬಿಕಾರಿಯಾದ. ಈ ಸಿನಿಮಾದ ನಿರ್ಮಾಪಕರು ಕೊಟ್ಟಿದ್ದ ಚೆಕ್‌ಗಳು ಬೌನ್ಸ್ ಆದವು. ರಾಜೇಶ ಮೈಸೂರಿನ ತನ್ನ ಬಾಡಿಗೆ ಮನೆಯಲ್ಲಿ, ಮಹಡಿ ಮೇಲಿಂದ ಕೆಳಗೆ ಗೇಟ್‌ನ ಮೇಲೆ ಹಾರಿ ಜೀವಬಿಟ್ಟ!



ಠಾಣೆಯಲ್ಲಿ ವೆಂಕಟ್ ರಾತ್ರಿ ಕಳೆದದ್ದು ಹೀ...

ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿದ ಆರೋಪಕ್ಕಾಗಿ ಬೆಂಗಳೂರೊಂದರಲ್ಲಿಯೆ ಹುಚ್ಚ ... ವಿರುದ್ಧ ನಾಲ್ಕು ದೂರು ದಾಖಲಾದವು. ಅಂಬೇಡ್ಕರ್ ಸೇನೆಯವರು ಹುಚ್ಚನನ್ನು ಹುಡುಕಿ ಮುಖಕ್ಕೆ ... ಬಳಿದರು! ಪೊಲೀಸರು ಅರೆಸ್ಟ್ ಮಾಡಲು ಹುಡುಕುತ್ತಿದ್ದಾಗ ಹುಚ್ಚ ವೆಂಕಟ್ ಎಲ್ಲಾ ಠಾಣೆಗಳನ್ನು ಬಿಟ್ಟು ಬಸವೇಶ್ವ... ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದ. ಏಕೆಂದರೆ ಇಲ್ಲಿ ಎಸಿಪಿ ಎಸ್.ಕೆ. ಉಮೇಶ್ ಇದ್ದರು! "ನಾನು ಗೌರ... ಸಾರ್" ಎಂದು ಅನುಕಂಪ ಗಿಟ್ಟಿಸಿಕೊಂಡು ಒದೆ ಬೀಳುವುದನ್ನು ತಪ್ಪಿಸಿಕೊಳ್ಳುವ ಇರಾದೆಯಿತ್ತೇನೋ ಹು... ಆವತ್ತು 18-11-2015 ಬುಧವಾರ ಸಂಜೆ ಪೊಲೀಸರ ಮುಂದೆ ಶರಣಾಗತನಾಗಿದ್ದ ವೆಂಕಟ್, ರಾತ್ರಿ ... ಎಸಿಪಿಯವರ ಕಚೇರಿಯಲ್ಲೇ ನೆಲದ ಮೇಲೆಯೇ ಮಲಗಿದ್ದ. ಮಧ್ಯೆ ಮಧ್ಯೆ 3-4 ಸಲ ಟೀ ತರಿಸಿಕೊಂಡು ಕುಡಿದನಂತೆ. ಪಿಸಿಯೊಬ್ಬರ ಬಳಿ "ಎಣ್ಣೆ" ತಂದುಕೊಡಲು ಆಗುತ್ತಾ? ಎಂದು ಕೇಳಿ ಬೈಸಿಕೊಂಡನಂತೆ!

ಮಾರನೆಯ ದಿನ ನ್ಯಾಯಾಧೀಶರ ಮುಂದೆ ತಾನು ತಪ್ಪು ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ ವೆಂಕಟ್ ... ಪಾಲಾದ. ಆತ ಜೈಲಿನೊಳಗೆ ಎಂಟ್ರಿ ಹಾಕಿದರೆ, ಅಲ್ಲೂ ಈತನಿಗೆ ಜೈಕಾರ ಬಿದ್ದವಂತೆ! ಆದರೆ ವಿಪರೀತ ಅ... ಆಗಿದ್ದ ವೆಂಕಟ್ ಜೈಲು ಅಧಿಕಾರಿ ಶೇಷಮೂರ್ತಿಯವರನ್ನು ರಿಕ್ವೆಸ್ಟ್ ಮಾಡಿ "ನನ್ನನ್ನು ಒಂಟಿಯಾಗಿ ಬಿಡಿ ... ನೆಮ್ಮದಿಯಾಗಿ ನಿದ್ರಿಸಬೇಕು" ಎಂದು ಗೋಗರೆದನಂತೆ!

ನ್ಯಾಯಾಲಯ ಈಗ ಹುಚ್ಚ ವೆಂಕಟ್‌ಗೆ ಜಾಮೀನು ಕೊಟ್ಟಿದ್ದರೂ ಹಲವು ಶರತ್ತುಗಳನ್ನು ವಿಧಿಸಿದೆ. ... ವೆಂಕಟ್ ಇನ್ನು ಮುಂದೆ ಬಾಯಿಗೆಬಂದಂತೆ ಮಾತಾಡುವಂತಿಲ್ಲ, ಅದರಲ್ಲೂ ಕೋಮು ಭಾವನೆ ಕೆರಳಿಸು... ಮಾತಾಡುವಂತಿಲ್ಲ! ದೇಶಕ್ಕಾಗಿ ದುಡಿದ ಮಹನೀಯರನ್ನು ಹೀಗಳೆಯುವಂತಿಲ್ಲ! ಇದನ್ನೆಲ್ಲಾ ಮರೆತು ಮತ್ತೆ ಹು... ವರ್ತಿಸಿದರೆ ಮುಂದೆ ಜಾಮೀನುರಹಿತ ವಾರಂಟ್ ಇಶ್ಯೂ ಆಗುತ್ತೆ! ವೆಂಕಟ್ ಈ ಷರತ್ತುಗಳಿಗೆ ಒಪ್ಪಿಕೊಂಡ... ಹಾಕಿದ ಮೇಲೆಯೇ ಜಾಮೀನು ದೊರಕಿದೆ.

...ೋದರರೇ ನಗುತ್ತಾರೆ!

...ಹುಚ್ಚ ವೆಂಕಟ್‌ನ ಬಗ್ಗೆ ಏನು ಹೇಳ್ತೀರಿ? ಎಂದು ...ನ ಸೋದರರನ್ನು ಕೇಳಿದರೆ ಉತ್ತರಿಸುವ ಮೊದಲು ...ೇ ನಗಾಡುತ್ತಾರೆ!

...ಹುಚ್ಚ ವೆಂಕಟ್‌ಗೆ ಇಬ್ಬರು ಸೋದರರು ಹಾಗೂ ... ಸೋದರಿ ಇದ್ದಾರೆ. ಹಿರಿಯ ಸೋದರ ನಟ ಕುಶಾಲ್ ...ಬು. ಕೆಲವೇ ವರ್ಷಗಳ ಹಿಂದೆ ಕುಶಾಲ್ ಬಾಬು ...ೇ ನಟ, ನಿರ್ಮಾಪಕ, ನಿರ್ದೇಶಕರಾಗಿ 'ಆಚಾರ್ಯ' ...ೊಂದು ಸಿನಿಮಾ ತೆಗೆದಿದ್ದರು. ಅದು ಫ್ಲಾಪ್ ಆಗಿತ್ತು, ...ಲ್ ಬಾಬು ಮತ್ತೆ ಸಿನಿಮಾ ಸಹವಾಸ ಮಾಡದೆ ... ತಂದೆ ಲಕ್ಷ್ಮಣರಾವ್ ಜೊತೆ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ...ಾರ ಮಾಡಿಕೊಂಡಿದ್ದು ಬಿಟ್ಟರು. ಕುಶಾಲ್ ಬಾಬು ...ೂ ಜಂಟ್ಲ್‌ಮ್ಯಾನ್. ಹುಚ್ಚ ವೆಂಕಟ್‌ಗೆ ಇಂಥವರೊಬ್ಬರು ...ೋದರರಿದ್ದಾರಾ ಎಂದು ಆಶ್ಚರ್ಯವಾಗುತ್ತದೆ! ...ೋಫೇನಿಯಾ' ಮನೋರೋಗದಿಂದ ಬಳಲುತ್ತಿರುವ ...ಯ ತಮ್ಮ ಹುಚ್ಚ ವೆಂಕಟ್‌ನನ್ನು ಸರಿದಾರಿಗೆ ತರಲು ...ಾಹಸ ಪಡುತ್ತಿದ್ದಾರೆ ಕುಶಾಲ್ ಬಾಬು!

...ಹುಚ್ಚ ವೆಂಕಟ್‌ನ ಇನ್ನೊಬ್ಬ ಸೋದರ ರಘು ಏನಂತಾರೆ ...ತ್ತಾ? "ಅವ್ನಿಗೆ ಹುಚ್ಚೂ ಇಲ್ಲ, ಏನೂ ಇಲ್ಲ, ...ರೋದೇ ಹಾಗೆ! ನಂಬುವವರು ಸಿಕ್ಕಿಬಿಟ್ರೆ ಏನ್ ...ಾದ್ರೂ ನಂಬಿಸಿಬಿಡ್ತಾನೆ! ಕಿವಿಗೆ ಕಾಲಿಫ್ಲವರ್ ಇಟ್ಟು ...ತ್ತಾನೆ!" ಎಂದು ಗಹಗಹಿಸಿ ನಗುತ್ತಾರೆ ರಘು!

...ಹುಚ್ಚ ವೆಂಕಟ್ ಬಿ.ಇ. ಪದವೀಧರನೆಂದೂ, ಸಿನಿಮಾ ...ಡುವುದಕ್ಕೋಸ್ಕರ ಅಪ್ಪನ ಸೈಟು ಮಾರಿಸಿದನೆಂದೂ, ...ಮಾ ತೋಪಾಗಿದ್ದರಿಂದ ಅಣ್ಣನಿಗೆ (ಅವರು ಅಪ್ಪನನ್ನೇ ...' ಎನ್ನುತ್ತಾರಂತೆ) ತುಂಬಾ ಹೆದರುತ್ತಾನೆಂದೂ ...ಧ್ಯಮಗಳ ಮೂಲಕ ಮೊದಲಿಗೆ ಜಗಜ್ಜಾಹೀರು ...ಳಿಸಿದ್ದು ರಘುವೇ! ಅಲ್ಲದೆ ಇವರ ತಾಯಿ ...ಕೊಂಡಾಗ ಹುಚ್ಚ ವೆಂಕಟ್ ಹೈದ್ರಾಬಾದ್‌ನಲ್ಲಿದ್ದನಂತೆ. ...ಯಿಯ ಶವಸಂಸ್ಕಾರಕ್ಕೂ ಬರಲಿಲ್ಲವಂತೆ! ಆದರೆ ...ನೆಯ ದಿನ ಬೆಂಗಳೂರಿಗೆ ಬಂದ ಹುಚ್ಚ ವೆಂಕಟ್ ... ತನ್ನ ತಾಯಿಯ ಕಡೇ ಕಾರ್ಯವನ್ನೂ ...ಡಲಿಲ್ಲವಲ್ಲಾ.. ಎಂದು ಗೋಳಾಡಿದನಂತೆ. ತಮಾಷೆ ...ದರೆ; ಹುಚ್ಚನ ಸೋದರ ರಘು ಈ ಮಾತು ...ುವಾಗಲೂ ನಗುತ್ತಲೇ ಇದ್ದ! ನೀವು ಇದನ್ನು ಖಾಸಗಿ ... ಒಂದರ ಸಂದರ್ಶನದಲ್ಲಿ ಗಮನಿಸಿರಬಹುದು.

...ಇನ್ನೊಂದು ಗಮನಾರ್ಹ ಸಂಗತಿ ಏನೆಂದರೆ; ಹುಚ್ಚ ...ಟ್‌ನ ತಂದೆಯ ಹೆಸರನ್ನು ಕೆಲವು ಮಾಧ್ಯಮಗಳು ...ಣರಾವ್' ಎಂದು ಪ್ರಕಟಿಸಿವೆ. ಆದರೆ ಅಂಬೇಡ್ಕರ್ ...ಹೇಳನಾ ಘಟನೆ ಜರುಗಿದ ನಂತರ ಪೊಲೀಸ್ ...ಟ್ಮೆಂಟ್‌ನಲ್ಲಿ ವೆಂಕಟನ ಅಪ್ಪನ ಹೆಸರು 'ಲಕ್ಷ್ಮಣಗೌಡ' ...ಮ ನಮೂದಾಗಿದೆ! ಏನಿದರ ಮರ್ಮ?!

...ಹುಚ್ಚ ನಿಜಕ್ಕೂ ಗೌಡನಾ?!


...ಹಾರಕ್ಕೆ ತೆರಳಿತ್ತು. ಡಿಯರ್ ರೀಡರ್ಸ್, ಎಲ್. ...ಕಟರಾಮ್ ಉರುಫ್ ಹುಚ್ಚ ವೆಂಕಟ್ ಜೈಲಿನೊಳಗೆ ...ಾಮವಾಗಿದ್ದ! ಹೊರಗಿನ ತಿಂಡಿಗಳು ಬೇಡವೆಂದು ...ನ ಕೈದಿಗಳು ಸೇವಿಸುವ ಆಹಾರವನ್ನೇ ತಾನೂ ...ನುತ್ತಿದ್ದ. ಊಟ ವಾದ ಬಳಿಕ ಅಲ್ಲಿನ ಸಿಬ್ಬಂದಿಗಳಿಂದ ...ರಡು ಬಾಳೆಹಣ್ಣುಗಳನ್ನಷ್ಟೇ ಕೇಳಿ ಪಡೆದುಕೊಳ್ಳುತ್ತಿದ್ದ! ...ದಿನ ಹಾಗೆ ಈಗ ಪದೇಪದೇ 'ಟೀ' ಕೇಳುತ್ತಿರಲಿಲ್ಲ! ... ಭಯಂಕರ ನಿದ್ದೆ ಮಾಡುತ್ತಿದ್ದ ಲಾಕಪ್ ತೆರೆದು ಫೀಲ್ಡಿಗೆ ...ಗೆ ಆಲ್ ಮೋಸ್ಟ್ ಕೈದಿಗಳು ಈತನ ಸುತ್ತುವರಿದು ...ಯುತ್ತಿದ್ದರು. ಅವರೆಲ್ಲರೊಂದಿಗೆ ಅವೇ ಹಳೆಯ ಡೈಲಾಗ್ಸ್ ...ಡೆದುಕೊಂಡು ಆರಾಮವಾಗಿದ್ದ! ಆದರೆ ಜೈಲು ...ಾರಿಗಳು ರೌಂಡ್ಸ್‌ಗೆ ಬಂದಾಗ "ಸಾರ್, ನನಗಿನ್ನೂ ಬೇಲ್ ...ಲ್ವಂತಾ.. ಯಾರೂ ಬಂದು ಗೌರ್ಮೆಂಟ್ ಶೂರಿಟಿ ...ಟ್ಟಿಲ್ವಂತಾ.." ಎಂದು ಕೇಳುತ್ತಿದ್ದ ಇವನ ಸಂಕಟವನ್ನು ...ಸಿದ ಜೈಲು ಸಿಬ್ಬಂದಿಗೆ ಅಯ್ಯೋ ಅನ್ನಿಸುತ್ತಿತ್ತು.

"ಸಾರ್ ನಾನು ಸಾಯುವವರೆಗೂ ನಿಮ್ಮನ್ನು ...ಯೊಲ್ಲ, ಹೇಗಾದ್ರೂ ಮಾಡಿ ನನಗೆ ಜಾಮೀನು ...ಸಲು ಅರೇಂಜ್ ಮಾಡಿ ಪ್ಲೀಸ್.. ನಾನು ಹುಚ್ಚ ... ಸಾರ್" ಎಂದು ಬೇಡಿಕೊಳ್ಳುತ್ತಿದ್ದ. ಡಿಸೆಂಬರ್ 4, ...15 ರಂದು ಹುಚ್ಚ ವೆಂಕಟ್ ಮತ್ತೆ ಕೋರ್ಟ್ ಮುಂದೆ ...ಾಗಬೇಕಿತ್ತು, ಅವತ್ತು ಜೈಲು ಅಧಿಕಾರಿಗಳು ಹಾಗೂ ...ದಿ ವರ್ಗದವರೇ 25 ಸಾವಿರ ರೂಪಾಯಿ ಕಟ್ಟಲು ... ಮಾಡಿಕೊಂಡಿದ್ದರು! ಹೊಸ ವಕೀಲ ರೊಬ್ಬರನ್ನು ...ು ಹುಚ್ಚ ವೆಂಕಟ್‌ಗೆ ಕಾನೂನಿನ ನೆರವು ಕೊಡಿಸಲು ...ಸುತ್ತಿದ್ದರು. ಅಷ್ಟರಲ್ಲೇ ವೆಂಕಟ್‌ನ ಕರುಣಾಜನಕ ... ನೋಡಿ ಮಂಚೇಗೌಡ ಎಂಬುವವರು ಶ್ಯೂರಿಟಿ ...ದ್ದರಿಂದ ಡಿಸೆಂಬರ್ 2ರ ಸಂಜೆಯೇ ಜೈಲಿನಿಂದ ...ಗಡೆಯಾಗಿದ್ದಾನೆ.

...ಸಾರಾಂಶ ಇದು. ಹುಚ್ಚ ವೆಂಕಟ್ ಜೈಲಿನೊಳಗೆ. ...ಯುತ್ತೂ ಇರಲಿಲ್ಲ, ಅವನ ತಲೆಗೆ ಗಾಯಗಳೂ ...ಲ್ಲ! ಇನ್ನಾದರೂ ಮೀಡಿಯಾಗಳು ಅವನನ್ನು ಅವನ ...ಗೆ ಬಿಡುವ ದೊಡ್ಡ ಮನಸ್ಸು ಮಾಡಬೇಕು.

■ ಬಿ. ನಾರಾಯಣ್

ಪ್ರಕೃತಿ ಮತ್ತು ಆಹಾರ ಪದ್ಧತಿ




ಪ್ರಕೃತಿಯ ವಿರೋಧಿಗಳಾದ ಸಂಘ ಪರಿವಾರದವರು ಮತ್ತು ಪುರೋಹಿತ ವರ್ಗದವರು ತಮ್ಮ ಆಹಾರ ಪದ್ಧತಿಯನ್ನು ಇಡೀ ಸಮಾಜದ ಮೇಲೆ ಹೇರುವ ಮೊದಲು ಪ್ರಕೃತಿಯ ಕೆಲವು ಅತ್ಯಂತ ಸರಳ ಲೆಕ್ಕಾಚಾರವನ್ನಾದರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಪ್ರಕೃತಿಯೇ ಕೆಲವು ಸಸ್ಯಾಹಾರಿ ಪ್ರಾಣಿಗಳನ್ನು ಇತರ ಮಾಂಸಾಹಾರಿ ಪ್ರಾಣಿಗಳ ಆಹಾರಕ್ಕೆಂದೇ ಸೃಷ್ಟಿಸಿದೆ ಎಂದು ಮನುಸ್ಮೃತಿಯಲ್ಲಿಯೇ (5.39) ಹೇಳಲಾಗಿದೆ. ಮಾಂಸಾಹಾರಿ ಪ್ರಾಣಿಗಳಿಂದ ತಿನ್ನಲ್ಪಡುವ ಪ್ರಾಣಿಗಳಾದ ಮೊಲ ಜಿಂಕೆ ಕಾಡಹಂದಿ ಕಾಡೆಮ್ಮೆ ಮುಂತಾದವುಗಳ ಸಂಖ್ಯಾ ಬೆಳವಣಿಗೆ ವೇಗವಾಗಿರಬೇಕೆಂದು ಪ್ರಕೃತಿಯೇ ಲೆಕ್ಕ ಹಾಕಿ ಅವುಗಳ ದೈಹಿಕ ಬೆಳವಣಿಗೆ ಹಾಗೂ ಮರಿಯ ಅವಸ್ಥೆಯಿಂದ ತಾಯಿಯಾಗುವ ಪ್ರೌಢಾವಸ್ಥೆ ತಲುಪಲು ಕೇವಲ ಆರರಿಂದ ಹತ್ತು ತಿಂಗಳು ಮಾತ್ರ ನಿಗದಿ ಮಾಡಿದೆ. ಸಿಂಹ ಹುಲಿಗಳಿಗೆ ಪ್ರೌಢಾವಸ್ಥೆ ತಲುಪಲು ಎರಡರಿಂದ ಮೂರು ವರ್ಷ ಬೇಕಾಗುತ್ತದೆ. ಜತೆಗೆ ಸಣ್ಣ ಸಸ್ಯಾಹಾರಿ ಪ್ರಾಣಿಗಳ ಗರ್ಭಧಾರಣೆಯ ಅವಧಿಯನ್ನು ಪ್ರಕೃತಿಯು ಮೂರರಿಂದ ಎಂಟು ತಿಂಗಳು ಇಟ್ಟಿದ್ದರೆ (ಮೊಲಕ್ಕೆ ಕೇವಲ ಒಂದೇ ತಿಂಗಳು ಗರ್ಭ) ಮಾಂಸಾಹಾರಿ ಪ್ರಾಣಿಗಳ ಗರ್ಭಧಾರಣೆ ಅವಧಿ ಎಂಟರಿಂದ 12 ತಿಂಗಳು ಇಟ್ಟಿದೆ. ಆದರೆ ಆನೆ ಜಿರಾಫೆ ಮತ್ತು ಖಡ್ಗಮೃಗದಂತಹ ಬೃಹತ್ ಸಸ್ಯಾಹಾರಿ ಪ್ರಾಣಿಗಳು ಮಾತ್ರ ಮರಿಯಿಂದ ಪ್ರೌಢಾವಸ್ಥೆ ತಲುಪಲು 15 ವರ್ಷ ತೆಗೆದುಕೊಳ್ಳುತ್ತವೆ ಹಾಗೂ ಇವುಗಳ ಗರ್ಭಧಾರಣೆ ಅವಧಿ 15 ರಿಂದ 21 ತಿಂಗಳು ಇರುತ್ತದೆ. ಇದಕ್ಕೆ ಕಾರಣ ಬೃಹತ್ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ವಿಪರೀತ ಹೆಚ್ಚಿದರೆ ಇತರ ಸಣ್ಣ ಸಸ್ಯಾಹಾರಿ ಪ್ರಾಣಿಗಳಿಗೆ ಆಹಾರವೇ ಉಳಿಯಲಿಕ್ಕಿಲ್ಲ ಎಂಬ ಮುಂದಾಲೋಚನೆಯೂ ಪ್ರಕೃತಿಗಿದೆ.

ಮೇಲಾಗಿ ಸಣ್ಣ ಸಸ್ಯಾಹಾರಿ ಪ್ರಾಣಿಗಳು ಒಂದು ಸಲಕ್ಕೆ ಅನೇಕ ಮರಿಗಳನ್ನು ಹಾಕಿದರೆ ಮಾಂಸಾಹಾರಿ ಪ್ರಾಣಿಗಳು ಒಂದು ಸಲಕ್ಕೆ ಮೂರು-ನಾಲ್ಕು ಮರಿಗಳನ್ನು ಮಾತ್ರ ಹಾಕುತ್ತವೆ. ಈ ರೀತಿ ಬೇರೆ ಪ್ರಾಣಿಗಳಿಂದ ತಿನ್ನಲ್ಪಡುವ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ವೇಗವಾಗಿ ಬೆಳೆದು ಮಾಂಸಾಹಾರಿ ಪ್ರಾಣಿಗಳಿಗೆ ಆಹಾರದ ಕೊರತೆ ಆಗದಿರಲೆಂದು ಪ್ರಾಣಿಗಳ ಆಹಾರ ಪದ್ಧತಿ ಆಧರಿಸಿಯೇ ಪ್ರಕೃತಿಯು ಅವುಗಳ ಪ್ರೌಢಾವಸ್ಥೆ ತಲುಪುವ ವಯಸ್ಸು, ಗರ್ಭಧಾರಣೆ ಅವಧಿ ಮತ್ತು ಮರಿಗಳ ಸಂಖ್ಯೆ ನಿರ್ಧರಿಸಿದೆ. ಇದುವೇ ಪ್ರಕೃತಿ ಇಟ್ಟಿರುವ ಆಹಾರ ಸರಪಳಿಯ ಕರಾರುವಾಕ್ಕು ಲೆಕ್ಕಾಚಾರ.

ಕಳೆದ ಶತಮಾನದ ಆದಿಭಾಗದಲ್ಲಿ ಒಂದು ಆಫ್ರಿಕಾ ದೇಶದಲ್ಲಿ ಯುರೋಪಿನಿಂದ ವಲಸೆ ಹೋದ ಮನುಷ್ಯರು ಅಲ್ಲಿಯ ಹುಲಿ ಸಿಂಹ ಚಿರತೆ ಇಂತಹ ಮಾಂಸಾಹಾರಿ ಪ್ರಾಣಿಗಳನ್ನೆಲ್ಲ ಬೇಟೆಯಾಡಿ ಕೊಂದ ಮೇಲೆ ಸಸ್ಯಾಹಾರಿ ಪ್ರಾಣಿಗಳನ್ನು ತಿನ್ನಲು ಅರಣ್ಯದಲ್ಲಿ ಹಿಂಸ್ರ ಪ್ರಾಣಿಗಳು ಇಲ್ಲದೇ ಹೋದಕಾರಣ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ಎಷ್ಟು ಹೆಚ್ಚಾಯಿತೆಂದರೆ ಅವುಗಳು ಅರಣ್ಯದ ಹುಲ್ಲು ಹಸಿರೆಲೆ ಎಲ್ಲಾ ತಿಂದು ಮುಗಿಸಿದವು. ನಂತರ ಅವುಗಳಿಗೇ ತಿನ್ನಲು ಏನೂ ಸಿಗದೇ ಈ ಸಸ್ಯಾಹಾರಿ ಪ್ರಾಣಿಗಳಲ್ಲಿ ಹೆಚ್ಚಿನ ಭಾಗ ಹಸಿವಿನಿಂದ ಮತ್ತು ರೋಗದಿಂದ ಸತ್ತವು. ಜತೆಗೆ ಆ ಸಮಯದಲ್ಲಿ ಹುಟ್ಟಿದ ಹಲವು ಸಸ್ಯಾಹಾರಿ ಪ್ರಾಣಿಗಳು ಗೊಡ್ಡು (ನಪುಂಸಕ-ಬಂಜೆ) ಆದವು. ಈ ರೀತಿ ಪ್ರಕೃತಿಯೇ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ನಿಯಂತ್ರಿಸಿ ತನ್ನ ಹಸಿರು ಸಸ್ಯಗಳನ್ನೂ ಕಾಪಾಡಿತು ಹಾಗೂ ಪ್ರಾಣಿಗಳ ಸಂಖ್ಯೆಯ ಸಮತೋಲನವನ್ನೂ ಪ್ರಕೃತಿ ಕಾಪಾಡಿಕೊಂಡಿತು. ಮನುಷ್ಯನ ಮಾಂಸಾಹಾರವೂ ಇಂತಹದ್ದೇ ಒಂದು ಪ್ರಕೃತಿಯ ಸಮತೋಲನ ಕಾರ್ಯದ ಭಾಗವಾಗಿದೆ.

ಅರಣ್ಯದಲ್ಲಿರುವ ಪ್ರಾಣಿಗಳಲ್ಲಿ ಮೂರು ತರಹದ ಆಹಾರ ಪದ್ಧತಿಯಿದೆ. ಅವು ಸಸ್ಯಾಹಾರಿ, ಮಾಂಸಾಹಾರಿ ಹಾಗೂ ಉಭಯಾಹಾರಿ (ಮಿಶ್ರಾಹಾರಿ). ಕರಡಿ ಚಿಂಪಾಂಜಿ ಮತ್ತು ಕೆಲವು ಜಾತಿಯ ಮಂಗಗಳು ಉಭಯಾಹಾರಿಗಳಾಗಿವೆ. ಇವು ದಿನಾಲೂ ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನೂ ತಿನ್ನುತ್ತವೆ. ಕರಡಿಗೆ ಮೀನು ತುಂಬಾ ಇಷ್ಟವಾದರೆ ಚಿಂಪಾಂಜಿಗೆ ಗೆದ್ದಲು ಇರುವೆ ಹಾಗೂ ಮರದ ಕಾಂಡದೊಳಗಿನ ಹುಳು ತಿನ್ನುವುದು ಇಷ್ಟ. ಜತೆಗೆ ಹೊಳೆ ಬದಿಯಲ್ಲಿ ವಾಸಿಸುವ ಚಿಂಪಾಂಜಿಗಳು ಮೀನನ್ನು ನಿಯಮಿತವಾಗಿ ತಿನ್ನುತ್ತವೆ. ಕೆಲವು ಜಾತಿಯ ಮಂಗಗಳೂ ಗೆದ್ದಲು ಮತ್ತು ಹುಳು-ಹುಪ್ಪಟೆ ತಿನ್ನುತ್ತವೆ. ಮಾನವನಿಗೆ ಅತ್ಯಂತ ಹತ್ತಿರದ ಸಂಬಂಧಿಯಾದ ಚಿಂಪಾಂಜಿಯ ಜೀರ್ಣಾಂಗ 98% ಮನುಷ್ಯನ ಜೀರ್ಣಾಂಗವನ್ನೇ ಹೋಲುತ್ತದೆ ಎನ್ನುತ್ತಾರೆ ಪ್ರಾಣಿ ಶಾಸ್ತ್ರಜ್ಞರು. ಹಾಗಾಗಿ ಮನುಷ್ಯನನ್ನೂ ಪ್ರಕೃತಿಯೇ ಉಭಯಾಹಾರಿ ಆಗಿಯೇ ಹುಟ್ಟಿಸಿದೆ. ಹಾಗಿರುವಾಗ ಮನುಷ್ಯನ ಜೀರ್ಣಾಂಗ ಹಾಗೂ ಹಲ್ಲು-ಉಗುರುಗಳನ್ನು ಪ್ರಕೃತಿಯು ಕೇವಲ ಸಸ್ಯಾಹಾರಕ್ಕಾಗಿ ಮಾತ್ರ ಮಾಡಿದ್ದು ಮಾಂಸಾಹಾರಕ್ಕಾಗಿ ಅಲ್ಲ ಎಂದು ವೈದಿಕರು ಮತ್ತು ಜೈನರು ದಿನಾಲೂ ಸೋಷಿಯಲ್ ಮೀಡಿಯಾದಲ್ಲಿ ಬರೆದು ಮುಗ್ಧ ಜನರ ಹಾದಿ ತಪ್ಪಿಸುತ್ತಿರುವ ಕುತಂತ್ರ ನಾವೆಲ್ಲ ಅರ್ಥ ಮಾಡಿಕೊಳ್ಳಬೇಕಿದೆ.

ಬೆಂಗಾಲಿ ಬ್ರಾಹ್ಮಣರು ಈಗಲೂ ಮೀನು ತಿನ್ನುತ್ತಾರೆ ಹಾಗೂ ಕಾಶ್ಮೀರಿ ಬ್ರಾಹ್ಮಣರು ಕಾಶ್ಮೀರದ ಕೊರೆಯುವ ಚಳಿಯಿಂದ ತಮ್ಮ ದೇಹವನ್ನು ಕಾಪಾಡಿಕೊಳ್ಳಲು ಈಗಲೂ ಉಷ್ಣಕಾರಕ ಕೋಳಿ-ಆಡು-ಕುರಿಯ ಮಾಂಸ ವಾರಕ್ಕೆರಡು ಬಾರಿಯಾದರೂ ತಿನ್ನುತ್ತಾರೆ ಎಂಬುದನ್ನು ನಾವು ಗಮನಿಸಬೇಕು. ಜಗತ್ತಿನ ಅತಿ ಶೀತಲ ಧ್ರುವ ಪ್ರದೇಶದಲ್ಲಿ ಮನುಷ್ಯ ಮಾಂಸಾಹಾರ ಸೇವಿಸದಿದ್ದರೆ ರಕ್ತ ಹೆಪ್ಪುಗಟ್ಟಿ ನರ ಮರಗಟ್ಟಿ ಸಾಯುತ್ತಾನೆ. ಈ ರೀತಿ ಜಗತ್ತಿನ ಹವಾಮಾನ ವೈಪರೀತ್ಯವೂ ಮನುಷ್ಯ ಮಾಂಸಾಹಾರಿ ಆಗಿರಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದೆ. ವೈದಿಕರು ಹಾಗೂ ಜೈನರು ಮಿಲಿಟರಿ ಸೇರುವುದು ಅಪರೂಪ. ಹಾಗಾಗಿ ಅವರಿಗೆ ಕಾರ್ಗಿಲ್ ಮತ್ತು ಲಢಾಕಿನ ಕೊರೆಯುವ ಹಿಮಪಾತದ



ನಡುವೆ ನಮ್ಮ ವೀರ ಮಿಲಿಟರಿಯವರು ಜೀವಂತ ಇರಬೇಕಾದರೆ ಎಂತಹ ಆಹಾರ ಸೇವಿಸಬೇಕೆಂದು ಗೊತ್ತು ಆಗುವುದಾದರೂ ಹೇಗೆ? ಅಂತಹ ಶೀತ ಪ್ರದೇಶದಲ್ಲಿ ಜನರು ಗೋಮಾಂಸ ತಿನ್ನುವ ಬದಲು ಗೋವನ್ನು ಪೂಜಿಸುತ್ತಾ ಕುಳಿತರೆ ಭಕ್ತ ಮತ್ತು ದೇವರು ಇಬ್ಬರೂ ಮರಗಟ್ಟಿ ಸಾಯುತ್ತಾರೆ. ಆದರೂ ವೈಷ್ಣೋದೇವಿ ರಾಮ ಕೃಷ್ಣ ಕಾಳಿ ದುರ್ಗೆ ಮುಂತಾದ ಮಾಂಸಾಹಾರಿ ದೇವರ ಪ್ರೀತಿ ಗಳಿಸಲು ಮಾನವನು ಶೀತ ಪ್ರದೇಶದಲ್ಲೂ ಸಸ್ಯಾಹಾರಿ ಆಗಿರಬೇಕೆಂಬ ನಿಯಮ ಆ ಪ್ರದೇಶ ಎಂದೂ ನೋಡದಿರುವ ವೈದಿಕರೇ ರೂಪಿಸುತ್ತಾರೆ.

ಆಕಳು ಎಂಬ ಪ್ರಾಣಿ ಹಾಲು ಎಲ್ಲಿಂದ ಕೊಡುವುದು, ಮೂತ್ರ ಎಲ್ಲಿಂದ ಮಾಡುವುದು ಎಂಬುದು ಕೂಡ ಗೊತ್ತಿಲ್ಲದ ನಗರವಾಸಿಗಳೇ ಗೋವನ್ನು ರಕ್ಷಿಸುವ ಮಾತನ್ನಾಡುತ್ತಾರೆ. ಗೋವಿನ ಮೈಯಲ್ಲಿರುವ ಕೋಟಿ-ಕೋಟಿ ದೇವರ ಹೆಸರಲ್ಲಿ ಸಮಾಜಕ್ಕೆ ಸಾವಿರ ಸಾವಿರ ಕೋಟಲೆ ಕೊಡುತ್ತಾರೆ. ನಿಜವಾಗಿ ದನ ಸಾಕುವ ಕೋಟ್ಯಾಂತರ ರೈತರ ಅಭಿಪ್ರಾಯ ಒಮ್ಮೆ ಕೇಳಬೇಕೆಂಬ ಕನಿಷ್ಠ ಸೌಜನ್ಯತೆ ಇವರಿಗಿಲ್ಲ. ಕಳೆದ ವಾರವೇ ಬರಪೀಡಿತ ಕಲಬುರ್ಗಿ ಜಿಲ್ಲೆಯಲ್ಲಿ ಬಡ ರೈತರು ಜಾನುವಾರುಗಳಿಗೆ ತಿನ್ನಿಸಲು ಹುಲ್ಲು ಕೊಳ್ಳುವ ಶಕ್ತಿಯೇ ಇಲ್ಲದೇ ಐದು ಸಾವಿರ ಆಕಳು ಮತ್ತು ಎತ್ತುಗಳನ್ನು ಹೈದರಾಬಾದಿನ ಕಸಾಯಿಖಾನೆಯ ದಲ್ಲಾಳಿಗಳಿಗೆ ಮಾರುತ್ತಿರುವ ದೃಶ್ಯ ಟಿವಿಯಲ್ಲಿ ತೋರಿಸಲಾಯಿತು. ಮಂಗಳೂರಿನ ಮೂರ್ಖ ಬಜರಂಗಿಗಳು ಅಲ್ಲಿದ್ದರೆ ಏನು ಮಾಡುತ್ತಿದ್ದರೋ!

ಮುಂಬೈಯಲ್ಲಿ ಗುಜರಾತಿಗಳು ಮತ್ತು ಮಾರ್ವಾಡಿ ವ್ಯಾಪಾರಿಗಳು ಒಂದು ವಿಚಿತ್ರ ಗೋಭಕ್ತಿ ಪ್ರದರ್ಶಿಸುತ್ತಾರೆ. ಇವರು ತಮ್ಮ ವ್ಯಾಪಾರದ ಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಒಬ್ಬ ಮರಾಠಿ ಹೆಂಗಸು ಒಂದು ಆಕಳು ಮತ್ತು ಒಂದು ಬುಟ್ಟಿಯಲ್ಲಿ ಹುಲ್ಲು ಇಟ್ಟುಕೊಂಡು ಕುಳಿತಿರುತ್ತಾಳೆ. ಈ ಗುಜ್ಜು ಮತ್ತು ಮಾರ್ವಾಡಿ ವ್ಯಾಪಾರಿಗಳು ಅವಳಿಗೆ ಎರಡು ರೂಪಾಯಿ ಕೊಟ್ಟು ಸ್ವಲ್ಪ ಹುಲ್ಲು ಖರೀದಿಸುತ್ತಾರೆ ಹಾಗೂ ಅದನ್ನು ಅಲ್ಲಿಯೇ ಅವಳದೇ ಹಸುವಿಗೆ ತಮ್ಮ ಕೈಯಿಂದ ತಿನ್ನಿಸಿ ಆ ಆಕಳಿಗೆ ದೊಡ್ಡದಾಗಿ ನಮಸ್ಕರಿಸಿ ಅದರ ಹಣೆ ಕಾಲು ಬಾಲ ಕೋಡು ಮುಟ್ಟಿ ತಮ್ಮ ಕಣ್ಣಿಗೆ ಒತ್ತಿಕೊಳ್ಳುತ್ತಾರೆ. ಮುಂಬೈಯಲ್ಲಿ ವ್ಯಾಪಾರಿಗಳು ಬೆಳಗ್ಗೆ ಆರು ಗಂಟೆಗೇ ಮನೆ ಬಿಡುವುದರಿಂದ ಗುಜರಾತಿ- ಮಾರವಾಡಿಗಳು ಹೆಚ್ಚಿರುವ ಉಪನಗರಗಳಲ್ಲಿ ಗೋಮಾತೆಗೆ ಹುಲ್ಲು ತಿನ್ನಿಸಿ ಕೃತಾರ್ಥರಾಗುವ ಈ ನಾಟಕ ಬೆಳಗ್ಗೆ ಆರು ಗಂಟೆಗೆ ಶುರುವಾದರೆ ಮಧ್ಯಾಹ್ನ ಹನ್ನೊಂದು ಗಂಟೆಯವರೆಗೆ ನಡೆಯುತ್ತದೆ. ಗೋವು ಆ ಮರಾಠಿ ಹೆಂಗಸಿನದು ಮತ್ತು ಹುಲ್ಲೂ ಅವಳದೇ, ಆದರೆ ಅದನ್ನು ಗೋವಿಗೆ ತಿನ್ನಿಸಿದ ಪುಣ್ಯ ಮಾತ್ರ ಆ ಗುಜ್ಜು-ಮಾರ್ವಾಡಿ ವ್ಯಾಪಾರಿಗೆ. ಹೀಗೆ ಆ ಹೆಂಗಸಿನ ಆಕಳ ಹೊಟ್ಟೆಯೂ ಪುಕ್ಕಟೆಯಾಗಿ ತುಂಬಿತು ಜತೆಗೆ ಅವಳಿಗೆ ಭರ್ಜರಿ ಕಮಾಯಿಯೂ ಆಯಿತು. ಇಂತಹ ವಿಚಿತ್ರ ದಂಧೆ ಮತ್ತು ಮಹಾಮೂರ್ಖ ಭಕ್ತಿ ಮುಂಬೈ ಮತ್ತು ಅಹಮದಾಬಾದ್ ಹೊರತು ಜಗತ್ತಿನಲ್ಲಿ ಬೇರೆಲ್ಲಿಯೂ ಇಲ್ಲ!

■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಒಕ್ಕಲಿಗರ ಯಡವಟ್ಟುಗಳು!
ಕೆಂಪೇಗೌಡರ ಕೊಂದವರ್ಯಾರು?

ಸಮೂಹವೊಂದರ ಹತಾಶೆ, ಅನಿಶ್ಚಿತತೆ, ದುರಾಶೆ, ಅತಂತ್ರ ಭೀತಿಗಳೆಲ್ಲವೂ ಏನೆಲ್ಲಾ ಯಡವಟ್ಟುಗಳಿಗೆ ಕಾರಣವಾಗಬಹುದು ಎಂಬುದಕ್ಕೆ ಒಕ್ಕಲಿಗರೇ ಏಕೆ ಹವೇಹವೇ ತಲೆ ಕೊಡುತ್ತಿದ್ದಾರೋ ಅರ್ಥವಾಗುತ್ತಿಲ್ಲ!

ದಿಟ್ಟ ಐಎಎಸ್ ಅಧಿಕಾರಿ ಡಿ.ಕೆ. ರವಿಯ ಸಾವು ಆತ್ಮಹತ್ಯೆಯೆಂದು ಗೊತ್ತಿದ್ದೂ ಆತ ತಮ್ಮ ಜನಾಂಗದವನೆಂದು ಕೊಲೆಯ ತನಿಖೆಗೆ ಒತ್ತಾಯಿಸಿ ಒಕ್ಕಲಿಗರ ಸಂಘ ಬೀದಿಗಿಳಿಯುವ ಮೂಲಕ ರವಿ ಬಗ್ಗೆ ಬೇರೆಲ್ಲ ಸಮೂಹಗಳಿಗಿದ್ದ ಪ್ರೀತಿ ಗೌರವ ಹಮ್ಮಗೆ ಒಕ್ಕಲಿಗರೇ ಅಡ್ಡಗಾಲಿಟ್ಟಂತಾಗಿದ್ದು ಹಳೇ ಕತೆ. ಜೆಡಿಎಸ್ ಕಚೇರಿ ಕಾಂಗ್ರೆಸ್ ಪಾಲಾಯಿತಲ್ಲ, ಆಗ ಒಕ್ಕಲಿಗರ ಸಂಘದ ಅಧ್ಯಕ್ಷ ಅಪ್ಪಾಜಿಗೌಡರು ತಮ್ಮ ಜನಾಂಗದ ಸಂಘದ ಕಚೇರಿಯಲ್ಲೇ ಜೆಡಿಎಸ್ ಪಕ್ಷದ ಕಚೇರಿಗೂ ಸ್ಥಳಾವಕಾಶ ಕಲ್ಪಿಸುತ್ತೇವೆಂದು ಬಹಿರಂಗವಾಗಿ ದೇವೇಗೌಡರಿಗೆ ಆಹ್ವಾನವಿತ್ತರು.

ಅಲ್ಲಿಗೆ ಒಕ್ಕಲಿಗರ ಸಂಘ ಜೆಡಿಎಸ್ ಪಕ್ಷದ ಜಾತಿಘಟಕವೆಂದು ಅರ್ಥವೇ? ಅಥವಾ ದೇವೇಗೌಡರು ಸ್ವಜಾತಿ ಪಕ್ಷಪಾತಿಯಾಗಿದ್ದಕ್ಕೆ ಋಣಸಂದಾಯದ ಸೂಚಕವೇ?

ಹೆಗಡೆ ಪರವಾಗಿ ಬ್ರಾಹ್ಮಣರ ಸಂಘ, ಪಟೇಲ್ ಬೆಂಬಲಿಸಿ ವೀರಶೈವ ಮಹಾಸಭಾ ಮತ್ತು ಸದ್ಯ ಸಿದ್ದು ಬೆಂಬಲಕ್ಕೆ ಕುರುಬರ ಸಂಘಗಳು ಇದೇ ರೀತಿ ಬಹಿರಂಗವಾಗಿ ಅಖಾಡಕ್ಕಿಳಿದರೆ ಕರ್ನಾಟಕದ ಮಿಕ್ಕೆಲ್ಲಾ ಜಾತಿಗಳು ಎಂಥಾ ಅತಂತ್ರ ಮನಸ್ಥಿತಿ ಮುಟ್ಟಲಿಕ್ಕಿಲ್ಲ? ಕಾರ್ಯ ಸಾಧನೆಯಲ್ಲಿ ಬ್ರಾಹ್ಮಣರು, ಲಿಂಗಾಯತರು, ಮಾರ್ವಾಡಿಗಳಿಗಿರುವ ತಲೆಗಾರಿಕೆ, ತಂತ್ರಗಾರಿಕೆಯ ರವಷ್ಟಾದರೂ ಒಕ್ಕಲಿಗರಿಗಿರದಿದ್ದರೆ ಹೇಗೆ?

ಇಂಥದ್ದೇ ಯಡವಟ್ಟೊಂದಕ್ಕೆ ಮತ್ತೆ ಒಕ್ಕಲಿಗ ಸಮೂಹ ಕೈಯಿಟ್ಟಿದ್ದು ಕೆಂಪೇಗೌಡರ ಸಮಾಧಿ ರಾಜಕೀಯದಲ್ಲಿ. ಮೊನ್ನೆಯಷ್ಟೇ ಒಕ್ಕಲಿಗರ ಸಂಘ ಮಾಗಡಿಯಿಂದ ಕೆಂಪಾಪುರವೆಂಬ ಕುಗ್ರಾಮಕ್ಕೆ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಆದಿಚುಂಚನಗಿರಿ ಪೀಠಾಧೀಶ ನಿರ್ಮಲಾನಾಥ ಸ್ವಾಮೀಜಿಯೇ ಖುದ್ದು ಭಾಗವಹಿಸಿದ್ದಾರೆ. ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಅಪ್ಪಾಜಿಗೌಡರಿಂದ ಹಿಡಿದು ಬಹುತೇಕ ಪದಾಧಿಕಾರಿಗಳೆಲ್ಲರೂ ಪಾದಯಾತ್ರೆಯಲ್ಲಿ ಕೆಂಪಾಪುರಕ್ಕೆ ಮೆರವಣಿಗೆ ಬಂದು ಹೂಮಳೆಗರೆದದ್ದು ಸೋಕಾಲ್ಡ್ ಕೆಂಪೇಗೌಡರ ಸಮಾಧಿಗೆ!

ಕೆಂಪೇಗೌಡರ ಸಮಾಧಿಯೆಂಬುದು ಸದ್ಯ ಇಡೀ ಒಕ್ಕಲಿಗ ಸಮೂಹದ ಕೈಯೊಳಗಿನ ಹೊಸ ಅಸ್ತ್ರ !

ಬ್ರಾಂಡ್ ಕೆಂಪೇಗೌಡ!

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು, ಬೆಂಗಳೂರು ಬಸ್ ನಿಲ್ದಾಣಕ್ಕೂ ಕೆಂಪೇಗೌಡರ ಹೆಸರು, ನಮ್ಮ ಮೆಟ್ರೋಗೆ ಕೆಂಪೇಗೌಡ ಮೆಟ್ರೋ ಎಂದು ಪುನರ್ ನಾಮಕರಣ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಕೆಂಪೇಗೌಡ ಜಿಲ್ಲೆ- ಹೀಗೆ ಬೆಂಗಳೂರು ಕೇಂದ್ರಿತ ಏನೆಲ್ಲಾ ಹಿರಿಮೆ ಗರಿಮೆ ಸವಲತ್ತು ಸಂಪತ್ತುಗಳೆಲ್ಲಕ್ಕೂ ಕೆಂಪೇಗೌಡರ ಹೆಸರಿಡಬೇಕೆಂಬ ಒಕ್ಕಲಿಗರ ಬೇಡಿಕೆಯೆಂಬುದು ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಿದ್ದರೆ ಆ ಮಾತು ಬೇರೆ. ಬದಲಿಗದು ಮಿಕ್ಕೆಲ್ಲ ಜಾತಿಸಮೂಹದ ಅಸೂಯೆಗೆ ಕಾರಣವಾಗಬಾರದಲ್ಲವೆ?

ಸದ್ಯ ಮಾಗಡಿ ತಾಲ್ಲೂಕು ಕೆಂಪಾಪುರವೆಂಬ ಗ್ರಾಮದಲ್ಲಿ ಪತ್ತೆಯಾದ ಸಮಾಧಿಯೇ ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಸಮಾಧಿಯೆಂದೂ ಅದನ್ನು ಸರ್ಕಾರ ಸೂಕ್ತ ವೈಭವ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂದೂ ಮತ್ತು ಅದನ್ನೇ ಕೆಂಪೇಗೌಡರ ಸಮಾಧಿಯೆಂದು ಇತಿಹಾಸಕಾರರೆಲ್ಲರೂ ಸಮ್ಮತಿಸಬೇಕೆಂಬುದು ಸಂಘ ಸೇರಿದಂತೆ ಹಿರಿಕಿರಿ ಒಕ್ಕಲಿಗ ರಾಜಕಾರಣಿಗಳೆಲ್ಲರ ಒತ್ತಾಯ. ಈ ಬಗ್ಗೆ ಒಕ್ಕಲಿಗರ ಸಂಘ ಮೊನ್ನೆಯಷ್ಟೇ ಬೀದಿಗಿಳಿದು ನಡೆಸಿದ ಪಾದಯಾತ್ರೆಯಷ್ಟೇ ಅಲ್ಲ; ಕಳೆದೆರಡು ತಿಂಗಳಿಂದ ಒಂದರಮೇಲೊಂದರಂತೆ ಸಂಭವಿಸುತ್ತಿರುವ ವಿದ್ಯಮಾನಗಳೂ ವಿಚಿತ್ರ ಮತ್ತು ಕುತೂಹಲಕಾರಿ.



ಮೊದಲ ಬಾರಿಗೆ ಕೆಂಪೇಗೌಡನ ಸಮಾಧಿಯ ಪುಸ್ತಾಪವಾಗಿದ್ದು ಇಲ್ಲಿಗೆ ಎಂಟು ತಿಂಗಳ ಹಿಂದೆ. ಕೆಂಪೇಗೌಡ ಗೋಪುರ, ಕೆಂಪಾಂಬುಧಿ ಕೆರೆ, ಅಣ್ಣಮ್ಮ ದೇವಸ್ಥಾನ, ಗವಿಗಂಗಾಧರೇಶ್ವರ ದೇವಸ್ಥಾನ, ಕೆಂಪೇಗೌಡರ ಸೊಸೆ ಲಕ್ಷ್ಮೀದೇವಮ್ಮನವರು ಲೋಕಕಲ್ಯಾಣಾರ್ಥ ಕೆರೆಗೆ ಹಾರವಾದ ಕೋರಮಂಗಲದ ಕೆರೆ, ಯಲಹಂಕ ಪಕ್ಕದ ಚಿಕ್ಕಜಾಲದ ಕೋಟೆ, ಧರ್ಮರಾಯ ಸ್ವಾಮಿ ದೇವಸ್ಥಾನ- ಹೀಗೆ ಬೆಂಗಳೂರು ಸುತ್ತಮುತ್ತಲ ಅವಶೇಷಗಳೇ ನಮಗೆ ಕೆಂಪೇಗೌಡರ ಗತೇತಿಹಾಸವನ್ನು ತಿಳಿಸುವ ಪುರಾವೆಗಳು. ಇವುಗಳ ಆಧಾರದಲ್ಲೇ ನಾವು ಕೆಂಪೇಗೌಡರನ್ನು ಬೆಂಗಳೂರಿನ ನಿರ್ಮಾತೃವೆನ್ನುತ್ತೇವೆ, ಗೌರವಿಸುತ್ತೇವೆ, ಸ್ಮರಿಸುತ್ತಲೇ ಬಂದಿದ್ದೇವೆ.

ಕೆಂಪಾಪುರದಲ್ಲಿ

ಆದರೆ ನಾಗರಿಕತೆಯ ಓಟದಲ್ಲಿ ಕಾಲಪರಿಸ್ಥಿತಿಗಳು ಬದಲಾದಂತೆಲ್ಲ 'ಕೆಂಪೇಗೌಡ' ಎಂಬ ಹೆಸರೇ ಜಾತಿ ಜನಾಂಗವೊಂದರ ಲಾಂಛನವಾಗಿ ಬದಲಾಯಿತು ಅಥವಾ ಬೇರೆ ಯಾರೂ ಕೆಂಪೇಗೌಡರನ್ನು ಸ್ಮರಿಸದ ಕಾರಣಕ್ಕೆ ವಿಧಿಯಿಲ್ಲದೆ ಒಕ್ಕಲಿಗರು ಸ್ಮರಿಸಲೇಬೇಕಾಯಿತು. ಬಹುಶಃ ವಲಸೆ ಬಂದ ಬೇರೆ ಬೇರೆ ಜನಸಮೂಹಗಳು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಬಲಾಢ್ಯರಾಗಿದ್ದರ ಹತಾಶೆಗೂ ಕನ್ನಡ ಸಮೂಹದ ಗಣನೀಯ ಶಕ್ತಿಕೇಂದ್ರವಾಗಿ ರೂಪುಗೊಂಡ ಒಕ್ಕಲಿಗರಿಗೆ 'ಕೆಂಪೇಗೌಡ' ಎಂಬ ಪದವೇ ಆಯುಧವಾಗಿರಲಿಕ್ಕೂ ಸಾಕು.

ಕೆಂಪೇಗೌಡರ ಸಮಾಧಿ ಎಂಬ ದಿಢೀರ್ ಪತ್ತೆದಾರಿಕೆಗೆ ಮೊದಲು ಜೀವ ಬಂದಿದ್ದು 2015ರ ಮಾರ್ಚ್ ತಿಂಗಳಲ್ಲಿ. ರಾಮನಗರ ಜಿಲ್ಲೆ ಮಾಗಡಿಯಿಂದ ಸರಿಸುಮಾರು 15 ಕಿ.ಮೀ. ದೂರದ ಕೆಂಪಾಪುರ ಗ್ರಾಮದಲ್ಲಿ ರಾತ್ರೋರಾತ್ರಿ ಪತ್ತೆಯಾದದ್ದು ಕೆಂಪೇಗೌಡರ ಸಮಾಧಿ. ಮಾಗಡಿ ತಾಲೂಕು ತಿಪ್ಪಸಂದ್ರ ಹೋಬಳಿ ದೊಡ್ಡ ಮುದಿಗೆರೆ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಕೆಂಪಾಪುರದ ಪೊದೆಗಂಟಿಗಳ ನಡುವೆ ಮರೆಯಾಗಿಹೋಗಿದ್ದ ಪುಟ್ಟ ಗೋಪುರವೊಂದು ಪತ್ತೆಯಾಗಿತ್ತು. ಅದನ್ನು ಪತ್ತೆ ಹಚ್ಚಿದ್ದು ಹುತ್ರಿದುರ್ಗ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳಾದ ಪ್ರಶಾಂತ ಮರೂರು ಮತ್ತು ಈಸ್ಟ್‌ವೆಸ್ಟ್ ರಂಗಸ್ವಾಮಿ.


ಕೆಂಪೇಗೌಡ ಸ್ಮಾರಕಗಳ ಸಂರಕ್ಷಣಾ ಸಮಿತಿಗೂ ಪದಾಧಿಕಾರಿಗಳಾದ ಪ್ರಶಾಂತ್ ಮತ್ತು ರಂಗಸ್ವಾಮಿ ಕೆಂಪೇಗೌಡರು ಕಟ್ಟಿಸಿದ್ದ ಹುತ್ರಿದುರ್ಗದ ಕೋಟೆಯ ಐತಿಹ್ಯವನ್ನು ಶೋಧಿಸುತ್ತಲೇ ಅಲ್ಲಿಂದ ಎಷ್ಟೋ ಮೈಲಿಗಳ ದೂರದ ಕುಗ್ರಾಮವಾದ ಕೆಂಪಾಪುರದ ಪುರಾತನ ಪೊದೆಯೊಂದರತನಕ ಬಂದಿದ್ದರು. ಸರಿಸುಮಾರು 40 ಮನೆಗಳ ಒಕ್ಕಲಿಗರು ಮತ್ತು ಪರಿಶಿಷ್ಟರು ಸಮಸಮವಾ[...] ರುವ ಕೆಂಪಾಪುರದ ಬಸವಣ್ಣನ ಗುಡಿ ಪಕ್ಕದ ಪೊದೆಯೊಳ[...] ಅವಿತಿದ್ದ ಗೋಪುರಕ್ಕೂ ಬೆಂಗಳೂರಿನಲ್ಲಿರುವ ಕೆಂಪೇಗೌಡ[...] ಗೋಪುರಗಳಿಗೂ ಹೋಲಿಕೆಗಳಿದ್ದವು. ಇದೇ ಗೋಪುರ[...] ಪಾಯ ಕಟ್ಟಿದ್ದ ಕಲ್ಲಿನ ಪಟ್ಟಿಯ ಮೇಲೆ ಕೆತ್ತಲಾಗಿ[...] ಅಕ್ಷರಗಳ ಸಾಲೊಂದು ಹೀಗಿತ್ತು, 'ಹಿರಿಯ[...] ಕೆಂಪೇಗೌಡಯ್ಯನವರು ಕುಣಿಗಲ್ಲಿನಿಂದ ಬಂದು ಜಗಳವ[...] ಮಾಡಿ ಐಕ್ಯವಾಗಿ ಕೈಲಾಸಕೆ ಪೋದ ಸ್ಥಳ.'

ಇದರರ್ಥ ಕುಣಿಗಲ್ಲಿನಿಂದ ಬಂದ ಕೆಂಪೇಗೌಡರ[...] ಈ ಸ್ಥಳದಲ್ಲಿ ಜಗಳ ಮಾಡಿ ಅಂದರೆ ಹೊಡೆದಾಡಿ ಅರ್ಥಾ[...] ಯುದ್ಧ ಮಾಡಿ, ಕಾಳಗ ಮಾಡಿ ಪ್ರಾಣತೆತ್ತ ಸ್ಥಳ?

ಹುತಾತ್ಮರಾಗಿ?

ಇದನ್ನೇ ಐಕ್ಯವಾಗಿ ಅಂದರೆ ಕೈಲಾಸಕ್ಕೆ ಹೋ[...] ಸ್ಥಳವೆಂದು ಅಥವಾ ಹುತಾತ್ಮರಾದ ಸ್ಥಳವೆಂದು ಉಪಮಾ[...] ಉಪಮೇಯ ಸಮೇತ ಕಲ್ಲಿನಲ್ಲಿ ಕೆತ್ತಿಸಲಾಗಿತ್ತು[...] ವಿಪರ್ಯಾಸವೆಂದರೆ ಯುದ್ಧದ ಬದಲಿಗಿಲ್ಲಿ ಜಗಳವೆಂ[...] ಪದವಿತ್ತು, ಸಮಾಧಿ ಮೇಲಿದ್ದ ಗೋಪುರ ಬೆಂಗಳೂರಿ[...] ಕೆಂಪೇಗೌಡರ ಗೋಪುರವನ್ನು ಹೋಲುತ್ತಿದ್ದದ್ದು ಮತ್ತ[...] ಕೆತ್ತನೆಯ ಸಾಲಿನಲ್ಲಿ ಕೆಂಪೇಗೌಡ ಎಂಬ ಪದವಿದ್ದದ[...] ಬಿಟ್ಟರೆ ಇದು ಬೆಂಗಳೂರು ನಿರ್ಮಾತೃ ಕೆಂಪೇಗೌಡರದ್ದೆ[...] ಸಮಾಧಿ ಎಂಬುದಕ್ಕೆ ಬೇರಾವುದೇ ಆಧಾರಗಳಿರಲಿಲ್ಲ[...] ಈ ಎರಡೇ ಕಾರಣಗಳ ಆಧಾರಕ್ಕೆ ಅದು ಬೆಂಗಳೂರ[...] ನಿರ್ಮಾತೃ ಕೆಂಪೇಗೌಡರ ಸಮಾಧಿಯೆಂದಾದರೆ ಹಿರಿಯ[...] ಕೆಂಪೇಗೌಡರು ಸತ್ತಿದ್ದು ಸಹಜವಾಗಲ್ಲದೆ ಯುದ್ಧದಲ್ಲಿ?

ಮೊದಮೊದಲು ಕೆಂಪೇಗೌಡರ ಸಮಾ[...] ಪತ್ತೆಯಾಯಿತೆಂದು ಆತುರಕ್ಕೆ ಬಿದ್ದು ಪ್ರಚಾರಕ್ಕಿಳಿ[...] ಪ್ರಶಾಂತ್ ಮತ್ತು ರಂಗಸ್ವಾಮಿ ಇದಕ್ಕೆಂದ[...] ಅವಲಂಬಿಸಿದ್ದು ನಂಜಾವಧೂತರನ್ನು. ನಂಜಾವಧೂತರಿ[...] ಮೊದಲೇ ಅತಂತ್ರಸ್ಥಿತಿ. ಅತ್ತ ಕುಂಚಿಟಿಗರೂ ಸೇರಿಸುತ್ತಿ[...] ಇತ್ತ ಒಕ್ಕಲಿಗರೂ ನಂಬುತ್ತಿಲ್ಲ. ಹೇಗಾದರೂ ಮಾ[...] ತನ್ನ ಅಸ್ತಿತ್ವ ಉಳಿಸಿಕೊಳ್ಳಬೇಕಾದ ಹರಕತ್ತಿಗೆ ಬಿ[...] ನಂಜಾವ ಧೂತರಿಗೆ ಇದೇ ಪೂರ್ಣಾವ[...] ಕಸುಬಾಗಿಹೋಯಿತು. ಹೋಗಿಬಂದಲ್ಲೆಲ್ಲ ಕೆಂಪೇಗೌಡ[...] ಸಮಾಧಿ ಪತ್ತೆಯಾಗಿದೆ, ಸರ್ಕಾರ ಅದನ್ನು ಅಭಿವೃ[...] ಮಾಡಬೇಕೆಂದು ಗುಡುಗುತ್ತಲೇ ಬಂದರು.





ಯಾರೀತ ಕುಣಿಗಲ್ ಕೆಂಪೇಗೌಡನೆಂಬ ಬಿಡಿಸಲಾಗದ ಒಗಟು!

ಸದ್ಯ ಬೆಂಗಳೂರಿನ ಜನಕ್ಕೆ ಕೆಂಪೇಗೌಡ ಎಂದರೆ ಬೆಂಗಳೂರಿನ ನಿರ್ಮಾತೃ ಎಂಬುದರ ಹೊರತಾಗಿ ಬೇರೇನೂ ಗೊತ್ತಿಲ್ಲ. ಅನೇಕರು ಬೆಂಗಳೂರನ್ನು ಆಳಿದ ರಾಜ ಎಂದೇ ಭಾವಿಸುತ್ತಾರೆ. ಕೆಂಪೇಗೌಡ ಎಂಬ ಹೆಸರು ಕೇವಲ ಒಬ್ಬ ಪಾಳೇಗಾರನದಲ್ಲ, ಅಂಥ ನಾಲ್ವರು ಕೆಂಪೇಗೌಡರು ಒಬ್ಬರ ನಂತರ ಒಬ್ಬರಂತೆ ಬೆಂಗಳೂರನ್ನಾಳಿದ ಸಂಗತಿಯೂ ಜನಕ್ಕಿರಲಿ, ಬೀದಿಗಿಳಿದ ಒಕ್ಕಲಿಗ ಮುಖಂಡರಿಗೂ ಗೊತ್ತಿದ್ದಂತಿಲ್ಲ. ಇಂಥಾದ್ದರಲ್ಲಿ ಕೆಂಪೇಗೌಡರು ಯುದ್ಧದಲ್ಲಿ ಮಡಿದರೆಂಬ ಸುದ್ದಿಯೇ ಸಾಂಸ್ಕೃತಿಕವಾಗಿ ಸಾಕಷ್ಟು ಕಲ್ಲೋಲಗಳನ್ನೆಬ್ಬಿಸುತ್ತದೆ. ಕುಲದ ಮೂಲಪುರುಷನೇ ಯುದ್ಧದಲ್ಲಿ ಹತನಾದನೆಂದರೆ ಕೊಂದವನು ಪರಾಕ್ರಮಿಯೆನ್ನಿಸಿ ಕೊಲೆಯಾದವನ ಸಂತತಿಯವರು ಹೇಡಿ, ಪುಕ್ಕಲರೆನಿಸಿಕೊಳ್ಳುವುದಿಲ್ಲವೇ?

ಈಗಿನ ನಾಗರಿಕ ಸಂವೇದನೆಗಿದು ಮುಖ್ಯವಾಗದೇ ಹೋದರೂ ಸತ್ಯ ಸ್ಪಷ್ಟಗೊಳ್ಳದೆ ವಾಸ್ತವವೇನೆಂಬುದನ್ನು ಇತಿಹಾಸಕಾರರೇ ತುಲನೆ ಮಾಡದೆ ದುಡುಕಿ ನಿರ್ಧಾರಕ್ಕೆ ಬರುವುದು ಕೆಂಪೇಗೌಡನಿಗೇ ಮಾಡುವ ಅಪಚಾರವಲ್ಲವೆ?

ನಮಗೆಲ್ಲ ತಿಳಿದ ಹಾಗೆ ಹಿರಿಯ ಕೆಂಪೇಗೌಡರು ಯಲಹಂಕ ಪ್ರಭು, ಮಾಗಡಿ ನೆಲೆಯಾಗಿದ್ದು ಇಮ್ಮಡಿ ಕೆಂಪೇಗೌಡರ ಕಾಲಕ್ಕೆ ಮಾಗಡಿ ಅಥವಾ ಯಲಹಂಕ ಪ್ರಭುಗಳಾದ ಯಾರೇ ಕೆಂಪೇಗೌಡರು ಈಗ ಸಿಕ್ಕ ಸಮಾಧಿಯ ಕೆಂಪೇಗೌಡರಾಗಿದ್ದರೆ ಕುಣಿಗಲ್ಲಿನಿಂದ ಬಂದು ಜಗಳವನು ಮಾಡಿ ಐಕ್ಯರಾಗಿ ಕೈಲಾಸಕ್ಕೆ ಪೋದ ಸ್ಥಳ ಎಂದು ವಿಕಿರುತ್ತಿತ್ತು?

ಇದು ಮೂಲಪ್ರಶ್ನೆ. ಇಮ್ಮಡಿ ಕೆಂಪೇಗೌಡರಾಗಿದ್ದರೆ ಮಾಗಡಿಯಿಂದ ಬರಬೇಕಿತ್ತು, ಹಿರಿಯ ಕೆಂಪೇಗೌಡರಾಗಿದ್ದರೆ ಯಲಹಂಕ ಅಥವಾ ಬೆಂದಕಾಳೂರಿನಿಂದ ಬರಬೇಕಿತ್ತು. ಈ ಶಿಲಾಶಾಸನದ ಪ್ರಕಾರ ಕುಣಿಗಲ್ಲಿನಿಂದ ಬಂದ ಕೆಂಪೇಗೌಡರು ಮಾಡಿದ್ದು ಜಗಳ ಮಾತ್ರ. ಯುದ್ಧವೆಂದಿಲ್ಲ, ಈ ಹಿಂದೆ ಯಾರೇ ಇತಿಹಾಸಕಾರನಿಗಾಗಲಿ, ಶಾಸನಗಳಾಗಲಿ ಕೆಂಪೇಗೌಡರ ಪೈಕಿ ಯಾರೊಬ್ಬರೂ ಯುದ್ಧದಲ್ಲಿ ಹುತಾತ್ಮರಾಗಿದ್ದರ ಸುಳಿವು ನೀಡಿಲ್ಲ. ವಿಜಯನಗರದ ಅರಸು ಅಚ್ಯುತರಾಯನನ್ನೇ ಜಟ್ಟಿ ಕಾಳಗದಲ್ಲಿ ಮಣಿಸಿದ ಹಿರಿಯ ಕೆಂಪೇಗೌಡರು ಹೇಳಹೆಸರಿಲ್ಲದ ಯಾರಿಂದಲೋ ಜಗಳದಲ್ಲಿ (ಯುದ್ಧ?) ಕೊಲೆಯಾಗುತ್ತಾರೆಂದರೆ ಅದು ಅವರ ಪರಾಕ್ರಮಕ್ಕೇ ಮಾಡುವ ಅನ್ಯಾಯವೂ ಹೌದು, ಅಪಚಾರ ಕೂಡ. ಅಂದರೆ ಕುಣಿಗಲ್ಲಿನಲ್ಲಿ ಹಿರಿಯ ಕೆಂಪೇಗೌಡನೆಂಬ ಬೇರೆ ಯಾರೋ ಜಮೀನುದಾರ (ಭೂಪತಿ, ಭೂಪಾಲ) ಇದ್ದಿರಬಹುದಾ? 'ಐಕ್ಯ' ಎಂಬ ಪದ ಚಾಲ್ತಿಯಲ್ಲಿದ್ದಾಗ ಕಾಳಗವೆಂಬ ಕನ್ನಡ ಪದವೂ ಬಳಕೆಯಲ್ಲಿರಲೇಬೇಕಲ್ಲವೇ? ರೌಡಿಗಳು ಹೊಡೆದಾಡಿಕೊಂಡು ಸಾಯುವುದಕ್ಕೂ ಕಾಳಗಕ್ಕೂ ವ್ಯತ್ಯಾಸ ಗೊತ್ತಿಲ್ಲವಾದರೆ ಮಾತ್ರವೇ ಜಮೀನುದಾರರಾದ ಕೆಂಪೇಗೌಡರಿಗೂ ದೊರೆ ಕೆಂಪೇಗೌಡರಿಗೂ ವ್ಯತ್ಯಾಸ ಗೊತ್ತಾಗುವುದಿಲ್ಲ ತಾನೇ? ಸತ್ಯ ಹೊರಬರುವ ತನಕವಾದರೂ ನಾವುಗಳು ದುಡುಕಬಾರದಲ್ಲವೇ?

ಈ ಹಂತದಲ್ಲಿ ಈ ಪ್ರಕರಣಕ್ಕೆ ಎಂಟ್ರಿ ಕೊ[...] ಅನಿರೀಕ್ಷಿತ ಆಸಾಮಿ ಬನಶಂಕರಿ ದೇವಸ್ಥಾನ ವಾರ್ಡಿ[...] ಮಾಜಿ ಬಿಬಿಎಂಪಿ ಕೌನ್ಸಿಲರ್ ಬಸವರಾಜು. ಜಾತಿಯ[...] ಒಕ್ಕಲಿಗನಲ್ಲದೆ ಹೋದರೂ ಬಿಜೆಪಿ ನಾಯಕ ಆರ್[...] ಅಶೋಕ್ ಮೇಲೆ ಜಿದ್ದಿಗೆ ಬಿದ್ದಿದ್ದ ಬಸವರಾಜು ಕೆಂಪೇಗೌ[...] ಸಮಾಧಿಯ ಅಧಿಕೃತ ವಕ್ತಾರನಂತೆ ಸಿಕ್ಕಸಿ[...] ರಾಜಕಾರಣಿಗಳನ್ನು ಹಿಡಿದೊಯ್ದು ಕೆಂಪಾಪುರ[...] ಗೋಪುರದೆದುರು ಫೋಟೋ ಹೊಡೆಸಲಾರಂಭಿಸಿ[...] ನಂಜಾವಧೂತರ ನಂತರ ವಿಶ್ವ ಒಕ್ಕಲಿಗರ ಪೀಠದ ಕುಮಾ[...] ಚಂದ್ರಶೇಖರ್‌ನಾಥರು, ಅನಂತರ ಮಾಜಿ ಪ್ರಧಾ[...] ದೇವೇಗೌಡರು, ತದನಂತರ ಮಂತ್ರಿ ಡಿಕೆ, ಅನಂತ[...] ಆರ್. ಅಶೋಕ್- ಹೀಗೆ ಪ್ರತಿಯೊಬ್ಬ ಒಕ್ಕಲಿಗ ರಾಜಕಾರ[...] ಸ್ವಾಮೀಜಿಗಳೆಲ್ಲ ಕೆಂಪೇಗೌಡರ ಸಮಾಧಿ ಸಿಕ್ಕಿತೆಂದ[...] ಕೆಂಪಾಪುರಕ್ಕೆ ಬಂದು ಪೋಜು ಕೊಟ್ಟದ್ದೇನು?

ಯಲಹಂಕ ಪ್ರಭು

ನಿಜಕ್ಕೂ ಇದು ಕೆಂಪೇಗೌಡರ ಸಮಾಧಿಯಾ[...] ಕೆಂಪೇಗೌಡದ ಸಮಾಧಿಯೇ ಆಗಿದ್ದ ಪಕ್ಷದಲ್ಲಿ ಯಾ[...] ಕೆಂಪೇಗೌಡರು? ಹಿರಿಯ ಕೆಂಪೇಗೌಡರಾ? ಅವರ ಮ[...]



...ಂಪೇಗೌಡರಾ? ಮೊಮ್ಮಗ ಮುಮ್ಮಡಿ ...ವೆ ಇವರ ಪುತ್ರ ಕೆಂಪವೀರಪ್ಪ ಗೌಡರಾ? ...ಬ್ಬರ ಪಿತಾಮಹರಾದ ಹಿರಿಯ ಕೆಂಪೇಗೌಡರ ...ನಂಜೇಗೌಡರಾ?

ಇತಿಹಾಸಕಾರರು ತಿಳಿದಂತೆ ಈಗಿರುವ ...ನ ಯಾವುದೋ ಪ್ರಾಂತದಿಂದ ಬಂದು ದೇವನ ... ಆಹುತಿಯನ್ನು ತನ್ನ ನೆಲೆಯನ್ನಾಗಿಸಿಕೊಂಡ ...ಗೌಡರೇ ಕೆಂಪೇಗೌಡರ ಸಂತತಿಯ ... ಅವರ ನಂತರ ಹೆಸರುವಾಸಿಯಾಗಿದ್ದು ...ದರು. ಇವರ ಕಾಲ ಕ್ರಿ.ಶ. 1355 ರಿಂದ ...ದರೆ 14ನೇ ಶತಮಾನ: ಇವರ ಮಗನೇ ...ಗೌಡ. ಯಲಹಂಕ ಸಮೀಪದ ಚಿಕ್ಕಜಾಲದ ...ಕಟ್ಟಿಕೊಂಡು ಅಲ್ಲಿಂದಲೇ ದೇವನಹಳ್ಳಿಯನ್ನೂ ... ಕೆಂಪನಂಜೇಗೌಡರ ಮಗನೇ ಬೆಂಗಳೂರು ...ಂಪೇಗೌಡರು ಅರ್ಥಾತ್ ಯಲಹಂಕ ಪ್ರಭು ...ಮ!

ಇತಿಹಾಸಕಾರ ರೈಸ್ ಕಲೆ ಹಾಕಿದ ... ಮತ್ತು ಸರ್ಕಾರದ ಗೆಜೇಟಿಯರ್ ಪ್ರಕಾರ ...ಾಲಮಾನ 1480 ರಿಂದ 1570 ಅಂದರೆ ...ಗಳು. ಇವರೇ ಬೆಂಗಳೂರಿನ ಶಿಲ್ಪಿ, ಗವಿ ...ಪ ದೇವಸ್ಥಾನ, ಧರ್ಮರಾಯ ಸ್ವಾಮಿ ದೇವಸ್ಥಾನ, ... ಕೆರೆ, ಅಣ್ಣಮ್ಮನ ದೇವಸ್ಥಾನ ಮತ್ತು ... ಗೋಪುರಗಳೆಲ್ಲವನ್ನು ನಿರ್ಮಿಸಿದ್ದೇ ಇವರು. ...ಇಬ್ಬರು ಪುತ್ರರು ಇಮ್ಮಡಿ ಕೆಂಪೇಗೌಡ ಮತ್ತು ... ಮಾಗಡಿಯನ್ನು ತನ್ನ ನೆಲೆಯನ್ನಾಗಿ ...ತು ತಿರುಮಲೆ ರಂಗನಾಥಸ್ವಾಮಿ ದೇವಸ್ಥಾನ, ...ಸೋಮೇಶ್ವರ ದೇವಸ್ಥಾನ, ಹುತ್ರಿದುರ್ಗದ ... ಕಾರಣನಾದ ಇಮ್ಮಡಿ ಕೆಂಪೇಗೌಡ ...ೂ ಪರಾಕ್ರಮಿ, ಯುದ್ಧನಿಪುಣ ಮತ್ತು ...ಯಾಗಿದ್ದ. ಇತಿಹಾಸಕಾರರ ಪ್ರಕಾರ ಇಮ್ಮಡಿ ...ು ಕಾಲಾಧೀನರಾಗಿದ್ದು 1608ರಲ್ಲಿ. ಇಮ್ಮಡಿ ... ಮಗನೇ ಮುಮ್ಮಡಿ ಕೆಂಪೇಗೌಡ. ಈತನ ...ರ ಪೈಕಿ ಒಬ್ಬ ದೊಡ್ಡ ವೀರಪ್ಪಗೌಡ ಮತ್ತೊಬ್ಬ ...ಗೌಡ. ಇವರ ಕಾಲಾವಧಿ 16ನೇ ಶತಮಾನದ ...ಾ 17ನೇ ಶತಮಾನದ ಆದಿ ಭಾಗ.

...ಜೇಗೌಡ, ಹಿರಿಯ ಕೆಂಪೇಗೌಡ, ಇಮ್ಮಡಿ ... ಮುಮ್ಮಡಿ ಕೆಂಪೇಗೌಡ, ಕೆಂಪವೀರಪ್ಪಗೌಡ ...ಮ್ಮಡಿ ಕೆಂಪೇಗೌಡ ಇತ್ಯಾದಿ ಕೆಂಪೇಗೌಡರ ... ಕೆಂಪಾಪುರದ ಬಳಿ ಹತನಾದ ಕೆಂಪೇಗೌಡ ...ಬೆಂಗಳೂರು ನಿರ್ಮಾತೃ ಕೆಂಪೇಗೌಡರದ್ದೇ ...ಮು ಎಂದು ಉತ್ಸಾಹದ ಬರದಲ್ಲೋ, ಜಾತಿ ...ಕ್ಕೋ ಅಥವಾ ಕುಲಹಿರಿಮೆಗೋ ...ಹುದು. ಭೂಮಿ, ಕೃಷಿ, ಜೀವನಾಧಾರ ... ಕಳೆದುಕೊಂಡು ದಿನೇದಿನೇ ಅತಂತ್ರರಾಗುತ್ತಿರುವ ...ದ ಮತ್ತೊಂದು ರೂಪವಾದ ಒಕ್ಕಲಿಗರ ... ಈ ರೂಪದಲ್ಲಿರಬಹುದು.

...ಜಾಂಗವೊಂದರ ಪ್ರಾತಿನಿಧಿಕ ಸಂಸ್ಥೆಯಾದ ...ಕ್ಕೆ ಕನಿಷ್ಠ ಪ್ರಜ್ಞೆಯಾದರೂ ಬೇಕಲ್ಲವೇ? ... ದೇವೇಗೌಡರಿಗಾದರೂ ಸಮಯ ಪ್ರಜ್ಞೆ ...ಡ ಪರ ಸಂಘಟನೆಗಳೋ ಬೆಂಗಳೂರಿನ ...ದಿಕೆಗಳೋ ಕೆಂಪೇಗೌಡರ ಕುರಿತಂತೆ ...ವುದಕ್ಕೂ, ಒಕ್ಕಲಿಗರ ಸಂಘ ತಾನೇ ... ಹೆಸರಿನ ಪೇಟೆಂಟ್ ಘೋಷಣೆ ...ದಕ್ಕೂ ವ್ಯತ್ಯಾಸವಿದೆ. ಜಾತಿಯಾಗಿ ಒಕ್ಕಲಿಗರು ... ಹೆಸರೆತ್ತಿದಾಕ್ಷಣ ಮಿಕ್ಕೆಲ್ಲಾ ಜನಸಮೂಹ ...ವಿಶ್ವಾಸ ಗುಮಾನಿಯ ವಸ್ತುವಾಗುತ್ತದೆ. ... ಬಗ್ಗೆ ಒಕ್ಕಲಿಗರಿಗಿರುವಷ್ಟು ಕಾಳಜಿ ಬೇರೆ ...ಇಲ್ಲ ಸಿಜ. ಆದರೂ ಬೇರೆ ಸಮೂಹ ...ಸೂಯೆ ಹುಟ್ಟಿಸಬಾರದಲ್ಲವೆ? ...ಸೂ, ಈ ಬಗ್ಗೆ ಯಾವುದೇ ವರದಿಯನ್ನೇ ...ಕ್ಕೂ ಮೊದಲೇ ಇದು ಕೆಂಪೇಗೌಡರು ...ಡಿದ ಸ್ಥಳವೆಂದರೆ ಕೊಂದವರು ಯಾರು? ...ಸುವವರು ಯಾರು?

■ ರಾ. ಸೋಮನಾಥ್

ಧಾರವಾಡ: ಶೆಟ್ಟರ್-ಹೊರಟ್ಟಿ 'ಡೀಲ್ ದೋಸ್ತಿ?'



ರಾಜ್ಯದಲ್ಲಿ ವಿಧಾನ ಪರಿಷತ್ ಚುನಾವಣೆಯ ಕಾವು ದಿನೇದಿನೇ ಉತ್ತುಂಗಕ್ಕೇರುತ್ತಿದೆ. ಧಾರವಾಡವೂ ಇದಕ್ಕೇನು ಹೊರತಲ್ಲ. ಆದರೆ ಬಿಜೆಪಿಯ ಜಗದೀಶ್ ಶೆಟ್ಟರ್ ಹಾಗೂ ಜೆಡಿಎಸ್‌ನ ಬಸವರಾಜ್ ಹೊರಟ್ಟಿಯ ನಡುವೆ ಮ್ಯಾಚ್ ಫಿಕ್ಸಿಂಗ್ ನಡೆದಿರುವ ಗುಮಾನಿ ಚುನಾವಣೆಯ ರಂಗನ್ನೇ ಕದಡುತ್ತಿದೆ. ಈಗ ನಡೆಯಲಿರುವ ಸ್ಥಳಿಯ ಸಂಸ್ಥೆಗಳ ಎಂಎಲ್‌ಸಿ ಸ್ಥಾನಕ್ಕೆ ಬಿಜೆಪಿಯಿಂದ ಆದಾಗಲೇ ಜಗದೀಶ್ ಶೆಟ್ಟರ್ ತಮ್ಮ ಪ್ರದೀಪ್ ಶೆಟ್ಟರ್‌ಗೆ ಟಿಕೆಟ್ ನಿಕ್ಕಿಯಾಗಿದೆ. ಆತನನ್ನು ಗೆಲ್ಲಿಸಿಕೊಳ್ಳೋದು ಶೆಟ್ಟರ್‌ಗೆ ಪ್ರತಿಷ್ಠೆಯ ಪಣ. ಯಾಕೆಂದರೆ ದಿನೇದಿನೇ ತನಗಿದ್ದ ಅಡೆತಡೆಗಳನ್ನೆಲ್ಲಾ ನಿವಾರಿಸಿಕೊಳ್ಳುತ್ತಿರುವ ಯಡ್ಡಿ ಮತ್ತೆ ರಾಜ್ಯ ಬಿಜೆಪಿಯ ಮೇಲೆ ಹಿಡಿತ ಸಾಧಿಸಲು ತಯಾರಾಗುತ್ತಿದ್ದಾನೆ. ರಾಜ್ಯ ಬಿಜೆಪಿ ಅಧ್ಯಕ್ಷಗಿರಿಗೆ ಈಗಾಗಲೇ ಬೆಂಬಲಿಗರ ಸಹಿ ಸಂಗ್ರಹದಂತಹ ಹೈಡ್ರಾಮಾವೂ ಶುರುವಾಗಿದೆ. ಇತ್ತ ವಿರೋಧ ಪಕ್ಷದ ನಾಯಕನಾಗಿ ಜಗದೀಶ್ ಶೆಟ್ಟರ್ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಪಕ್ಷದೊಳಗೆ ತನಗೆ ಪರ್ಯಾಯ ನಾಯಕ, ಅದರಲ್ಲೂ ಲಿಂಗಾಯತ ನಾಯಕ ಇರಬಾರದೆನ್ನುವ ಯಡ್ಡಿ ಇರಾದೆ ಹೊಸದೇನೂ ಅಲ್ಲ, ಇಂತಹ ಹೊತ್ತಲ್ಲಿ ತನ್ನ ತಮ್ಮನೇನಾದರು ಚುನಾವಣೆಯಲ್ಲಿ ಸೋತು ಶೆಟ್ಟರ್ ಪ್ರಭಾವ ಸ್ವಕ್ಷೇತ್ರದಲ್ಲೇ ಕುಸಿದಿದೆ ಎಂಬ ಮೆಸೇಜು ಹೊರಬಿದ್ದರೆ, ಯಡ್ಡಿ ಅದನ್ನೇ ನೆಪ ಮಾಡಿಕೊಂಡು ತನ್ನನ್ನು ಮೂಲೆಗುಂಪು ಮಾಡಬಹುದೆನ್ನುವ ಆತಂಕ ಶೆಟ್ಟರ್‌ಗಿದೆ. ಆದ್ದರಿಂದಲೇ ಶತಾಗತಾಯ ಕಿರಿ ಶೆಟ್ಟರ್‌ನನ್ನು ವಿಕ್ಟರಿ ದಡ ಮುಟ್ಟಿಸಬೇಕೆನ್ನುವುದು ಹಿರಿ ಶೆಟ್ಟರ್‌ನ ಕಸರತ್ತು.

ಇದೇ ಕಾರಣಕ್ಕೆ ಬಸವರಾಜ್ ಹೊರಟ್ಟಿಯ ಜೊತೆ ಡೀಲ್ ಕುದುರಿಸಿಕೊಂಡಿದ್ದಾರೆ ಎನ್ನುವುದು ಸದ್ಯದ ಲೇಟೆಸ್ಟ್ ರೂಮರ್. ಈ ಚುನಾವಣೆ ಮುಗಿದು ಮುಂಬರುವ ಶಿಕ್ಷಣ ಕ್ಷೇತ್ರ ಎಂಎಲ್‌ಸಿ ಚುನಾವಣೆಗೆ ಬಸವರಾಜ ಹೊರಟ್ಟಿಯೇ ಜೆಡಿಎಸ್‌ನ ಕಾಯಂ ಕ್ಯಾಂಡಿಡೇಟ್. ಈಗ ಸ್ವಲ್ಪ ಮೈಲೇಜ್ ಕಳೆದುಕೊಂಡಿರುವ ಜೆಡಿಎಸ್ ಮತ್ತು ಹೊರಟ್ಟಿಗೆ ಸ್ವಂತ ಸಾಮರ್ಥ್ಯದ ಮೇಲೆ ಗೆದ್ದು ಬರುವ ತಾಕತ್ತು ಉಳಿದಿಲ್ಲ. ಹಾಗಾಗಿ ಈ ಚುನಾವಣೆಯಲ್ಲಿ ಹೊರಟ್ಟಿ ಸಾಹೇಬರು ಪ್ರದೀಪ್ ಶೆಟ್ಟರ್ ಗೆಲ್ಲಲು ನೆರವಾದರೆ ಮುಂಬರುವ ಶಿಕ್ಷಣ ಕ್ಷೇತ್ರದ ಚುನಾವಣೆಯಲ್ಲಿ ಹೊರಟ್ಟಿ ಗೆಲ್ಲಲು ಶೆಟ್ಟರ್ ಪಾಳಯ ಸಾಥ್ ನೀಡಬೇಕೆನ್ನುವುದೇ ಒಪ್ಪಂದ!

ರಾಜ್ಯ ಮಟ್ಟದ ನಾಯಕರ ನಡುವೆ ನಡೆಯುತ್ತಿರುವ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಮಾತುಕತೆ ಕುದುರಿದರೆ ಅದೇ ನೆಪ ಮಾಡಿಕೊಂಡು ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೇ ಇರುವುದು, ಆ ಮೂಲಕ ಒಳಗಿಂದೊಳಗೇ ಬಿಜೆಪಿಗೆ ಅನುಕೂಲ ಮಾಡಿಕೊಡುವುದು ಅಥವಾ ಒಂದೊಮ್ಮೆ ರಾಜ್ಯ ಮಟ್ಟದ ಮೈತ್ರಿ ಮುರಿದು ಬಿದ್ದು ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಲೇಬೇಕು ಎಂದಾದರೆ ಅಲ್ಪಸಂಖ್ಯಾತ ಕೋಟಾದಡಿ ಇಸ್ಮಾಯಿಲ್ ಕಾಲೆ ಬುಡ್ಡೆ ಎಂಬ ಡಮ್ಮಿ ಕ್ಯಾಂಡಿಡೇಟ್ ಹಾಕುವುದು ಇದೀ ಒಪ್ಪಂದದ ಸಾರಾಂಶ.


ಹೊರಟ್ಟಿಯ ಈ ಮ್ಯಾಚ್ ಫಿಕ್ಸಿಂಗ್ ವಾಸನೆ ಬಡಿಯುತ್ತಿದ್ದಂತೆಯೇ ಪಕ್ಷದಲ್ಲಿಯೇ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಕಳಸಾ-ಬಂಡೂರಿ ನಾಲಾ ಜೋಡಣೆಯ ರೈತರ ಹೋರಾಟದಲ್ಲಿ ಜೆಡಿಎಸ್ ಒಂದಷ್ಟು ಜನಬೆಂಬಲವನ್ನು ದಕ್ಕಿಸಿಕೊಂಡಿದೆ. ರೈತರು ಕಾಂಗ್ರೆಸ್-ಬಿಜೆಪಿಯನ್ನು ತಿರಸ್ಕರಿಸುತ್ತಾರೆ, ಅದನ್ನು ಈ ಚುನಾವಣೆಯಲ್ಲಿ ಓಟ್‌ಬ್ಯಾಂಕ್ ಆಗಿ ಪರಿವರ್ತಿಸಿಕೊಳ್ಳಬೇಕೆಂಬ ಲೆಕ್ಕಾಚಾರದಲ್ಲಿದ್ದವರಿಗೆ ಹೊರಟ್ಟಿ ಕಲ್ಲು ಹಾಕಲು ಹೊರಟಿರುವುದು ಅಸಮಾಧಾನ ತಂದಿದೆ. ಹೊರಟ್ಟಿ ಮನಸ್ಥಿತಿಯನ್ನು ಅರ್ಥಮಾಡಿಕೊಂಡಿರುವ ಕೆಲವರು ಕಳಸಾ-ಬಂಡೂರಿ ನಾಲಾ ಜೋಡಣೆಯ ಹೋರಾಟದಲ್ಲಿ ತೊಡಗಿಸಿಕೊಂಡ ವಿಕಾಸ ಸೊಪ್ಪಿನನ್ನು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಾಯಿಸುತ್ತಿದ್ದಾರೆ. ಹಣಕಾಸಿನ ನೆರವನ್ನು ಒದಗಿಸುವ ಭರವಸೆ ದೊರೆತಿದೆ. ಇದು ನಿಜವಾದಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಬಯಸಿರುವ ಪ್ರದೀಪ ಶೆಟ್ಟರ್‌ಗೆ ಗೆಲುವಿನ ಓಟಕ್ಕೆ ಬ್ರೇಕ್ ಬೀಳಲಿದೆ.

ಕಾಂಗ್ರೆಸ್‌ನಲ್ಲಿ ತಿಕ್ಕಾಟ

'ಪತ್ರಿಕೆ' ಮುದ್ರಣಕ್ಕೆ ಹೋಗುವ ಹೊತ್ತಿನವರೆಗೂ ಕಾಂಗ್ರೆಸ್ ಪಾಳಯದ ರಾದ್ಧಾಂತ ದಿಲ್ಲಿ ಅಂಗಳ ಬಿಟ್ಟು ವಾಪಾಸ್ ಬಂದಿಲ್ಲ, ಇದು ಆಕಾಂಕ್ಷಿಗಳ ಎದುಸಿರನ್ನು ಮತ್ತಷ್ಟೂ ಹೆಚ್ಚಿಸಿದೆ. ನಾಗರಾಜ ಛಬ್ಬಿ ಹಾಗೂ ಶ್ರೀನಿವಾಸ್ ಮಾನೆ ಇಬ್ಬರ ನಡುವೆ ಟಿಕೆಟ್‌ಗೆ ಭಾರೀ ಪೈಪೋಟಿ ನಡೆದಿದೆ. ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ತನ್ನ ಪಾರುಪತ್ಯೆ ಮೆರೆದಿದ್ದ ಎಚ್.ಕೆ. ಪಾಟೀಲರ ಮಾತು ಈಗ ಅಷ್ಟಾಗಿ ನಡೆಯುತ್ತಿಲ್ಲ. ಎಚ್.ಕೆ. ಪಾಟೀಲರು ಸಹೋದರ ಡಿ.ಆರ್.ಪಾಟೀಲ ಇಲ್ಲವೆ ಅಲ್ಪಸಂಖ್ಯಾತ ಖೋಟಾದಲ್ಲಿ ಸೀಟು ನೀಡುವುದಾದರೆ ತನ್ನ ಶಿಷ್ಯ ಎ.ಎಂ.ಹಿಂಡಸಗೇರಿಗೆ ನೀಡಿ ಎಂಬ ಬೇಡಿಕೆ ಇಟ್ಟದ್ದಾರಾದರು ಅದು ಹಣ್ಣಾಗುವ ಸಾಧ್ಯತೆ ತೀರಾ ಕಮ್ಮಿ. ಮಾಜಿ ಸಚಿವ ಜಬ್ಬಾರಖಾನ್ ಹೊನ್ನಳ್ಳಿ ಇದನ್ನು ವಿರೋಧಿಸಿ ವಿನಯ ಕುಲಕರ್ಣಿ ಹಾಗೂ ಸಿ.ಎಸ್. ಶಿವಳ್ಳಿ ಯಾರನ್ನೂ ಬೆಂಬಲಿಸುತ್ತಾರೋ ಅವರಿಗೆ ಟಿಕೆಟ್ ನೀಡಿ ಅನ್ನುತ್ತಿದ್ದಾರೆ.

ಸಚಿವ ವಿನಯ ಕುಲಕರ್ಣಿ, ಸಂಸದಿಯ ಕಾರ್ಯದರ್ಶಿ ಸಿ.ಎಸ್. ಶಿವಳ್ಳಿ, ಶಾಸಕ ಪ್ರಸಾದ ಅಬ್ಬಯ್ಯ ಈ ಮೊದಲು ಶ್ರೀನಿವಾಸ್ ಮಾನೆಗೆ ಬೆಂಬಲಿಸಿದ್ದರಾದರೂ ಅಂತಿಮ ಕ್ಷಣದಲ್ಲಿ ಅವರ ಒಲವು ನಾಗರಾಜ ಛಬ್ಬಿಯತ್ತ ತಿರುಗಿತ್ತು, ಇದರ







ಸುಳಿವಿಡಿದ ಶ್ರೀನಿವಾಸ್ ಮಾನೆ ನೇರ ದೆಹಲಿಗೇ ಎಡತಾಕಿ ಯೂತ್ ಖೋಟಾದಲ್ಲಿ ತನಗೇ ಮತ್ತೆ ಟಿಕೆಟ್ ನೀಡುವಂತೆ ದಿಗ್ವಿಜಯ್ ಸಿಂಗ್‌ಗೆ ದುಂಬಾಲು ಬಿದ್ದಿದ್ದ. ತನಗೆ ಹಾಗೂ ನಾಗರಾಜ್ ಛಬ್ಬಿಗೆ ಇಬ್ಬರಿಗೂ ಟಿಕೆಟ್ ನೀಡಿ ಒಂದು ಸ್ಥಾನಕ್ಕೆ ಸ್ಪರ್ಧಿಸುವುದು ಬೇಡ 2 ಸ್ಥಾನಗಳನ್ನು ಗೆಲ್ಲುವ ಸಾಮರ್ಥ್ಯವಿದೆ ಎಂಬುದು ಆತನ ವಾದ ಎನ್ನಲಾಗುತ್ತಿದೆ.

ತಮಾಷೆಯ ಸಂಗತಿ ಎಂದರೆ 'ಈಗಾಗಲೇ ನಾನು ಸ್ಪರ್ಧಿಸುವುದು ಗ್ಯಾರಂಟಿ ಅಂತ ಮತದಾರರಿಗೆ ದೀಪಾವಳಿ ಹಬ್ಬದ ಸಮಯದಲ್ಲಿ ಬಟ್ಟೆ ಹಾಗೂ ಸೀರೆ ಹಂಚಿದ್ದೇನೆ' ಅಂತ ದಿಗ್ಗಿಯ ಮುಂದೆ ಆತ ಅವಲತ್ತುಕೊಂಡಿದ್ದ ಎಂಬ ವರ್ತಮಾನ ಹರಿದಾಡುತ್ತಿದೆ. ಅದಕ್ಕೆ ಸರಿಯಾಗೆ ಉತ್ತರವಿಕ್ಕಿದ ದಿಗ್ವಿಜಯ್ ಸಿಂಗ್ 'ಪ್ಯಾಂಟ್, ಶರ್ಟು, ಸೀರೆ ಹಂಚಿದ್ದಿಯಾ ಆದರೆ ಶೆಟ್ಟರ್ ಈಗಾಗಲೇ ಬೆಲೆಬಾಳುವ ವಾಚ್ ಸಮೇತ ಸೀರೆಯನ್ನೂ ಮನೆಮನೆಗೆ ತಲುಪಿಸಿದ್ದಾರೆ ಎಂಬ ರಿಪೋರ್ಟ್ ನಮ್ಮ ಕೈಸೇರಿದೆ. ನಮಗೀಗ ಗೆಲುವುದಷ್ಟೇ ಮುಖ್ಯ' ಎಂದು ಶ್ರೀನಿವಾಸ ಮಾನೆಗೆ ದಬಾಯಿಸಿದ್ದರು ಎಂಬ ಸುದ್ದಿಯೂ ರೆಕ್ಕೆಪುಕ್ಕ ಪಡೆದು



ಹಾರಾಡುತ್ತಿದೆ.

ಅಲ್ಲದೇ ನಾಗರಾಜ್ ಛಬ್ಬಿಗೇ ಟಿಕೆಟ್ ಬಹುತೇಕ ನಿಶ್ಚಯವಾಗಿದ್ದು ಶ್ರೀನಿವಾಸ್ ಮಾನೆಯನ್ನು ಸಮಾಧಾನ ಮಾಡುವುದಕ್ಕೋಸ್ಕರ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಲಘಟಗಿ ಕ್ಷೇತ್ರದಿಂದ ಆತನನ್ನೇ ಅಭ್ಯರ್ಥಿಯನ್ನಾಗಿಸುವ ಭರವಸೆಯನ್ನು ಹೈಕಮಾಂಡ್ ನೀಡಿದೆಯಂತೆ. ಮಂತ್ರಿಗಿರಿ ಕಳೆದುಕೊಂಡ ಮೇಲೆ ಕಲಘಟಗಿಯ ಶಾಸಕ ಸಂತೋಷ್ ಲಾಡ್ ಅಕ್ಷರಶಃ ನಾಪತ್ತೆಯಾಗಿರೋದರಿಂದ ಶ್ರೀನಿವಾಸ್ ಮಾನೆಯನ್ನು ಅಲ್ಲಿಗೆ ಪ್ರತಿಷ್ಠಾಪಿಸುವ ಆಲೋಚನೆ ಹೈಕಮಾಂಡ್ ನಾಯಕರಿಗೆ ಇದ್ದರೂ ಇರಬಹುದು.

ಜಾತಿ ಲೆಕ್ಕಾಚಾರ

ಟಿಕೆಟ್ ಗಿಟ್ಟಿಸುವಲ್ಲಿ ಜಾತಿಯೂ ಕೆಲಸ ಮಾಡುತ್ತಿದೆ. ನಾಗರಾಜ ಛಬ್ಬಿ ಲಿಂಗಾಯತ ಎಂಬ ಕಾರಣಕ್ಕೆ ಜಿಲ್ಲಾ ಉಸ್ತುವಾರಿ ವಹಿಸಿಕೊಂಡಿರುವ ವಿನಯ ಕುಲಕರ್ಣಿ ಬೆಂಬಲಕ್ಕೆ ನಿಂತಿದ್ದಾನೆ. ವಿನಯ ಕುಲಕರ್ಣಿ ಮಾತಿಗೆ ಸಿ.ಎಸ್. ಶಿವಳ್ಳಿ, ಪ್ರಸಾದ್, ಅಬ್ಬಯ್ಯ ಧ್ವನಿಗೂಡಿಸುತ್ತಿದ್ದಾರೆ.

ಕಾಂಗ್ರೆಸ್-ಬಿಜೆಪಿ ಲೆಕ್ಕಾಚಾರ ತಲೆಕೆಳಗೆ ಮಾಡುವ ಮತ್ತೊಂದು ಲೆಕ್ಕಾಚಾರ ಸದ್ದಿಲ್ಲದೆ ನಡೆದಿದೆ. ಇದು ಹಾವೇರಿಯ ಸಂಸದ ಶಿವಕುಮಾರ ಉದಾಸಿ ತೆರೆಮರೆ ಕಸರತ್ತು ಎನ್ನಲಾಗುತ್ತಿದೆ. ಕಳೆದ ಬಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕುರುಬ ಜಾತಿಗೆ ಸೇರಿದ ಆರ್. ಶಂಕರ ಅವರನ್ನು ಅಹಿಂದ ಟ್ರಂಪ್‌ಕಾರ್ಡ್ ಬಳಸಿ ಕಣಕ್ಕಿಳಿಸಲು ತಯಾರಿ ನಡೆಸಿದ್ದರು. ಈ ಕ್ಷೇತ್ರದಲ್ಲಿ 7867 ಮತಗಳಲ್ಲಿ ಅರ್ಧದಷ್ಟು ಅಹಿಂದಕ್ಕೆ ಸೇರಿದ ಮತಗಳಿವೆ. ಕುರುಬ ಸಮಾಜಕ್ಕೆ ಸೇರಿದವರು ಬಹಳಷ್ಟು ಜನ ಆಯ್ಕೆಯಾಗಿದ್ದಾರೆ. ಈ ಬಾರಿ ಹಾವೇರಿಯವರೇ ಪರಿಷತ್‌ನ ಚುನಾವಣೆಯಲ್ಲಿ ಗೆಲ್ಲಬೇಕೆನ್ನುವ ವಾದ ಕೂಡ ಮುಂದಿಡಲಾಗಿದೆ.

ಈಗಾಗಲೇ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಘೋಷಿಸಿರುವ ಪ್ರದೀಪ ಶೆಟ್ಟರ ಲಿಂಗಾಯತ ಬಣಜಿಗ. ಇನ್ನು ಕಾಂಗ್ರೆಸ್‌ನಿಂದ ನಾಗರಾಜ ಛಬ್ಬಿಗೆ ಟಿಕೆಟ್ ದೊರೆತರೆ ಅದು ಲಿಂಗಾಯತ ಗಾಣಿಗರ ಸಮುದಾಯಕ್ಕೆ ದಕ್ಕುತ್ತದೆ. ಇದರೊಂದಿಗೆ ಕಳಸಾ-ಬಂಡೂರಿ ನಾಲಾ ಜೋಡಣೆ ಹೋರಾಟ ಸಮನ್ವಯ ಸಮಿತಿಯಿಂದ ಲಿಂಗಾಯತ ಪಂಚಮಸಾಲಿ ಜಾತಿಯ ವಿಕಾಸ ಸೊಪ್ಪಿನ ಸ್ಪರ್ಧಿಸಿದರೆ ಸಂಪೂರ್ಣ ಲಿಂಗಾಯತರ ನಡುವಿನ ಕಾಳಗದಂತಾಗುತ್ತದೆ. ಅದಕ್ಕಾಗಿಯೇ ಹಾವೇರಿ ಜಿಲ್ಲೆಯವರು ಅಹಿಂದ ಪ್ರತಿನಿಧಿಯನ್ನಾಗಿ ಕುರುಬ ಸಮಾಜಕ್ಕೆ ಸೇರಿದ ಆರ್. ಶಂಕರ್‌ನನ್ನು ಇಳಿಸಲು ತೀರ್ಮಾನಿಸಿದ್ದಾರೆ.

■ ತುಬ್ಚ್ಯೆ ಯಾಂವ

ಮಗಳ ಹುಟ್ಟಿನೊಂದಿಗೆ ಜನಿಸಿದ ಸಮಾಜಮುಖಿ ಕನ


ತಾಯಿಯ ಗರ್ಭದ ಬಿಸಿಯನ್ನು ಸೀಳಿಕೊಂಡು ಜನಿಸುವ ಮಗುವೊಂದು ತನ್ನ ಆಗಮನದೊಟ್ಟಿಗೆ ಏನೆಲ್ಲಾ ಬದಲಾವಣೆಗಳನ್ನು ಹೊತ್ತು ತರಬಲ್ಲದು? ಸಾಮಾನ್ಯ ವ್ಯಾಖ್ಯಾನದಲ್ಲಿ ತನ್ನ ಜನನದ ಮೂಲಕ ಒಬ್ಬ ಗಂಡಸನ್ನು ಅಪ್ಪನನ್ನಾಗಿಸುವ ಮಗು, ಹೆತ್ತ ಆ ಹೆಂಗಸನ್ನು ಅಮ್ಮನನ್ನಾಗಿಸುತ್ತದೆ. ಆದರೆ ಏನೆಲ್ಲಾ ಮತ್ತು ಎಷ್ಟೆಲ್ಲಾ ಜೈವಿಕ, ಭಾವನಾತ್ಮಕ ತಳಮಳ ಮಿಳಿತಗಳ ತರುವಾಯ ತಾಯಿಯ ದೇಹದಿಂದ ಹೊಸ ಜೀವಧಾರೆಯಾಗಿ ಧರೆಗಿಳಿವ ಒಂದು ಮಗು ತರುವ ಬದಲಾವಣೆ ಅಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತವೆಯೇ? ಖಂಡಿತ ಇಲ್ಲ, ಒಂದು ಇಡೀ ಸಮಾಜದ ಕರ್ತವ್ಯ ಮತ್ತು ಜವಾಬ್ದಾರಿಗಳ ಮಗ್ಗುಲು ಹಾಗೂ ವ್ಯಾಪ್ತಿಗಳನ್ನೇ ಅದು ಬದಲಿಸಿರುತ್ತದೆ. ಒಂದು ಮಗು ಹುಟ್ಟಿದಾಕ್ಷಣ ಅಪ್ಪನಾದವನ-ಅಮ್ಮನಾದಾಕೆಯ ಜವಾಬ್ದಾರಿ, ಸವಾಲು ಮತ್ತು ಆತಂಕಗಳು ಹೇಗೆ ಇಮ್ಮಡಿಗೊಳ್ಳುತ್ತವೆಯೋ ಸಮಾಜದ ಹೊಣೆ ಕೂಡಾ ಅದೇ ವೇಗದಲ್ಲಿ ವಿಕಾಸಗೊಳ್ಳುತ್ತವೆ. ಆದರೆ ಮಗುವಿನ ಹುಟ್ಟು ಮತ್ತು ಆ ಮೂಲಕ ಹೆಚ್ಚಾಗುವ ಸಮಾಜದ ಜವಾಬ್ದಾರಿಯನ್ನು ತೂಗುವ ವಿಶಾಲ ದೃಷ್ಟಿಕೋನದ ವಿಮರ್ಶೆಯೇ ಇಂದು ಇಲ್ಲವಾಗುತ್ತಿದೆ. ಸಮಾಜದಲ್ಲಿ ಅಸಮಾನತೆ, ಅನಾರೋಗ್ಯ, ಅಪರಾಧ, ಅನಕ್ಷರತೆ, ಬಡತನಗಳಂತಹ ಸವಾಲುಗಳು ದಟ್ಟಗೊಳ್ಳಲು ಇದೂ ಒಂದು ಕಾರಣವಿರಬಹುದು.

ಇಷ್ಟೆಲ್ಲಾ ಪೀಠಿಕೆ ಹಾಕುತ್ತಿರೋದಕ್ಕೆ ಒಂದು ಮುಖ್ಯ ಕಾರಣವಿದೆ. ಮಾರ್ಕ್ ಝುಕರ್‌ಬರ್ಗ್ ಮತ್ತು ಪ್ರಿಸಿಲಾ ಚಾನ್ ದಂಪತಿಗಳಿಗೆ ಇತ್ತೀಚೆಗೆ ಹೆಣ್ಣುಮಗುವೊಂದು ಜನಿಸಿತು. ತಮಗೆ ಹುಟ್ಟಿದ ಆ ಮುದ್ದು ಮಗುವಿಗೆ ಅಷ್ಟೇ ಮುದ್ದಾದ 'ಮ್ಯಾಕ್ಸ್' ಎಂಬ ಹೆಸರನ್ನೂ ಇಟ್ಟಿದ್ದಾರೆ. ಅಂದಹಾಗೆ, ಈ ಮಾರ್ಕ್ ಝುಕರ್‌ಬರ್ಗ್ ಮತ್ತಾರೂ ಅಲ್ಲ, ಇವತ್ತು ಬಹುಪಾಲು ಜಗತ್ತನ್ನೇ ಆವರಿಸಿರುವ ಫೇಸ್‌ಬುಕ್ ಎಂಬ ಸಮೂಹ ಮಾಧ್ಯಮದ ಕಾರಣಕರ್ತ ಮತ್ತು ಪ್ರಸ್ತುತ ಅದರ ಸಿಇಒ. ಆತನ ಹೆಂಡತಿ ಪ್ರಿಸಿಲಾ ಚಾನ್ ಒಬ್ಬ ವೈದ್ಯೆಯಾಗಿ, ಶಿಕ್ಷಣ ತಜ್ಞೆಯಾಗಿ ಗಂಡನ ಛಾಯೆಯಲ್ಲಿ ಕರಗಿಹೋಗದೆ ಅನನ್ಯ ಬದುಕು ರೂಪಿಸಿಕೊಂಡವಳು. ಫೇಸ್‌ಬುಕ್ ಅನ್ನೋದು ಏನಿಲ್ಲವೆಂದರು 45.5 ಬಿಲಿಯನ್ ಡಾಲರ್‌ನಷ್ಟು ಬೃಹತ್ ಸಾಮ್ರಾಜ್ಯ. ಆ ನಿಟ್ಟಿನಲ್ಲಿ ನೋಡುವುದಾದರೆ ಜಗತ್ತಿನ ಸಿರಿವಂತ ಕುಟುಂಬಗಳಲ್ಲಿ ಅವರದೂ ಒಂದು. ಅಂತಹ ಕುಟುಂಬದಲ್ಲಿ ಜನಿಸಿದ ಆ ಮಗುವಿಗೆ ಇನ್ನೆಂತಹ ಕೊರತೆಗಳು ಕಾಡಲು ಸಾಧ್ಯ? ಸಿರಿವಂತ ಝುಕರ್‌ಬರ್ಗ್ ಮತ್ತು ಪ್ರಿಸಿಲಾ ದಂಪತಿ ತಮ್ಮ ಹೊಸ ಪೋಷಕ ಜವಾಬ್ದಾರಿ ನಿಭಾಯಿಸಲು ಆತಂಕಗೊಳ್ಳುವಂತದ್ದು ಏನಿದೆ? ಅನ್ನಿಸೋದು ಸಹಜ. ಆದರೆ ಆ ಶ್ರೀಮಂತ ದಂಪತಿಗಳು ತಮ್ಮ ಮಗುವಿನ ಹುಟ್ಟನ್ನು ತಮ್ಮ ಕುಟುಂಬಕ್ಕಷ್ಟೇ ಸೀಮಿತಗೊಳಿಸಿಕೊಂಡು ಸಂಭ್ರಮಿಸಿಲ್ಲ, ಬದಲಾಗಿ ಅದನ್ನು ಇಡೀ ಸಮಾಜದ ಜವಾಬ್ದಾರಿಯಾಗಿ ವಿಶಾಲ ನೋಟ ಬೀರಿದ್ದಾರೆ. ಆಗ ಅವರಿಗೆ ತಮ್ಮ ಮಗುವಿನ ಹೊಸ ಪೀಳಿಗೆಯ ಸವಾಲುಗಳ ಆತಂಕ ಅರ್ಥವಾಗಿದೆ. ಆರೋಗ್ಯವಂತ ಪೀಳಿಗೆಗೆ ನೆರವಾಗಬಲ್ಲ ಸಮಾನತೆ ಮತ್ತು ಸುಸ್ಥಿರತೆಯ ಭೀತಿ ಬಾಧಿಸಿದೆ. ಫಲವಾಗಿ ಅವರಿಬ್ಬರೂ ಒಂದು ದೃಢ ಮತ್ತು ಸಮಾಜಮುಖಿ ನಿರ್ಧಾರಕ್ಕೆ ಬಂದು ನಿಂತಿದ್ದಾರೆ. ಮುಂಬರುವ ಪೀಳಿಗೆಯಲ್ಲಿ ಆರೋಗ್ಯ, ಶಿಕ್ಷಣ, ಅವಕಾಶ, ಸಮಾನತೆ, ಶಾಂತಿಯನ್ನು ಸ್ಥಾಪಿಸುವ ನಿಟ್ಟಿನಲ್ಲಿ 'ಚಾನ್-ಝುಕರ್‌ಬರ್ಗ್ ಇನಿಶಿಯೇಟಿವ್' ಎಂಬ ಟ್ರಸ್ಟ್ ಹುಟ್ಟುಹಾಕಿ, ಫೇಸ್‌ಬುಕ್ ವ್ಯವಹಾರದ ಶೇ.99ರಷ್ಟು ಶೇರನ್ನು (ಈಗಿನ ಅಂದಾಜಿನ ಪ್ರಕಾರ 3 ಲಕ್ಷ ಕೋಟಿ ರೂಪಾಯಿ) ಅದಕ್ಕೆ ಧಾರೆ ಎರೆದಿದ್ದಾರೆ. ತಮ್ಮ ಈ ದೀರ್ಘಾವಧಿ ಅಭಿಯಾನದ ಉದ್ದೇಶವನ್ನು ಅರ್ಥ ಮಾಡಿಸುವ ನಿಟ್ಟಿನಲ್ಲಿ ಫೇಸ್‌ಬುಕ್ ಮೂಲಕ ತಮ್ಮ ಮಗಳು ಮ್ಯಾಕ್ಸ್‌ಗೆ ಒಂದು ಮನೋಜ್ಞ ಪತ್ರ ಬರೆದಿರುವ ಝುಕರ್‌ಬರ್ಗ್-ಚಾನ್ ದಂಪತಿ ಆ ಮೂಲಕ ಈ ಸಾಹಸಕ್ಕೆ ಸಮಸ್ತ ನಾಗರಿಕರ ಸಹಕಾರವನ್ನೂ ಕೇಳಿಕೊಂಡಿದ್ದಾರೆ. ಆ ಪತ್ರದ ಭಾಷಾಂತರ ಹೀಗಿದೆ...

ಪ್ರೀತಿಯ ಮ್ಯಾಕ್ಸ್,

ನೀನು ನಮ್ಮ ಬದುಕಿನೊಳಕ್ಕೆ ಹೊತ್ತು ತಂದಿರುವ ಭವಿಷ್ಯದ ಭರವಸೆಯನ್ನು ವರ್ಣಿಸಲು ನನಗೂ, ನಿನ್ನಮ್ಮನಿಗೂ ಪದಗಳೇ ಸಾಲದಾಗಿವೆ. ನಿನ್ನ ಮುಂದೆ ಭರವಸೆ ತುಂಬಿದ ಬದುಕು ಇದೆ, ಅದನ್ನು ಸಂಪೂರ್ಣವಾಗಿ ಅನುಭವಿಸಲು ನೆರವಾಗುವಂತೆ ನೀನು ಸುಖಿ ಮತ್ತು ಆರೋಗ್ಯಿಯಾಗಿ ಇರುತ್ತೀಯೆಂದು ನಾವು ನಂಬಿದ್ದೇವೆ.

ಎಲ್ಲಾ ತಂದೆತಾಯಿಗಳು ಹಂಬಲಿಸುವಂತೆ ನಾವು ಇವತ್ತು ಬದುಕುತ್ತಿರುವಂತಹದ್ದಕ್ಕಿಂತಲೂ ಉತ್ತಮವಾದ ಸಮಾಜದಲ್ಲಿ ನೀನು ಬದುಕಬೇಕೆಂಬುದು ನಮ್ಮ ಆಸೆ.



ಜಗತ್ತಿನ ಪ್ರಮುಖ ಆಗುಹೋಗುಗಳಲ್ಲಿ ಆಗೊಮ್ಮೆ-ಈಗೊಮ್ಮೆ ಆಘಾತಕರ ಸುದ್ದಿಗಳು ಕಾಣಿಸಿಕೊಂಡರೂ ಇವತ್ತು ಪ್ರಪಂಚ ಮೊದಲಿಗಿಂತ ಸುಧಾರಣೆಯ ಹಾದಿಯಲ್ಲಿದೆ. ಆರೋಗ್ಯದ ಮಟ್ಟ ಹೆಚ್ಚುತ್ತಿದೆ. ಬಡತನ ಕುಸಿಯುತ್ತಿದೆ. ಜ್ಞಾನ ಬೆಳೆಯುತ್ತಿದೆ. ಜನರು ಪರಸ್ಪರ ಬೆಸೆದುಕೊಳ್ಳುತ್ತಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ತಂತ್ರಜ್ಞಾನ ಉನ್ನತಿಗೊಳ್ಳುತ್ತಲೇ ಇದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ನಿನ್ನ ಜೀವನ ನಮ್ಮ ಇವತ್ತಿನದಕ್ಕಿಂತ ಬಹುಪಾಲು ಉತ್ತಮವಾಗಿರಲಿದೆ.

ಫೇಸ್‌ಬುಕ್ ದಂಪತಿಗಳ ಒಂದು ಪತ್ರ

ಇದನ್ನೆಲ್ಲಾ ಸಾಧ್ಯವಾಗಿಸುವುದಕ್ಕೆ ನಮ್ಮಿಂದ ಏನು ಪಾಲು ಸಲ್ಲಬೇಕು ಅದನ್ನು ನಾವೂ ಪ್ರಾಮಾಣಿಕವಾಗಿ ಸಲ್ಲಿಸುತ್ತಿದ್ದೇವೆ, ನಾವು ನಿನ್ನನ್ನು ಪ್ರೀತಿಸುವ ಕಾರಣಕ್ಕೆ ಮಾತ್ರ ಈ ಜವಾಬ್ದಾರಿ ನಿಭಾಯಿಸುತ್ತಿಲ್ಲ; ಬದಲಾಗಿ, ಮುಂದಿನ ಪೀಳಿಗೆಯ ಎಲ್ಲಾ ಮಕ್ಕಳ ಬೆಳವಣಿಗೆಯಲ್ಲಿ ನಮ್ಮ ನೈತಿಕ ಪಾಲುದಾರಿಕೆಯ ಅರಿವಾಗಿರುವುದರಿಂದ ನಾವಿದನ್ನು ಮಾಡಿಕೊಂಡು ಬರುತ್ತಿದ್ದೇವೆ.

ಪ್ರತಿ ಜೀವಕ್ಕೂ ಸಮಾನ ಬೆಲೆ ಇದೆ ಅಂತ ನಾವು ನಂಬಿದ್ದೇವೆ, ಇಲ್ಲಿ ಜೀವಗಳು ಎಂದರೆ ಕೇವಲ ಇವತ್ತು ಬದುಕುತ್ತಿರುವವರು ಮಾತ್ರವಲ್ಲ, ಮುಂದೆ ಬದುಕಲಿರುವ ಇವತ್ತಿಗಿಂತ ಹೆಚ್ಚಿನ ಸಂಖ್ಯೆಯ ಬದುಕುಗಳನ್ನೂ ನಾವು ಪರಿಗಣಿಸಿದ್ದೇವೆ. ಕೇವಲ ಈಗ ಜೀವಿಸುತ್ತಿರುವವರು ಮಾತ್ರವಲ್ಲದೇ ಮುಂದೆ ಇಲ್ಲಿ ಜನಿಸಲಿರುವ ಜೀವಗಳ ಬದುಕನ್ನು ಸುಧಾರಿಸುವ ಸಲುವಾಗಿ ಈಗ ಕಾರ್ಯೋನ್ಮುಖಗೊಳ್ಳುವ ಹೊಣೆಯೂ ನಮ್ಮ ಸಮಾಜದ ಮೇಲಿದೆ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ನಾವು, ನಿಮ್ಮ ಪೀಳಿಗೆಯು ತೆರೆದುಕೊಳ್ಳಲಿರುವ ಬೃಹತ್ ಅವಕಾಶಗಳು ಮತ್ತು ಸವಾಲುಗಳತ್ತ ನಮ್ಮ ಸಂಪನ್ಮೂಲಗಳನ್ನು ಸಂಗ್ರಹರೂಪದಲ್ಲಿ ಕೇಂದ್ರೀಕರಿಸಿಲ್ಲ.

ರೋಗಗಳ ವಿಚಾರವನ್ನೇ ತೆಗೆದುಕೊ. ಅನಾರೋಗ್ಯ ನಿನ್ನನ್ನು ಪ್ರಧಾನ ಸವಾಲಾಗಿ ಬಾಧಿಸದಂತೆ ನಾವಿಂದು ಸಂಶೋಧನೆಗಿಂತ 50 ಪಟ್ಟು ಹೆಚ್ಚನ್ನು ಸಮಾಜದ ಅನಾರೋಗ್ಯ ಪೀಡಿತರ ಚಿಕಿತ್ಸೆಗಾಗಿ ವ್ಯಯಿಸುತ್ತಿದ್ದೇವೆ.

100 ವರ್ಷಗಳಿಂದ ಈಚೆಗಷ್ಟೆ ಔಷಧೋಪಚಾರ ಒಂದು ನೈಜ ವಿಜ್ಞಾನವಾಗಿ ಪರಿಗಣಿಸಲ್ಪಟ್ಟಿದೆ. ಈ ಅವಧಿಯಲ್ಲಾಗಲೆ ನಾವು ಹಲವು ರೋಗಗಳನ್ನು ಸಂಪೂರ್ಣ ಗುಣಪಡಿಸುವ ಮತ್ತು ಉಳಿದ ಕೆಲವನ್ನು ಪರಿಣಾಮಕಾರಿಯಾಗಿ ಸುಧಾರಿಸುವಷ್ಟು ಪ್ರಗತಿ ಸಾಧಿಸಿದ್ದೇವೆ. ತಂತ್ರಜ್ಞಾನ ಮುಂದುವರೆದಂತೆ ಮುಂದಿನ 100 ವರ್ಷಗಳಲ್ಲಿ ಎಲ್ಲಾ ಅಥವಾ ಬಹುಪಾಲು ರೋಗಗಳನ್ನು ತಡೆಗಟ್ಟುವಲ್ಲಿ, ಗುಣಪಡಿಸುವಲ್ಲಿ ಮತ್ತು ನಿಭಾಯಿಸುವಲ್ಲಿ ನಾವು ಗುರಿ ತಲುಪಲಿದ್ದೇವೆ.

ಇವತ್ತು ಬಹಳಷ್ಟು ಸಾವುಗಳು ಐದು ಕಾರಣಗಳಿಂದ ಸಂಭವಿಸುತ್ತಿವೆ- ಹೃದ್ರೋಗಗಳು, ಕ್ಯಾನ್ಸರ್, ಪಾರ್ಶ್ವವಾಯು, ನರಅಂಗಾಂಶ ಅವನತಿ ಮತ್ತು ಸೋಂಕುಕಾರಕ ರೋಗಗಳು. ಇವು ಮತ್ತು ಇನ್ನುಳಿದ ಸಮಸ್ಯೆಗಳ ಕುರಿತಂತೆ ನಾವು ವೇಗವಾಗಿ ಪ್ರಗತಿಯನ್ನೂ ಕಾಣಲಿದ್ದೇವೆ.

ನಿನ್ನ ಮತ್ತು ನಿನ್ನ ಮಕ್ಕಳ ಪೀಳಿಗೆಗಳು ರೋಗಗಳಿಂದ ಬಾಧಿತರಾಗುವುದಿಲ್ಲ ಎಂಬುದು ನಮಗೆ ಖಾತ್ರಿಯಾಗುತ್ತಿದ್ದಂತೆಯೇ ನಮ್ಮ ಪ್ರಯತ್ನಗಳನ್ನು ಭವಿಷ್ಯದ ಮತ್ತೊಂದು ಆಯಾಮವನ್ನು ವಾಸ್ತವವಾಗಿಸುವತ್ತ ತಿರುಗಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಈ ಯತ್ನದಲ್ಲಿ ನಾನು ಮತ್ತು ನಿನ್ನಮ್ಮ ನಮ್ಮ ಹೊರೆಯನ್ನು ನಿಭಾಯಿಸುತ್ತಿದ್ದೇವೆ.

ರೋಗವನ್ನು ಗುಣಪಡಿಸಬೇಕೆಂದರೆ ಒಂದಷ್ಟು ಸಮಯಾವಕಾಶ ತಗುಲುತ್ತದೆ. ಐದು ಅಥವಾ ಹತ್ತು ವರ್ಷಗಳಂತಹ ಅಲ್ಪಾವಧಿಯಲ್ಲಿ ನಾವು ಭಾರೀ ಬದಲಾವಣೆಗಳನ್ನು ಸಾಧಿಸಿಬಿಡಲು ಸಾಧ್ಯವಿಲ್ಲ, ಆದರೆ ದೀರ್ಘಾವಧಿಯ ಅಂತರದಲ್ಲಿ, ಇವತ್ತು ಹುದುಗಿದ ಬೀಜ ಮತ್ತೆಂದೋ ಬೆಳೆದು ಮರವಾಗುವಂತೆ, ಒಂದಲ್ಲ ಒಂದು ದಿನ ನೀನು ಅಥವಾ ನಿನ್ನ ಮಕ್ಕಳು ನಾವಿಂದು ಕಾಣುತ್ತಿರುವ ಕಲ್ಪನೆಯನ್ನು ವಾಸ್ತವವನ್ನಾಗಿ ಅನುಭವಿಸಲಿದ್ದೀರಿ; ರೋಗಗಳಿಂದ ಮುಕ್ತವಾದ ಜಗತ್ತು!

ಇಂತಹ ಹಲವಾರು ಅವಕಾಶಗಳಿವೆ. ಒಂದೊಮ್ಮೆ ನಮ್ಮ ಸಮಾಜ ಇಂತಹ ಗಹನ ಸವಾಲುಗಳತ್ತ ತನ್ನ ಶಕ್ತಿಯನ್ನು ಕೇಂದ್ರೀಕರಿಸಿದ್ದೇ ಆದಲ್ಲಿ, ನಿಮ್ಮ ಪೀಳಿಗೆಗೆ ನಾವು ಇವತ್ತಿಗಿಂತ ಉತ್ತಮವಾದ ಜಗತ್ತನ್ನು ಬಿಟ್ಟುಹೋಗುವುದರಲ್ಲಿ ಸಂಶಯವೇ ಇಲ್ಲ.

* * * *

ನಿನ್ನ ಪೀಳಿಗೆಯ ಕುರಿತಂತೆ ನಮ್ಮ ಪ್ರಯತ್ನಗಳು ಎರಡು ಆಲೋಚನೆಗಳ ಸುತ್ತ ಕೇಂದ್ರೀಕೃತಗೊಂಡಿವೆ; ಮಾನವ ಸಾಮರ್ಥ್ಯವನ್ನು ಸುಧಾರಿಸುವುದು ಮತ್ತು ಸಮಾನತೆಯನ್ನು ಪ್ರಚುರಪಡಿಸುವುದು.

ಮನುಷ್ಯ ಜೀವನವನ್ನು ಎಷ್ಟು ಉತ್ಕೃಷ್ಟವಾಗಿ ಜೀವಿಸಲು ಸಾಧ್ಯವೊ ಆ ಗರಿಷ್ಠ ಮಿತಿಗೆ ಪರಿಧಿಗಳನ್ನು ವಿಸ್ತರಿಸುವುದೇ ಮಾನವ ಸಾಮರ್ಥ್ಯವನ್ನು ಸುಧಾರಿಸುವ ನಮ್ಮ ಪ್ರಯತ್ನವಾಗಿರುತ್ತದೆ.

ನಮಗಿಂತಲೂ 100 ಪಟ್ಟು ಹೆಚ್ಚು ನೀನು ಕಲಿಯಬಲ್ಲೆಯಾ ಮತ್ತು ಅನುಭವಿಸಬಲ್ಲೆಯಾ?

ನೀನು ದೀರ್ಘಾಯುಷ್ಯ ಮತ್ತು ಆರೋಗ್ಯಕರ ಬದುಕನ್ನು ಸಾಗಿಸುವಂತೆ ನಮ್ಮ ಪೀಳಿಗೆ ರೋಗಗಳನ್ನು ಗುಣಪಡಿಸಬಲ್ಲುದೇ?

ಪ್ರಪಂಚದ ಪ್ರತಿ ವ್ಯಕ್ತಿ ಆಲೋಚನೆ ಮತ್ತು ಅವಕಾಶದೊಂದಿಗೆ ನೀನು ಬೆಸೆದುಕೊಳ್ಳಲು ಸಾಧ್ಯವಾಗುವಂತೆ ನಾವು ಪ್ರಪಂಚವನ್ನು ಸಂಪರ್ಕಗೊಳಿಸಬಲ್ಲೆವೇ?

ಪರಿಸರ ಸಂರಕ್ಷಣೆ ಕಾಳಜಿಯ ಕಾರಣಕ್ಕೆ ನಾವು ಇಂದು ಮಾಡಲಾಗದ ಆವಿಷ್ಕಾರಗಳನ್ನು ನೀನು ಮಾಡಲು ಶಕ್ತನಾಗುವಂತೆ ಶುದ್ಧ ಇಂಧನ/ಶಕ್ತಿಯ ಸಂಪ... ನಾವು ಸರಂಜಾಮುಗೊಳಿಸಬಲ್ಲೆವೇ?

ಶಾಂತಿ ಮತ್ತು ಸಮೃದ್ಧತೆಯನ್ನು ಹೆಚ್ಚಿಸು... ಯಾವುದೇ ಉದ್ಯಮವನ್ನು ಕಟ್ಟುವ ಮತ್ತು ... ಸವಾಲುಗಳನ್ನು ಬಗೆಹರಿಸುವಂತಹ ವಾಣಿಜ್ಯೋ... ನಾವು ಹುಟ್ಟುಹಾಕಬಲ್ಲೆವೆ?

ವ್ಯಕ್ತಿ ಯಾವುದೇ ದೇಶದವನಾಗಿರಲಿ, ... ಕುಟುಂಬಕ್ಕೆ ಸೇರಿದವನಾಗಿರಲಿ ಅಥವಾ ... ಸಂದರ್ಭದಲ್ಲಿ ಜನಿಸಿರಲಿ; ಅವುಗಳನ್ನು ... ಪ್ರತಿಯೊಬ್ಬರಿಗೂ ಮೇಲೆ ತಿಳಿಸಿದ ಅ... ಲಭಿಸುವಂತೆ ಮಾಡುವುದೇ ಸಮಾ... ಪ್ರಚುರಪಡಿಸುವಿಕೆ ಆಲೋಚನೆ ಹಿಂದಿರುವ ...

ಇದೆಲ್ಲವನ್ನೂ ನಮ್ಮ ಸಮಾಜ ನ್ಯಾಯ... ಅನುಕಂಪೆಯ ಕಾರಣಕ್ಕೆ ಮಾತ್ರ ಮಾಡಬೇಕಿಲ್ಲ... ಮಾನವ ಪ್ರಗತಿಯ ಉದ್ಧಾರಕ್ಕಾಗಿ ಈ ಜವಾ... ನಿಭಾಯಿಸಬೇಕಿದೆ.

ಇವತ್ತು ಹಲವರಿಗೆ ಸಲ್ಲಬೇಕಾದ ಅ... ನಾವು ಲೂಟಿ ಮಾಡುತ್ತಿದ್ದೇವೆ. ನಮ್ಮ ... ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಬೇಕೆಂದರೆ ... ಒಂದೇ ಮಾರ್ಗ; ಪ್ರಪಂಚದ ಪ್ರತಿಯೊ... ಪ್ರತಿಭೆಗಳು, ಆಲೋಚನೆಗಳು ಮತ್ತು ಕೊ... ಮಾರ್ಗ ಹಾಗೂ ಗತಿ ದೊರಕಿಸಿಕೊಡಬೇಕು...

ನಮ್ಮ ಪೀಳಿಗೆ ಹಸಿವು ಮತ್ತು ಬ... ನಿರ್ಮೂಲನೆ ಮಾಡಬಲ್ಲುದೆ?

ನಾವು ಪ್ರತಿಯೊಬ್ಬರಿಗೂ ಮ... ಆರೋಗ್ಯೋಪಚಾರಗಳನ್ನು ಒದಗಿಸಿಕೊಡಬ...

ಅಂತರ್ಗತ ಮತ್ತು ಸ್ನೇಹಮಯ ಸಮುದ... ನಾವು ಕಟ್ಟಬಲ್ಲೆವೇ?

ಎಲ್ಲಾ ದೇಶದ ಜನರ ನಡುವೆ ಶಾಂತಿಯ... ಪರಸ್ಪರ ಅರ್ಥಗ್ರಾಹಿ ಸಂಬಂಧಗಳನ್ನು... ಪೋಷಿಸಬಲ್ಲೆವೆ?

ಮಕ್ಕಳು, ಮಹಿಳೆಯರು, ಪ್ರಾತಿನಿ... ಅಲ್ಪಸಂಖ್ಯಾತರು, ವಲಸಿಗರು ಮತ್ತು ನಾಗರಿಕ... ಸಂಪರ್ಕವೇ ಇಲ್ಲದೇ ಬದುಕುತ್ತಿರುವ ಅ... ಹೀಗೆ ಪ್ರತಿಯೊಬ್ಬರನ್ನೂ ನಾವು ನಿಜಕ್ಕೂ ಸಶಕ್ತ...

ಈ ನಮ್ಮ ಪೀಳಿಗೆ ತನ್ನನ್ನು ಸರಿಯಾದ ... ತೊಡಗಿಸಿಕೊಂಡಿದ್ದೇ ಆದಲ್ಲಿ, ಮೇಲ್ಕಂಡ ಎಲ್ಲಾ ... 'ಹೌದು' ಎಂಬ ಉತ್ತರವೇ ಸಿಗುತ್ತದೆ; ಅ... ಜೀವಿತಾವಧಿಯಲ್ಲೇ ನಾವು ಆ ಉತ್ತರವನ್ನು ಕಾ...

* * * *

ಈ ನಮ್ಮ ಅಭಿಯಾನವು, (ಮಾನವ ... ಸುಧಾರಿಸುವುದು ಮತ್ತು ಸಮಾನ... ಪ್ರಚುರಪಡಿಸುವುದು) ಈಗಾಗಲೇ ಈ ... ಕಾರ್ಯೋನ್ಮುಖವಾಗಿರುವವರೆಲ್ಲರಿಗೂ ಒಂ... ಮಾರ್ಗವನ್ನು ಅಪೇಕ್ಷಿಸುತ್ತದೆ.

25, 50 ಅಥವಾ 100 ವರ್ಷ... ದೀರ್ಘಾವಧಿಯ ಮೇಲೆ ನಮ್ಮ ಪ್ರಯತ್ನಗಳನ್ನು... ಮಾಡಬೇಕಿದೆ. ಬೃಹದಾಕಾರದ ಸವಾಲುಗಳು ... ದೀರ್ಘಾವಧಿಯ ಸೆಣಸಾಟವನ್ನು ಬಯಸುತ್ತ... ಅವುಗಳನ್ನು ಅಲ್ಪಾವಧಿ ಆಲೋಚ... ಗೆಲ್ಲಲಾಗುವುದಿಲ್ಲ.

ನಾವು ಯಾರನ್ನು ಕೇಂದ್ರೀಕರಿಸಿ... ಕಾರ್ಯಶೀಲರಾಗಬೇಕಿದೆಯೋ ಅವರೊಂ... ಒಡನಾಟ ಬೆಳೆಸಿಕೊಳ್ಳಬೇಕಿದೆ. ಅವರ ಸಮು... ಅಗತ್ಯತೆಗಳು ಮತ್ತು ಅಪೇಕ್ಷೆಗಳನ್ನು ಅರ್ಥಮಾ... ಹೋದರೆ ನಾವು ಅವರನ್ನು ಸಬಲೀಕರಣಗೊ...

ಈ ಬದಲಾವಣೆಯನ್ನು ಸಾಧ್ಯವಾಗಿಸುವುದ... ತಂತ್ರಜ್ಞಾನವನ್ನು ದುಡಿಸಿಕೊಳ್ಳಬೇಕಿದೆ. ಈಗಾಗ... ಸಂಘಸಂಸ್ಥೆಗಳು ಈ ಸವಾಲುಗಳತ್ತ ತಮ್ಮ ... ತೊಡಗಿಸಿವೆ, ಆದರೆ ಸೃಜನಶೀಲತೆಯಿಂದ ... ಉತ್ಪಾದಕತೆಯ ಮೂಲಕ ಮಾತ್ರ ಬಹುಪಾಲು ... ಕಾಣಲು ಸಾಧ್ಯ.

ಸಂವಾದಗಳಿಗೆ ರೂಪ ನೀಡುವಂತಹ ... ಚರ್ಚೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕ... ಬಹಳಷ್ಟು ಸಂಸ್ಥೆಗಳು ಇದನ್ನು ಮಾಡಲು ಸಿದ್ಧ... ನಾವು ಪಡೆಯುವ ಪ್ರಗತಿ ಯಾವಾಗಲ... ಹೋರಾಟಗಳ ಭದ್ರ ನೆಲೆಯನ್ನು ಹೊಂದಿರ... ಮಾತ್ರ ಅಂತಹ ಪ್ರಗತಿಗಳು ದೀರ್ಘಕಾಲೀನ ... ಬೀರುತ್ತವೆ. ಪ್ರಯತ್ನಕ್ಕೆ ಪೂರಕ ಸಂವಾದಗಳ...

ಷ್ನ ಒದಗಿಸಿಕೊಡಬಲ್ಲವು.

ಕ್ಷೇತ್ರದಲ್ಲೂ ನಮಗೆ ಸಮರ್ಥ ಹಾಗೂ ಸ್ವತಂತ್ರ ಯಗಳ ಬೆಂಬಲವಿರಬೇಕು. ಈ ಅಭಿಯಾನಕ್ಕೆ ಪ್ರಯತ್ನಗಳಿಗೆ ನಾವೇ ಮುಂಚೂಣಿ ಲಾಗುವುದಕ್ಕಿಂತ ಸಮರ್ಥರ ಜೊತೆಗೂಡಿ ಗಳಾಗಿ ತೊಡಗಿಸಿಕೊಳ್ಳುವ ಜರೂರಿದೆ.

ಯು ಪಾಠಗಳನ್ನು ಕಲಿಯಬೇಕೆಂದರೆ ನಾವು ಇವತ್ತೇ ಹಸಗಳಿಗೆ ಕೈಹಾಕಬೇಕಿದೆ. ನಾವು ಕಲಿಕೆಯ ಘಟ್ಟದಲ್ಲಿದ್ದೇವೆ, ನಮ್ಮ ಹಲವಾರು ಪ್ರಯತ್ನಗಳು ಡದೇ ಹೋಗಬಹುದು, ಆದರೆ ನಾವು ಳುತ್ತೇವೆ, ಕಲಿಯುತ್ತೇವೆ ಮತ್ತು ಮುಂದಕ್ಕೆ ನ್ನಿರಿಸುತ್ತಲೇ ಸಾಗುತ್ತೇವೆ.

* * * *

ಗತ ಕಲಿಕೆ, ಅಂತರ್ಜಾಲ ಲಭ್ಯತೆ ಮತ್ತು ಯ ಶಿಕ್ಷಣ ಹಾಗೂ ಆರೋಗ್ಯಗಳ ಕುರಿತ ನಮ್ಮ ತೆ ಅನುಭವಗಳೇ ನಮ್ಮ ಹೊಸ ಸಿದ್ಧಾಂತದ ಗಳಾಗಿವೆ.

ಆಸಕ್ತಿಗಳು ಅಥವಾ ಅಗತ್ಯಗಳನ್ನು ಲೆಕ್ಕಕ್ಕೆ ಳ್ಳದೆ ಒಂದು ಕೊಠಡಿಯಲ್ಲಿ ಒಂದೇ ವಿಷಯವನ್ನು ಮ್ಮ ಒಂದೇ ಗತಿಯಲ್ಲಿ ಕಲಿತು ಬೆಳೆದಂತಹ ನಮ್ಮದು.

ಪೀಳಿಗೆ, ನಿಮಗೆ ಏನು ಆಗಬೇಕೆನಿಸುತ್ತದೋ ಗುರಿಯಾಗಿಸಿಕೊಳ್ಳಲಿದೆ- ಇಂಜಿನಿಯರ್, ಆರೋಗ್ಯ ರ್ತ, ಬರಹಗಾರ ಅಥವಾ ಸಮುದಾಯ ನಾಯಕ. ಎಲ್ಲಿ ಚೆನ್ನಾಗಿ ಕಲಿಯಬಲ್ಲೆ ಮತ್ತು ನೀನು ದರತ್ತ ಗಮನ ಕೇಂದ್ರೀಕರಿಸಬೇಕು ಎಂಬುದನ್ನು ಮಾಡಿಕೊಳ್ಳುವಂತಹ ತಂತ್ರಜ್ಞಾನವನ್ನು ನೀವು ಲಿದ್ದೀರಿ. ನಿಮಗೆ ಹೆಚ್ಚು ಆಸಕ್ತಿಯಿರುವ ಗಳಲ್ಲಿ ನೀವು ತ್ವರಿತವಾಗಿ ಪ್ರಗತಿ ಸಾಧಿಸಲಿದ್ದೀರಿ ನಿಮಗೆ ಹೆಚ್ಚು ಸವಾಲೆನಿಸುವ ಕ್ಷೇತ್ರಗಳಲ್ಲಿ ನಿನಗೆ ರುವ ಹೆಚ್ಚೆಚ್ಚು ನೆರವನ್ನೂ ನೀವು ಪಡೆಯಲಿದ್ದೀರಿ. ಶಾಲೆಯಲ್ಲಿ ಬೋಧಿಸದ ವಿಷಯಗಳಲ್ಲೂ ನೀವು ಆವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳಲಿದ್ದೀರಿ. ನಿಮ್ಮ ನ್ನು ತಲುಪಲು ಅನುವಾಗುವಂತೆ ನಿಮ್ಮ ಶಿಕ್ಷಕರೂ ದಕ್ಕಿಂತ ಉತ್ತಮ ಸಲಕರಣೆಗಳನ್ನು ಹಾಗೂ ಗಳನ್ನು ಹೊಂದಲಿದ್ದಾರೆ.

ಲ್ಲಕ್ಕಿಂತಲೂ ಮುಖ್ಯವಾಗಿ, ಪ್ರಪಂಚದಾದ್ಯಂತದ ಮಕ್ಕಳು ತಾವು ಉತ್ತಮ ಶಾಲೆಗಳಿಂದ ದಿದ್ದರೂ ಇಂಟರ್ನೆಟ್ ನೆರವಿನಿಂದ ವ್ಯಕ್ತಿಗತ ಲಕರಣೆಗಳನ್ನು ಬಳಸಬಲ್ಲಿರಿ. ಖಂಡಿತವಾಗಿಯೂ, ಸೊಗಸಾದ ಜೀವನ ಆರಂಭಗೊಳ್ಳಬೇಕೆಂದರೆ ನ ಮಾತ್ರವೇ ಸಾಲದು, ಆದರೆ ಎಲ್ಲಾ ಮಕ್ಕಳು ಶಿಕ್ಷಣ ಹಾಗೂ ಹೆಚ್ಚು ಸಮಾನ ಅವಕಾಶಗಳನ್ನು ಯು ವ್ಯಕ್ತಿಗತ ಕಲಿಕೆಯು ಒಂದು ಮಾನಕ ವಾಗಿರುತ್ತದೆ.

ತಂತ್ರಜ್ಞಾನವನ್ನು ಹುಟ್ಟುಹಾಕಲು ನಾವು ಈಗಷ್ಟೇ ನ್ನು ಬರಾಗುತ್ತಿದ್ದೇವೆ, ಆದಾಗಲೇ ನಮ್ಮ ಪ್ರಯತ್ನಕ್ಕೆ ದಾಯಕ ಫಲಿತಾಂಶಗಳೂ ಲಭಿಸುತ್ತಿವೆ. ಗಳು ತಮ್ಮ ಪರೀಕ್ಷೆಗಳಲ್ಲಿ ಉತ್ತಮ ಅಂಕ ದು ಮಾತ್ರವಲ್ಲ, ಅವರು ಇಚ್ಛಿಸುವ ಯಾವುದೇ ನ್ನು ಕಲಿಯಲು ಅವರಿಗೆ ಕೌಶಲ್ಯಗಳು ಮತ್ತು ದಕ್ಕಲಿದೆ. ಈ ಯಾನವನ್ನು ನಾವು ಈಗಷ್ಟೆ ಸುತ್ತಿದ್ದೇವೆ. ನೀನು ಶಾಲೆಯಲ್ಲಿರುವಂತೆಯೇ ನ ಮತ್ತು ಕಲಿಕೆಗಳು ಪ್ರತಿವರ್ಷ ವೇಗವಾಗಿ ಯುತ್ತಾ ಸಾಗಲಿವೆ.

ಮತ್ತು ನಿನ್ನಮ್ಮ ಇಬ್ಬರೂ ಕಲಿತು ಬಂದ ಗಳೇ, ಹಾಗಾಗಿ ಇದನ್ನು ಸಾಧ್ಯವಾಗಿಸಲು ನಾವು ಮಾಡಬೇಕೆಂಬುದು ನಮಗೆ ಅರ್ಥವಾಗಿದೆ. ಸ್ಕರ ನಾವು, ಪ್ರಪಂಚದಾದ್ಯಂತ ವ್ಯಕ್ತಿಗತ ಕಲಿಕೆಯನ್ನು ಸಿಕೊಂಡ ಶಿಕ್ಷಣ ಕ್ಷೇತ್ರದ ಸಮರ್ಥ ರೊಂದಿಗೆ ಹೆಜ್ಜೆ ಹಾಕಬೇಕಿದೆ. ಇದಕ್ಕೋಸ್ಕರ ಸಮುದಾಯಗಳೊಂದಿಗೆ ಬೆರೆಯಬೇಕಿದೆ, ಅ ಗೇ ಈ ಪ್ರಯತ್ನವನ್ನು ನಾವು ಸ್ಯಾನ್ ಫ್ರಾನ್ಸಿಸ್ಕೊ ಮುದಿಂದ ಆರಂಭಿಸುತ್ತಿದ್ದೇವೆ. ಇದಕ್ಕೋಸ್ಕರ ನಾವು ತಂತ್ರಜ್ಞಾನಗಳನ್ನು ಸೃಷ್ಟಿಸಬೇಕಿದೆ ಮತ್ತು ಹೊಸ ಗಳನ್ನು ಪ್ರಯತ್ನಿಸಿ ನೋಡಬೇಕಿದೆ. ಇದಕ್ಕೋಸ್ಕರ ತಿ ಮುಟ್ಟುವ ಮುನ್ನ ಸಾಕಷ್ಟು ತಪ್ಪುಗಳನ್ನು ಕಿದೆ ಹಾಗೂ ಅವುಗಳಿಂದ ಕಲಿಯುತ್ತಾ ದೆ.

ಕೆ, ನಿಮ್ಮ ಪೀಳಿಗೆಗಾಗಿ ಸೃಷ್ಟಿಸುತ್ತಿರುವ ನ್ನು, ಒಮ್ಮೆ ನಾವು ಅರ್ಥಮಾಡಿಕೊಂಡೆವೆಂದರೆ, ತ್ರಿ, ಕಲ್ಪನೆಗಳನ್ನು ವಾಸ್ತವವಾಗಿಸಲು ನಮ್ಮ ನ್ನು ಕೂಡಿಕೆ ಮಾಡುವ ಜವಾಬ್ದಾರಿ ಒಂದು ಸಮಾಜವಾಗಿ ನಮ್ಮ ಹೆಗಲ ಮೇಲಿರುತ್ತದೆ.

ನಾವಿದನ್ನು ಒಟ್ಟಾಗಿ ಮಾಡಲಿದ್ದೇವೆ. ನಾವಿದನ್ನು ಸಾಧಿಸಿದಾಗ, ವ್ಯಕ್ತಿಗತ ಕಲಿಕೆಯು ಕೇವಲ ಉತ್ತಮ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಇಂಟರ್ನೆಟ್ ಸೌಲಭ್ಯವಿರುವ ಯಾರಿಗೇ ಆಗಲಿ ಸಮಾನ ಅವಕಾಶವನ್ನು ಒದಗಿಸಿಕೊಡುವಷ್ಟು ಸಶಕ್ತವಾಗಲಿದೆ.

* * * *

ನಿಮ್ಮ ಪೀಳಿಗೆಯ ಬಹುಪಾಲು ಭಾರೀ ಅವಕಾಶಗಳು, ಪ್ರತಿಯೊಬ್ಬರಿಗೂ ಇಂಟರ್ನೆಟ್ ಸೌಲಭ್ಯವನ್ನು ಒದಗಿಸುವ ಮೂಲಕ ಲಭಿಸಲಿವೆ.

ಬಹಳಷ್ಟು ವೇಳೆ ಜನ ಇಂಟರ್ನೆಟ್ಟನ್ನು ಮನರಂಜನೆ ಅಥವಾ ಸಂವಹನ ಮಾಧ್ಯಮವಷ್ಟೇ ಎಂದು ತಿಳಿದುಕೊಂಡಿದ್ದಾರೆ. ಆದರೆ ಪ್ರಪಂಚದ ಬಹುಸಂಖ್ಯೆ ಜನರಿಗೆ ಇಂಟರ್ನೆಟ್ ಎಂಬುದು ಜೀವನಾಧಾರವಾಗಿದೆ.

ಉತ್ತಮ ಶಾಲೆಯಿಂದ ನೀನು ದೂರ ಇದ್ದರೂ ಇದು ನಿನಗೆ ಶಿಕ್ಷಣವನ್ನು ನೀಡಲಿದೆ. ನೀನು ವೈದ್ಯರಿಂದ ದೂರ ಇದ್ದರೂ ರೋಗಗಳನ್ನು ಹೇಗೆ ತಡೆಗಟ್ಟಿಕೊಳ್ಳಬೇಕು ಅಥವಾ ಮಕ್ಕಳನ್ನು ಆರೋಗ್ಯಕರ ರೀತಿಯಲ್ಲಿ ಹೇಗೆ ಪಾಲನೆ ಮಾಡಬೇಕು ಎಂಬ ಆರೋಗ್ಯ ಮಾಹಿತಿಗಳನ್ನು ಒದಗಿಸುತ್ತದೆ. ನೀನು ಬ್ಯಾಂಕ್‌ನಿಂದ ದೂರವಿದ್ದರೂ ಇದು ನಿನಗೆ ಆರ್ಥಿಕ ಸೇವೆಗಳನ್ನು ಲಭ್ಯಗೊಳಿಸುತ್ತದೆ. ಒಂದೊಮ್ಮೆ ನೀನು ಉತ್ತಮ ಆರ್ಥಿಕ ಸ್ಥಿತಿಯಲ್ಲಿ ಇಲ್ಲದಿದ್ದರೂ ಇದು ನಿನಗೆ ಉದ್ಯೋಗಗಳು ಮತ್ತು ಅವಕಾಶಗಳನ್ನು ಲಭಿಸಿಕೊಡುತ್ತದೆ.

ಇಂಟರ್ನೆಟ್ ಎಷ್ಟು ಮುಖ್ಯವೆಂದರೆ, ಇಂಟರ್ನೆಟ್ ಸಂಪರ್ಕಕ್ಕೆ ಬರುವ ಪ್ರತಿ ಹತ್ತು ಜನರಲ್ಲಿ ಒಬ್ಬ ವ್ಯಕ್ತಿ ಬಡತನದಿಂದ ಹೊರಗೆ ಎತ್ತಲ್ಪಡುತ್ತಾನೆ ಮತ್ತು ಒಂದು ಉದ್ಯೋಗ ಸೃಷ್ಟಿಯಾಗುತ್ತದೆ.



ಆದಾಗ್ಯೂ ಪ್ರಪಂಚದ ಅರ್ಧಕ್ಕಿಂತಲೂ ಹೆಚ್ಚಿನ ಜನಸಂಖ್ಯೆ (4 ಬಿಲಿಯನ್‌ಗಿಂತ ಹೆಚ್ಚು ಜನ) ಇಂಟರ್ನೆಟ್ ಸಂಪರ್ಕವೇ ಇಲ್ಲದೆ ಬದುಕುತ್ತಿದ್ದಾರೆ.

ನಮ್ಮ ಪೀಳಿಗೆ ಅವರಿಗೆಲ್ಲಾ ಸಂಪರ್ಕವನ್ನು ಒದಗಿಸುವಲ್ಲಿ ಯಶಸ್ವಿಯಾಗಿಬಿಟ್ಟರೆ ನೂರಾರು ಮಿಲಿಯನ್ ಜನರನ್ನು ಬಡತನದ ಬೇಗೆಯಿಂದ ಮುಕ್ತರಾಗಿಸಬಹುದು. ನೂರಾರು ಮಿಲಿಯನ್ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಬಹುದು ಮತ್ತು ರೋಗಗಳನ್ನು ತಡೆಗಟ್ಟುವ ಮೂಲಕ ಮಿಲಿಯನ್ನುಗಟ್ಟಲೇ ಜೀವಗಳನ್ನು ಬದುಕಿಸಬಹುದು.

ಇದು ಮತ್ತೊಂದು ದೀರ್ಘಾವಧಿ ಪ್ರಯತ್ನವಾಗಿದ್ದು ಇದಕ್ಕೆ ತಂತ್ರಜ್ಞಾನ ಮತ್ತು ಪಾಲುದಾರಿಕೆಯ ಅಗತ್ಯವಿದೆ. ಇದಕ್ಕೋಸ್ಕರ, ಹೊರೆಯಲ್ಲದ ರೀತಿಯಲ್ಲಿ ಇಂಟರ್ನೆಟ್ಟನ್ನು ದೊರಕಿಸಿಕೊಡುವಂತಹ ಮತ್ತು ಸಂಪರ್ಕಹೀನ ಪ್ರದೇಶಗಳಿಗೂ ಸುಲಭವಾಗಿ ತಲುಪುವಂತೆ ಮಾಡುವ ಹೊಸ ತಂತ್ರಜ್ಞಾನವನ್ನು ನಾವು ಆವಿಷ್ಕರಿಸಬೇಕಿದೆ. ಇದಕ್ಕೋಸ್ಕರ ನಾವು ಸರ್ಕಾರಗಳು, ಎನ್‌ಜಿಒ ಮತ್ತು ಕಂಪನಿಗಳ ಜೊತೆಗೂಡಿ ಹೆಜ್ಜೆಹಾಕಬೇಕಿದೆ. ಅವರಿಗೆ ಏನು ಅಗತ್ಯವಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಮುದಾಯಗಳೊಂದಿಗೆ ಬೆರೆಯುವ ಅಗತ್ಯವಿದೆ. ಮುಂದಕ್ಕೆ ಸಾಗಲು ವಿಭಿನ್ನ ವ್ಯಕ್ತಿಗಳು ವಿಭಿನ್ನ ದೃಷ್ಟಿಕೋನದ ಹಾದಿಗಳನ್ನು ದೃಷ್ಟಿಸಿರುತ್ತಾರೆ ಮತ್ತು ನಾವು ಯಶ ಗಳಿಸುವ ಮುನ್ನ ಹಲವು ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುತ್ತೇವೆ.

ಆದರೆ ನಾವೆಲ್ಲಾ ಒಟ್ಟಾಗಿ ಗುರಿ ಮುಟ್ಟಲಿದ್ದೇವೆ ಮತ್ತು ಹೆಚ್ಚು ಸಮಾನತೆಯ ಪ್ರಪಂಚವನ್ನು ನಿರ್ಮಿಸಲಿದ್ದೇವೆ.

* * * *

ಎದುರಾಗುವ ಸಮಸ್ಯೆಗಳನ್ನು ತಂತ್ರಜ್ಞಾನ ತನ್ನಷ್ಟಕ್ಕೆ ತಾನೇ ಬಗೆಹರಿಸಿಕೊಳ್ಳಲಾರದು. ಒಂದು ಉತ್ತಮ ಸಮಾಜವನ್ನು ಕಟ್ಟುವ ಕಾರ್ಯವು ಸದೃಢ ಹಾಗೂ ಆರೋಗ್ಯಕರ ಸಮುದಾಯವನ್ನು ಕಟ್ಟುವ ಮೂಲಕ ಶುರುವಾಗುತ್ತದೆ.

ಕಲಿತಾಗ ಮಾತ್ರ ಮಕ್ಕಳು ಅತ್ಯುತ್ತಮ ಅವಕಾಶಗಳನ್ನು ಪಡೆಯಬಲ್ಲರು. ಮತ್ತು ಮಕ್ಕಳು ಆರೋಗ್ಯವಾಗಿದ್ದಾಗ ಮಾತ್ರ ಅವರು ಕಲಿಯಬಲ್ಲರು.

ಪ್ರೀತಿ ತುಂಬಿದ ಕುಟುಂಬ, ಉತ್ತಮ ಪೋಷಕಾಂಶ ಮತ್ತು ಸುರಕ್ಷಿತ, ಸುಸ್ಥಿರ ಪರಿಸರಗಳ ಜೊತೆಗೆ ಆರೋಗ್ಯ ತಳಮಟ್ಟದಿಂದಲೇ ಶುರುವಾಗುತ್ತದೆ.

ಚಿಕ್ಕವಯಸ್ಸಿನಲ್ಲೇ ಆಘಾತಕಾರಿ ಅನುಭವಗಳನ್ನು ಎದುರಿಸಿದ ಮಕ್ಕಳು ಆರೋಗ್ಯಪೂರ್ಣ ಮನಸ್ಸು ಮತ್ತು ದೇಹವನ್ನು ಹೊಂದಲಾರರು. ಮಿದುಳಿನ ಬೆಳವಣಿಗೆಯಲ್ಲಾಗುವ ಭೌತಿಕ ಬದಲಾವಣೆಗಳು ಅರಿವಿನ ಸಾಮರ್ಥ್ಯವನ್ನು ಕುಗ್ಗಿಸುತ್ತವೆ ಎಂಬುದನ್ನು ಹಲವು ಅಧ್ಯಯನಗಳು ದೃಢಪಡಿಸಿವೆ.

ನಿನ್ನ ತಾಯಿ ಒಬ್ಬ ವೈದ್ಯೆ ಜೊತೆಗೆ ಶಿಕ್ಷಣ ಪ್ರಚಾರಕಿಯೂ ಹೌದು. ಈ ಸಮಸ್ಯೆಗಳನ್ನು ಆಕೆ ಚೆನ್ನಾಗಿ ಬಲ್ಲಳು.

ಆರೋಗ್ಯಕರವಲ್ಲದ ಬಾಲ್ಯದಿಂದ ನೀನು ತತ್ತರಿಸಿದರೆ, ನಿನ್ನ ಗರಿಷ್ಠ ಸಾಮರ್ಥ್ಯವನ್ನು ತಲುಪಲು ನಿನಗೆ ಕಷ್ಟವಾಗುತ್ತದೆ.

ನನಗೆ ಆಹಾರ ಲಭಿಸುತ್ತದೆಯೋ ಇಲ್ಲವೊ, ವಸತಿ ಸಿಗುತ್ತದೋ ಹೇಗೊ ಎಂಬ ಪ್ರಶ್ನೆಗಳಲ್ಲಿ ಕಳೆದುಹೋದರೆ ಅಥವಾ ಅಪರಾಧ ಇಲ್ಲವೇ ದುರಾಚಾರಗಳ ಚಿಂತೆಗೆ ಈಡಾದರೆ, ಆಗಲೂ ನಿನ್ನ ಗರಿಷ್ಠ ಸಾಮರ್ಥ್ಯವನ್ನು ತಲುಪಲು ನಿನಗೆ ಕಷ್ಟವಾಗುತ್ತದೆ.

ನಿನ್ನ ಚರ್ಮದ ಬಣ್ಣದ ಕಾರಣಕ್ಕಾಗಿ ಕಾಲೇಜಿಗೆ ಹೋಗುವುದರ ಬದಲು ಜೈಲಿಗೆ ಹೋಗುವಂತಾದರೇನು ಗತಿ ಎಂದು ನೀನು ಭೀತಿಗೊಂಡರೆ ಅಥವಾ ಕಾನೂನಾತ್ಮಕ ಕಾರಣಗಳಿಗಾಗಿ ನಿನ್ನ ಕುಟುಂಬ ಗಡಿಪಾರು ಮಾಡಲ್ಪಟ್ಟರೆ ಅಥವಾ ನಿನ್ನ ಧರ್ಮ, ಲಿಂಗ ಬೇಧತೆ ಮತ್ತು ಲೈಂಗಿಕ ಬಯಕೆಗಳ ಕಾರಣಕ್ಕೆ ಹಿಂಸೆಗೆ ಈಡಾದರೆ, ಆಗಲೂ ನಿನ್ನ ಗರಿಷ್ಠ ಸಾಮರ್ಥ್ಯವನ್ನು ತಲುಪಲು ನಿನಗೆ ಕಷ್ಟವಾಗುತ್ತದೆ.

ಈ ಎಲ್ಲಾ ಸಮಸ್ಯೆಗಳು ಒಂದಕ್ಕೊಂದು ಸಂಬಂಧ ಹೊಂದಿವೆ ಎಂಬುದನ್ನು ಅರ್ಥಮಾಡಿಕೊಂಡ ಒಂದು ಸಂಸ್ಥೆಯ ಅಗತ್ಯತೆ ನಮಗಿದೆ. ನಿನ್ನ ತಾಯಿ ಆರಂಭಿಸಲು ಉದ್ದೇಶಿಸುತ್ತಿರುವ ಹೊಸ ಮಾದರಿಯ ಶಾಲೆಯ ಹಿಂದಿರುವ ಆಲೋಚನೆಯೇ ಇದು.

ಶಾಲೆಗಳು, ಆರೋಗ್ಯ ಕೇಂದ್ರಗಳು, ಪೋಷಕ ಸಮೂಹಗಳು ಮತ್ತು ಸ್ಥಳೀಯ ಸರ್ಕಾರಗಳೊಂದಿಗೆ ಕಲೆತು, ಮಕ್ಕಳಿಗೆ ಸೂಕ್ತ ಪೋಷಣೆ ಹಾಗೂ ಆರೈಕೆ ಲಭಿಸಿರುವುದನ್ನು ಖಾತ್ರಿಪಡಿಸಿ, ನಾವು ಈ ಅಸಮತೆಗಳನ್ನು ಬೆಸೆಯುವ ಕಾಯಕ ಆರಂಭಿಸಲಿದ್ದೇವೆ. ಆಗ ಮಾತ್ರ ನಾವು ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳನ್ನು ಒದಗಿಸಿಕೊಡುವ ಕಾರ್ಯವನ್ನು ಸಮಗ್ರವಾಗಿ ಆರಂಭಿಸಬಹುದು.

ಈ ಮಾದರಿಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಹಲವು ವರ್ಷಗಳೇ ತಗುಲುತ್ತವೆ. ಆದರೆ ಇದು, ಮಾನವ ಸಾಮರ್ಥ್ಯ ಸುಧಾರಿಸುವಿಕೆ ಹಾಗೂ ಸಮಾನತೆಯ ಪ್ರಚುರಪಡಿಸುವಿಕೆಗಳು ಹೇಗೆ ಪರಸ್ಪರ ತೀಕ್ಷ್ಣವಾಗಿ ಬೆಸೆದುಕೊಂಡಿವೆ ಎಂಬುದನ್ನು ಸಾಬೀತುಪಡಿಸುವ ಮತ್ತೊಂದು ಉದಾಹರಣೆಯಾಗಿದೆ. ನಾವು ಇವೆರಡನ್ನೂ ಸಾಧಿಸಬಯಸಿದರೆ, ಮೊದಲು ಅಂತರ್ಗತ ಹಾಗೂ ಆರೋಗ್ಯಕರ ಸಮುದಾಯಗಳನ್ನು ಸೃಷ್ಟಿಸಬೇಕಿದೆ.

* * * *

ಒಂದು ಉತ್ತಮವಾದ ಸಮಾಜವನ್ನು ನಿಮ್ಮ ಪೀಳಿಗೆ ರೂಪಿಸಿಕೊಡಬೇಕೆಂದರೆ, ಇವತ್ತಿನ ನಮ್ಮ ಪೀಳಿಗೆ ಮಾಡಬೇಕಾದ ಇಂತಹ ಅದೆಷ್ಟೋ ಕಾರ್ಯಗಳಿವೆ.

ಈ ಸವಾಲುಗಳನ್ನು ನಿವಾರಿಸುವ ನಿಟ್ಟಿನಲ್ಲಿ ನಮ್ಮ ಜೀವನದ ಸ್ವಲ್ಪ ಭಾಗವನ್ನು ಇದಕ್ಕೆಂದು ಸಮರ್ಪಿಸಿಕೊಳ್ಳಲು ಇಂದು ನಾನು ಮತ್ತು ನಿನ್ನಮ್ಮ ನಿರ್ಧರಿಸುತ್ತಿದ್ದೇವೆ. ನಾನು ಫೇಸ್‌ಬುಕ್‌ನ ಸಿಇಒ ಆಗಿ ಬಹಳ ಬಹಳ ವರ್ಷ ಮುಂದುವರೆಯಬಹುದು; ಆದರೆ, ಈ ಕಾರ್ಯವನ್ನು ಆರಂಭಿಸಲು ನಾನು ಅಥವಾ ನೀನು ತುಂಬಾ ವಯಸ್ಸಾಗುವವರೆಗೆ ಕಾಯದಿರುವಷ್ಟು ಈ ಸಮಸ್ಯೆಗಳು ಪ್ರಮುಖವಾದವು. ಚಿಕ್ಕ ವಯಸ್ಸಿನಲ್ಲೇ ನಾವು ಈ ಸಾಹಸಗಳಿಗೆ ಕೈ ಹಾಕಿದರೆ, ನಮ್ಮ ಜೀವನದುದ್ದಕ್ಕೂ ಇದರ ಸಂಯುಕ್ತ ಫಲಗಳನ್ನು ನಾವು ಕಾಣಬಹುದು.

ಚಾನ್-ಝುಕರ್‌ಬರ್ಗ್ ಕುಟುಂಬದ ಮುಂದಿನ ಪೀಳಿಗೆಯಾಗಿ ನೀನು ಬದುಕು ಆರಂಭಿಸುತ್ತಿರುವ ಈ ಹೊತ್ತಿನಲ್ಲೇ ನಾವು ಮುಂದಿನ ಪೀಳಿಗೆಯ ಎಲ್ಲಾ ಮಕ್ಕಳಿಗೂ ಸುಧಾರಿತ ಮಾನವ ಸಾಮರ್ಥ್ಯ ಹಾಗೂ ಸಮಾನತೆಯು ಲಭಿಸುವಂತೆ ಮಾಡಲು ಪ್ರಪಂಚದಾದ್ಯಂತದ ಜನರನ್ನು ಪರಸ್ಪರ ಬೆಸೆಯುವ ಉದ್ದೇಶದಿಂದ ಚಾನ್-ಝುಕರ್‌ಬರ್ಗ್ ಇನಿಶಿಯೇಟಿವ್ ಟ್ರಸ್ಟ್ ಹುಟ್ಟುಹಾಕುತ್ತಿದ್ದೇವೆ. ವ್ಯಕ್ತಿಗತ ಕಲಿಕೆ, ರೋಗಗಳ ನಿವಾರಣೆ, ಜನರನ್ನು ಬೆಸೆಯುವುದು ಮತ್ತು ಸದೃಢ ಸಮುದಾಯಗಳ ನಿರ್ಮಾಣ ಇವೇ ನಮ್ಮ ಪ್ರಯತ್ನದ ಆರಂಭಿಕ ಕಾರ್ಯಕ್ಷೇತ್ರಗಳಾಗಿರುತ್ತವೆ.

ನಮ್ಮ ಜೀವಮಾನದಲ್ಲಿ ಈ ಅಭಿಯಾನವನ್ನು ಮುಂದಕ್ಕೆ ಕೊಂಡೊಯ್ಯಲು ನಮ್ಮ ಫೇಸ್‌ಬುಕ್‌ನ ಶೇ.99ರಷ್ಟು (ಸದ್ಯ 45 ಬಿಲಿಯನ್ ಡಾಲರ್) ಷೇರುಗಳನ್ನು ಇದಕ್ಕೆಂದೇ ಮೀಸಲಿಡುತ್ತಿದ್ದೇವೆ. ಈ ಸವಾಲುಗಳ ಕುರಿತು ಈಗಾಗಲೇ ಕಾರ್ಯಶೀಲರಾಗಿರುವ ವ್ಯಕ್ತಿಗಳ ಸಂಪನ್ಮೂಲಗಳು ಮತ್ತು ಶ್ರಮಗಳಿಗೆ ಹೋಲಿಸಿದರೆ ನಮ್ಮ ಈ ಕೊಡುಗೆ ತೀರಾ ಸಣ್ಣದು ಎಂಬುದು ನಮಗೆ ಗೊತ್ತಿದೆ. ಆದರೆ ನಾವು ಮಾಡಬಹುದಾದದ್ದನ್ನು ಮಾಡಲು ನಾವು ಮುಂದಡಿ ಇಡುತ್ತಿದ್ದೇವೆ, ಇತರರ ಜೊತೆಗೂಡಿ!

ನಮ್ಮ ಹೊಸ ಕುಟುಂಬದ ಏರಿಳಿತಕ್ಕೆ ನಾವು ಹೊಂದಿಕೊಂಡು, ನಮ್ಮ ಪೋಷಕ ಬಿಡುವಿನಿಂದ ವಾಪಾಸಾದ ನಂತರ ಮುಂದಿನ ದಿನಗಳಲ್ಲಿ ಈ ಕುರಿತು ಮತ್ತಷ್ಟು ಮಾಹಿತಿಗಳನ್ನು ಹಂಚಿಕೊಳ್ಳಲಿದ್ದೇವೆ. ನಾವಿದನ್ನು ಏಕೆ ಮತ್ತು ಹೇಗೆ ಮಾಡುತ್ತೇವೆ ಎಂಬ ಬಗ್ಗೆ ನಿನ್ನಲ್ಲಿ ಹಲವು ಪ್ರಶ್ನೆಗಳಿವೆಯೆಂದು ನಮಗೆ ಮನದಟ್ಟಾಗಿದೆ.

ಪೋಷಕರಾಗುವ ಮೂಲಕ ನಮ್ಮ ಬದುಕಿನ ಮತ್ತೊಂದು ಅಧ್ಯಾಯಕ್ಕೆ ಕಾಲಿಡುತ್ತಿರುವ ಈ ಹೊತ್ತಿನಲ್ಲಿ, ಇದನ್ನು ಸಾಧ್ಯವಾಗಿಸಿದ ಪ್ರತಿಯೊಬ್ಬರಿಗೂ ನಮ್ಮ ಅಂತರಾಳದ ಕೃತಜ್ಞತೆಗಳನ್ನು ತಿಳಿಸಲು ಹಂಬಲಿಸುತ್ತೇವೆ.

ನಾವು ಈ ಸಾಹಸಕ್ಕೆ ಕೈಹಾಕುತ್ತಿರುವುದಕ್ಕೆ ಇರುವ ಏಕಮಾತ್ರ ಭರವಸೆ ನಮ್ಮ ಹಿಂದೆ ಸದೃಢ ಜಾಗತಿಕ ಸಮುದಾಯವಿದೆ ಎಂಬ ಆಶಯ. ಮುಂದಿನ ಪೀಳಿಗೆಯ ಬದುಕಿನ ಪ್ರಪಂಚವನ್ನು ಸುಧಾರಿಸಲು ಫೇಸ್‌ಬುಕ್ ಸಂಪನ್ಮೂಲವಾಗಲಿದೆ. ಫೇಸ್‌ಬುಕ್ ಸಮುದಾಯದ ಪ್ರತಿ ಸದಸ್ಯನೂ ಇದರಲ್ಲಿ ತನ್ನ ಪಾತ್ರ ನಿಭಾಯಿಸಲಿದ್ದಾನೆ.

ನಮ್ಮ ಮಾರ್ಗದರ್ಶಕರು, ಸಹವರ್ತಿಗಳು, ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಮಹತ್ತರ ಕಾಣ್ಕೆ ನೀಡಿದ ವಿಸ್ಮಯಕಾರಿ ಜನಗಳೆಲ್ಲರ ಭುಜದ ಮೇಲೆ ತೋಳಿರಿಸಿ ಜೊತೆಜೊತೆಯಾಗಿ ಪ್ರಗತಿಯತ್ತ ನಾವು ಮುನ್ನಡೆಯಲಿದ್ದೇವೆ.

ಸಮುದಾಯಕ್ಕೆ ಸೇವೆ ಸಲ್ಲಿಸುವುದರತ್ತ ನಮ್ಮ ಗಮನ ಕೇಂದ್ರೀಕರಿಸಿದ್ದು ಮತ್ತು ಈ ಅಭಿಯಾನವನ್ನು ಆರಂಭಿಸುತ್ತಿರುವುದು, ನಮ್ಮ ಸುತ್ತಲೂ ಪ್ರೀತಿಸುವ ಕುಟುಂಬಗಳು, ಬೆನ್ನುತಟ್ಟುವ ಸ್ನೇಹಿತರು ಮತ್ತು ಅಚ್ಚರಿಯ ಸಹೋದ್ಯೋಗಿಗಳಿರುವುದರಿಂದ. ನೀವು ಸಹಾ ನಿಮ್ಮ ಜೀವನದಲ್ಲೂ ಇಂತಹುದೇ ಆಳ ಮತ್ತು ಸ್ಫೂರ್ತಿದಾಯಕ ಬಾಂಧವ್ಯಗಳನ್ನು ಹೊಂದಿರಲಿದ್ದೀರಿ ಎಂದು ನಾವು ನಂಬುತ್ತೇವೆ.

ಮ್ಯಾಕ್ಸ್, ನಾವು ನಿನ್ನನ್ನು ತುಂಬಾ ಪ್ರೀತಿಸುತ್ತೇವೆ ಮತ್ತು ನೀನು ಹಾಗೂ ಎಲ್ಲಾ ಮಕ್ಕಳಿಗೆ ಉತ್ತಮ ಬದುಕಿನ ಪ್ರಪಂಚವನ್ನು ರೂಪಿಸುವ ಹೊಣೆಯನ್ನು ಜವಾಬ್ದಾರಿಯುತವಾದದ್ದು ಎಂದು ಪರಿಗಣಿಸುತ್ತೇವೆ. ನೀನು ನಮಗೋಸ್ಕರ ತಂದಿತ್ತ ಪ್ರೀತಿ, ಭರವಸೆ ಮತ್ತು ಖುಷಿಗಳು ನಿನ್ನ ಜೀವನದಲ್ಲೂ ತುಂಬಿಕೊಂಡಿರಲಿ ಎಂದು ನಾವು ಆಶಿಸುತ್ತೇವೆ. ನೀನು ಈ ಪ್ರಪಂಚಕ್ಕೆ ಹೊತ್ತು ತಂದಿರುವುದನ್ನು ಕಾಣುವುದಕ್ಕೆ ಕಾಯಲು ಸುಮ್ಮನಾಗುತ್ತಿಲ್ಲ.

ಪ್ರೀತಿಯಿಂದ,

ಅಮ್ಮ ಮತ್ತು ಅಪ್ಪ

ಕನ್ನಡಕ್ಕೆ: ಗಿರೀಶ್ ತಾಳಿಕಟ್ಟೆ

ಸೂತಕವೋ/ಮದುವೆಯೋ

"ಇವತ್ ಹೆಬ್ಬಾರ್ ಮನೆ ಚಂಡಿಕಾ ಶಾಂತಿ ಊಟಕ್ಕೆ ರಾಮಪ್ರಸಾದ ಬಂದಿದ್ದ. ಪಾಪ ಈ ಜನ್ಮದಂಗೆ ನಂಗೆ ಮದುವೆ ಯೋಗವೇ ಇಲ್ಲದೇನೋ ಅಂಥ ಬೇಜಾರ್ ಮಾಡ್ತಿದ್ದ. ಹಾಂಗೇನೂ ಆತಿಲ್ಲೆ, ಬೇಜಾರ್ ಮಾಡ್ಬೇಡ. ಬೇಕಾರೆ ಕುಂದಾಪುರದ್ ಹತ್ರ ಒಳ್ಳೆ ಜೋತಿಷ್ಯರು ಇದ್ರು. ಅವರು ಹೇಳಿದ ಹಾಂಗೆ ಅತ್ತ. ಅವ್ರ ಹತ್ರ ಕೇಳ್. ನಾವ್ ನಮ್ ಮಗನಿಗೆ ಅವ್ರ ಹತ್ರ ಕೇಂಡಿತ್, ಎಲ್ಲಾ ಅವ್ರ ಹೇಳಿದ್ಹಾಂಗೆ ಆಯಿತ್ತ್ಅಂಥ ಸಮಾಧಾನ ಮಾಡಿದೆ" ಅಂಥ ನೆರೆಮನೆ ಶಾಂತಕ್ಕ ಸೋಮವಾರ ದೇವಸ್ಥಾನಕ್ಕೆ ಕಾಯಿ ಒಡಿಸಲಿಕ್ಕೆ ಬಂದವರು ಪೂಜೆಯ ಸೀತಾರಾಮ ಭಟ್ಟರಲ್ಲಿ ಹೇಳುತ್ತಿದ್ದು ಕೇಳುತ್ತಿತ್ತು. ತೋಟದಲ್ಲಿ ಕಾಯಿ ಹೆಕ್ಕಲು ಹೋಗುತ್ತಿದ್ದವಳಿಗೆ ಅಪ್ರಯತ್ನಪೂರ್ವಕವಾಗಿ ಅವರಿಬ್ಬರ ಸಂಭಾಷಣೆ ಕಿವಿಗೆ ಬೀಳುತ್ತಿತ್ತು.

ಪಾಪ ಕಳೆದೆರಡು ದಿನದಿಂದ ಊರಲ್ಲಿ ರಾಮಪ್ರಸಾದನ ಮದುವೆಯ ವಿಷಯ 'ಟಾಕ್ ಆಫ್ ದಿ ಟೌನ್' ಆಗಿಬಿಟ್ಟಿತ್ತು. ಚಿಕ್ಕ ಪ್ರಾಯದಲ್ಲೇ ತಂದೆಯನ್ನು ಕಳೆದುಕೊಂಡ ರಾಮಪ್ರಸಾದ ಅಮ್ಮನ ಬಿಗಿ ಬಂದೋಬಸ್ತ್‌ನಲ್ಲೇ ಬೆಳೆದವನು. ಮೊದಲು ಚುರುಕಾಗಿದ್ದ ರಾಮಪ್ರಸಾದ ತಂದೆ ತೀರಿದ ಮೇಲೆ, ಆ ಬೇಸರಕ್ಕೋ ಅಥವಾ ಅಮ್ಮನ ಬಿಗಿ ಹಿಡಿತಕ್ಕೋ ಮಂಕಾಗಿದ್ದ. ಚೆನ್ನಾಗಿ ಓದುತ್ತಿದ್ದ ಹುಡುಗ ಓದನ್ನು ಬದಿಗೆ ಸರಿಸಿ, ಮದುವೆ ಛತ್ರಗಳಿಗೆ ಬಡಿಸಲು, ದೇವಸ್ಥಾನಗಳಿಗೆ ತೀರ್ಥ ಕೊಡಲು ಹೋಗತೊಡಗಿದ್ದ. "ಆ ರಾಮ್‌ಪ್ರಸಾದ್ ಮಾಣಿ ಬರೇ ಬಡ್ಡು. ಎಂಥ್ ಪ್ರಯೋಜನ ಇಲ್ಲೆ" ಅನಿಸಿಕೊಂಡು ಎಲ್ಲರ ತಾತ್ಸಾರಕ್ಕೀಡಾಗಿದ್ದ. ತಾನೇ ಸ್ವತಃ ಅಡುಗೆ ವಹಿಸಿಕೊಳ್ಳುವ ಸಾಹಸಗಳನ್ನೂ ಮಾಡಿ, ಅದರಲ್ಲೂ ವಿಫಲನಾಗಿ 'ಕೆಟ್ಟು ಪಟ್ಟಣ ಸೇರು' ಎಂಬಂತೆ ಪಟ್ಟಣ ಸೇರಿದ್ದ.

ಪಟ್ಟಣದ ಜನರ ನಯನಾಜೂಕುಗಳಿಗೆ ಹೊಂದಿಕೊಳ್ಳಲಾಗದೆ ಪುನಃ ಊರಲ್ಲಿ ಅಡುಗೆಯವರ ಜೊತೆ ಸಹಾಯಕನಾಗಿ ಬಂದಿದ್ದ. ಏನು ಮಾತಾಡಬೇಕು ಏನು ಮಾತಾಡಬಾರದು ಯಾವುದೂ ಗೊತ್ತಿಲ್ಲದ ರಾಮಪ್ರಸಾದ್ ಎಲ್ಲರ ಎದುರು ಸತ್ಯವೇ ಹೇಳಿ ನಗೆಪಾಟಲಿಗೀಡಾಗುತ್ತಿದ್ದ. ಒಳಗೊಂದು ಹೊರಗೊಂದು ಇರದ ಮಗುವಿನ ಸ್ವಭಾವದ ಆತ ಎಲ್ಲರ ತಮಾಷೆಗೆ ಸುಲಭವಾದ ಗುರಿ. ಸ್ವಲ್ಪ ಮೊದ್ದು ಅಂಥ ಬಿಟ್ಟರೆ ಹೆಡ್ಡ ಏನಲ್ಲ, ಡಿಗ್ರಿವರೆಗೆ ಪ್ರಥಮ ದರ್ಜೆಯಲ್ಲೇ ಪಾಸಾಗಿದ್ದ.

ಆದರೂ ಅಲ್ಲಿ ಇಲ್ಲಿ ಪೂಜೆಯೋ, ಪೌರೋಹಿತ್ಯವೋ, ಅಡುಗೆಯೋ, ತೀರ್ಥಕೊಡುವುದೋ, ಲಾಡು ಕಟ್ಟುವುದೋ, ಕಾಯಿ ಒಡೆಯುವುದೋ ಏನಾದರೂ ಒಂದನ್ನು ಮಾಡಿಕೊಂಡು ತನಗೆ ತಾನೇ 'ಉದರ ನಿಮಿತ್ತಂ ಬಹುಕೃತ ವೇಷಂ' ಅಂಥ ತಿರುಗಾಡುತ್ತಿದ್ದ ರಾಮಪ್ರಸಾದನಿಗೆ ಮದುವೆಯ ಪ್ರಾಯವೂ ಬಂತು. ಊರಲ್ಲಿ ಆತನ ಓರಗೆಯವರಿಗೆಲ್ಲ ಮದುವೆಯಾಗುವಾಗ ಈತನಿಗೂ ಕನ್ಯಾನ್ವೇಷಣೆ ಶುರುವಾಯಿತು. 'ಬ್ರಾಹ್ಮಣ ಹುಡುಗಿಯಾದ್ರೇ ಒಳ್ಳೆದು. ಇಲ್ಲಾದ್ರೆ ಪೂಜೆ ಮಾಡುಕೆಲ್ಲ ನಂಗೆ ಹೋಪುಕಾತಿಲ್ಲೆ, ಯಾರು ಮರ್ಯಾದೆ ಕೊಡುದಿಲ್ಲೆ' ಅಂಥ ಬ್ರಾಹ್ಮಣ ಕನ್ಯೆಗಾಗಿ ಅನ್ವೇಷಣೆಯೂ ನಡೆಯಿತು. ದೂರದ ಘಟ್ಟದ ಮೇಲೆ ಒಂದು ಬ್ರಾಹ್ಮಣ ಹುಡುಗಿ ಇದೆ ಇಂದು ಸುದ್ದಿ ತಿಳಿದ ಅಮ್ಮ ಮಗ, 'ಬ್ರಾಹ್ಮಣ ಹುಡುಗಿ ಬಿಟ್ರೆ ಬೇರೆ ಯಾರಾದ್ರು ಮದಿ ಆತು ಸಿಕ್ಕುದೆ ಕಷ್ಟ' ಎಂದು ಇಲ್ಲದ ತರಾತುರಿಯಲ್ಲಿ ಆ ಹುಡುಗಿಯ ಬಗ್ಗೆ ಕೂಲಂಕಷವಾಗಿ ತನಿಖೆಯೂ ನಡೆಸದೆ ಮದುವೆಗೆ ದಿನ ಇಟ್ಟೇ ಹುಡುಗಿ ನೋಡಲು ಹೋದರು. ಪ್ರಾಯ ಇನ್ನೂ 18 ಆಗಿದೆಯೋ ಇಲ್ಲವೋ ಗೊತ್ತಿಲ್ಲದ ಬಡ ಬ್ರಾಹ್ಮಣ ಹುಡುಗಿಯನ್ನು ನೋಡಿ ನಿಶ್ಚಯವೂ ನಡೆಯಿತು. ಮದುವೆಗೆ ಛತ್ರವೂ ಕಾದಿರಿಸಲಾಯಿತು. ಆದರೆ ಮಾರನೇ ದಿನವೇ ಹುಡುಗಿ ತನಗೆ ಹುಡುಗ ಬೇಡ ಎಂದು ಅಮ್ಮ ಮಗನ ಸಡಗರಕ್ಕೆ ತಣ್ಣೀರೆರಚಿದ್ದಳು.

ಬರೀ ಬಡತನದಲ್ಲಿ ಬೆಂದಿದ್ದ ಆ ಹುಡುಗಿಗೆ ಬ್ರಾಹ್ಮಣರಲ್ಲಿ ಹುಡುಗಿ ಸಿಗುವುದಿಲ್ಲ, ಸಿಕ್ಕರೆ ಖರ್ಚು ಹಾಕಿ ಮದುವೆ ಮಾಡಿಕೊಂಡು ಹೋಗುತ್ತಾರೆ. ನಿನ್ನ ಮನೆಯವರಿಗೂ ಹಣ ಕೊಟ್ಟಾರು. ನೀನು ಒಳ್ಳೆ ಮನೆ ಸೇರುತ್ತಿ, ನಿನಗೆ ಬೇಕಾದಷ್ಟು ನೆಂಟಸ್ತಿಕೆ ಬರುತ್ತದೆ ಎಂಬ ಅವರಿವರ ಮಾತುಗಳು ಅವಳ ವಿದ್ಯಾಭ್ಯಾಸವನ್ನೇ ಅರ್ಧಕ್ಕೆ ಮೊಟಕುಗೊಳಿಸಿ ಮದುವೆಗಾಗಿ ಕಾಯುತ್ತಾ 'ಹುಚ್ಚು ಬಿಡುವವರೆಗು ಮದುವೆ ಇಲ್ಲ, ಮದುವೆ ಆಗುವರೆಗೂ ಹುಚ್ಚು ಬಿಡುವುದಿಲ್ಲ' ಎಂಬಂತೆ ಮಾಡಿತ್ತು. ಏನೂ ಪ್ರಪಂಚ ಜ್ಞಾನ ಇಲ್ಲದ ಹುಡುಗಿಯ ನಿರಾಕರಣೆ ಅಮ್ಮ ಮಗನನ್ನು ನಿರಾಸೆಯ ಕೂಪಕ್ಕೆ ತಳ್ಳಿತು.

ಸರಿ ಬಿಡದೆ ಭಗೀರಥನಂತೆ ಪ್ರಯತ್ನಿಸಿ ಅದ್ಯಾರೋ ದಲ್ಲಾಳಿಯನ್ನು ಹಿಡಿದು ದೂರದ ಯಾವುದೋ ಊರಿನಿಂದ ಲಿಂಗಾಯತ ಹುಡುಗಿ ಎಂದು ಒಂದು ಹುಡುಗಿ ಜತೆ ಮದುವೆ ನಿಗದಿ ಆಯಿತು. ರಾಮಪ್ರಸಾದ ಮದುವೆ ಕರೆಯೋಲೆ ಹಿಡಿದು ಎಲ್ಲರನ್ನೂ ಮದುವೆಗೆ ಆಹ್ವಾನಿಸಿಯೂ ಆಯಿತು. "ಆ ಸಣ್ಣ ಪ್ರಾಯದ ಹುಡುಗಿನ್ನ ಮದಿ ಆಯಿದ್ರೆ ನನ್ನ ಕತೆ ಅಲ್ಲ ಮಾರಾಯಾ. ತಪ್ಪಿ ಹೋದ್ದೇ ಒಳ್ಳೆದಾಯ್ತು" ಎಂದು ಹಳೆ ಕಹಿಯನ್ನು ಮರೆತು ಹೊಸ ಬದುಕಿಗಾಗಿ ಸಿದ್ಧತೆ ನಡೆಸಿದ. "ಮದ್ವೆಗೆ ಒಂದು 200 ಜನ ಅಷ್ಟೆ. ಹೆಚ್ಚು ಯಾರಿಲ್ಲ, ಹುಡುಗಿದು ಎಸ್‌ಎಸ್‌ಎಲ್‌ಸಿ ಆಯಿತ್. 3 ಜನ ಮಕ್ಕಳು. ಅಪ್ಪನಿಗೆ ಅಂಗಡಿ" ಅಂತೆಲ್ಲ ಮದುವೆ ವಿಷಯ ಹೇಳುತ್ತಾ ಸಂಭ್ರಮದಿಂದ ತಿರುಗುತ್ತಿದ್ದ ರಾಮಪ್ರಸಾದನನ್ನು ನೋಡಿ "ಅಬ್ಬಾ ಮಾಣಿಗೆ ಕೊನೆಗೂ ಒಂದ್ ಮದ್ವೆ ನಿಶ್ಚಯ ಆಯ್ತಲ್ಲಾ ಒಳ್ಳೆದಾಯ್ತು" ಎಂದು ಊರಿನವರೆಲ್ಲ ಸಂತೋಷಪಟ್ಟದ್ದೂ ಆಯ್ತು. ಕೆಲವರು ಈ ಸಂತೋಷದೊಳಗೆ ಭಾಗಿಯಾಗುತ್ತಲೇ "ಖುಷಿ ಆಯ್ತ್ ಆರು ಕೊನೆಗೆ ಒಂದ್ ಸ್ಥಾನಿಕರ ಹೆಣ್ಣೂ ಸಿಗದೆ ಹೋಯ್ತಲ್ಲೆ" ಅಂಥ ಹಲುಬಿದವರೂ ಇದ್ದರು.



ಕತೆ

ಈ ಸಂತೋಷದಲ್ಲಿ ಭಾಗಿಯಾಗದೆ "ಅಯ್ಯೋ ಬೇರೆ ಜಾತಿ ಹೆಣ್ಣನ್ನು ನಮ್ಮ ವಂಶದಲ್ಲೇ ಯಾರು ಮದುವೆ ಆಗಿಲ್ಲ, ಈಗ ನಮ್ಮ ಮರ್ಯಾದೆ ಏನಾಗ ಬೇಡ" ಎಂದು ಆಕಾಶಭೂಮಿ ಒಂದು ಮಾಡಿದವರು ರಾಮಪ್ರಸಾದನ ಅಪ್ಪನ ಮನೆಯವರು.

ಅಪ್ಪ ತೀರಿದ ನಂತರ ಹೆಚ್ಚುಕಡಿಮೆ ಅಪ್ಪನ ಮನೆಯವರ ಒಡನಾಟವೇ ಇಲ್ಲದ ರಾಮಪ್ರಸಾದ ಮದುವೆಗೆ ಹೋಗಿ ಎಲ್ಲರನ್ನೂ ಕರೆದು ಬಂದಿದ್ದ. ದೊಡ್ಡ ದೇವಸ್ಥಾನದ ಪೂಜೆಯವರಾದ ಆ ಆಚಾರ್ ಮನೆತನನದವರಿಗೆ ಪೂಜೆ ಹಾಗು ಪೌರೋಹಿತ್ಯ ವಂಶಪಾರಂಪರ್ಯವಾಗಿ ಹರಿದುಬಂದಿತ್ತು, ರಾಮಪ್ರಸಾದನಿಗೂ ಅದರಲ್ಲಿ ಪಾಲಿತ್ತು. ಪೂಜೆಯಿಂದಲೇ ಗುರುತಿಸಿಕೊಂಡಿದ್ದ, ಅದರಿಂದಲೇ ಸಮಾಜದಲ್ಲಿ ಗೌರವ ಪಡೆದಿದ್ದ ಆ ತುಂಬು ಕುಟುಂಬದ ಮನೆತನಕ್ಕೆ ಈ ಮದುವೆ ನುಂಗಲಾರದ ತುತ್ತಾಗಿತ್ತು. ಅಣ್ಣನ ಮಗನ ಮದುವೆ ಕೊನೆಗಾದ್ರೂ ಆಗ್ತದಲ್ಲಾ ಎಂದು ಕೆಲವರು ಸಮಾಧಾನಪಟ್ಟುಕೊಂಡರೆ ಇನ್ನು ಕೆಲವರು "ಯಾರೂ ಈ ಸುದ್ದಿ ಚರ್ಚೆ ಕೂಡ ಮಾಡಬಾರದು. ಹೊರಗಿನಿಂದ ತಂದ ಸೊಸೆಯರಿಗೆ ಈ ವಿಷಯ ತಿಳಿದರೆ ಮನೆತನದ ಘನತೆಗೆ ಕುಂದುಬರುತ್ತದೆ" ಎಂದು ಹುಕುಂ ಹೊರಡಿಸಿದರು. ಇನ್ನು ಕೆಲವರು ಮೀಟಿಂಗುಗಳ ಮೇಲೆ ಮೀಟಿಂಗುಗಳನ್ನು ಮಾಡಿ "ಹೋದರೆ ಮದುವೆ ಒಪ್ಪಿ ಕೊಳ್ಳಬೇಕಾಗುತ್ತೆ, ನಮ್ಮ ಮರ್ಯಾದೆ ಗತಿ ಏನು? ಪೂಜೆಯಲ್ಲಿ ಪಾಲುಕೊಡಲು ಸಾಧ್ಯವಿಲ್ಲ. ಯಾರೂ ಮದುವೆಗೆ ಹೋಗಕೂಡದು" ಎಂದು ಎಲ್ಲರಿಗೂ ಸುಗ್ರೀವಾಜ್ಞೆ ಹೊರಡಿಸಿದರು. ಹೋಗಲು ಮನಸ್ಸಿದ್ದವರು ಹಿರಿಯರ ಮಾತಿಗೆ ತಪ್ಪಿಹೋದರೆ ನಾಳೆ ನಿಷ್ಠುರಕ್ಕೀಡಾಗ ಬೇಕಾಗುತ್ತದಲ್ಲಾ ಎಂದು ಹಿಂದೇ ಉಳಿದರು. ಇನ್ನು ಕೆಲವರು "ಅವರು ಕೋರ್ಟ್‌ಗೆ ಹೋದರೆ ನಾವು ಪೂಜೆ ಕೊಡಲೇಬೇಕಷ್ಟೆ. ಈಗ ದೂರ ಇದ್ದು ಬಿಡುವ ಆಮೇಲೆ ನೋಡುವ" ಎಂದರು.

ಆದರೆ ವಿಧಿ ಲೀಲೆ ಬೇರೆ ಏನೋ ಇತ್ತು, ಮದುವೆ ನಾಳೆ ಎಂದಾದರೆ ಇವತ್ತು ಬೆಳಗ್ಗೆ ಸೊಪ್ಪು ಕೊಯ್ಯಲು ಹೊರಟಿದ್ದ ಜನ್ನಿ ಬಂದು "ಅಮ್ಮ, ರಾಮಪ್ರಸಾದನ ಮದ್ವೆ ಕ್ಯೆದ್ ಆಯ್ತ್ ಅಂಬ್ರಲೆ. ಅಂಗಡಿ ಬದೀಲಿ ಎಲ್ಲ ಅದೇ ಮಾತಾಡ್ತ ಇದ್ರು. ನಿಮ್‌ಗೆ ವಿಷ್ಯ ಗೊತ್ತಾಯ್ತಾ?" ಅಂದಾಗ ಎಲ್ಲಾರಿಗೂ ಗಾಬರಿ. "ಎಂಥ ಮಾರಾಯ್ತಿ ಎಂಥ ಹೇಳ್ತೆ ಎಂಥ ಆಯ್ತು" ಅಂದೆ. "ನಿನ್ನೆ ಅವ್ರ ಮನೆಂಗೆ ಎಲ್ಲಾರು ನೆಂಟರೆಲ್ಲ ಬಂದೀರೆ. ಮದಿಗೆ ತಯಾರ್ ಮಾಡ್ತೆ ಇದ್ದೀರ್. ಆಗಳಿಕೆ ದಲ್ಲಾಳಿ ಕಾರಂಗೆ ಬೇರೆ ಯಾರೋ ಹುಡುಗಿನ ಕರ್ಕಂಡ್ ಬಂದ್ ನಿಮಗೆ ತೋರಿಸಿದ್ದ ಹುಡುಗಿಗೆ ಆಕ್ಸಿಡೆಂಟ್ ಆಯಿ ಸತ್ತ್ ಹೋಯ್ತು. ಈ ಹುಡುಗಿನ ಮದಿ ಆಯಿನಿ ಅಂದಂಬ್ರು. ಇವ್ರ ಗಲಾಟೆ ಮಾಡಿ ಬೇಡ ಅಂದಂಬ್ರು. ಮದುವೆ ಕ್ಯೆದ್ ಆಯ್ತೆ" ಅಂದಾಗ ಎಲ್ಲರಿಗೂ ಗಾಬರಿ, ಬೇಸರ.

ದಲ್ಲಾಳಿ ಮೋಸ ಮಾಡಿದ್ದ, ಹುಡುಗಿ ನಿಜ ಸತ್ತು ಹೋದ್ಲ ಯಾವುದೋ ಹುಡುಗಿ ತೋರಿಸಿ ಇನ್ಯಾವುದೋ ಹುಡುಗಿ ಮದುವೆ ಮಾಡೋ ಜಾಲವಾ? ದಲ್ಲಾಳಿ ಹುಡುಗಿ ಆಕೆಯ ಅಪ್ಪ ಅಮ್ಮ ಎಲ್ಲಾರು ಜಾಲದಲ್ಲಿ ಪಾಲುದಾರರೇ ಈ ಚರ್ಚೆಯಲ್ಲೇ ಇಡೀ ಊರು ಮುಳುಗಿತು. ಪಾಪ ಮದುವೆ ಮನೆಯಲ್ಲಿ ಹಸೆಮಣೆಯ ಮೇಲಿರಬೇಕಾಗಿದ್ದ ಹುಡುಗ ಹೆಬ್ಬಾರ್ ಮನೆ ಚಂಡಿಕಾಶಾಂತಿಯಲ್ಲಿ ಬಳಸಲು ಬಂದಿದ್ದ ಅಲ್ಲೆ ಶಾಂತಕ್ಕನನ್ನು ಭೇಟಿಯಾಗಿ ತನ್ನ ಬೇಸರ ತೋಡಿಕೊಂಡದ್ದು.

"ದಲ್ಲಾಳಿ ಮೋಸವಾ ಅಂಥ ಕೇಂಡೆ. ಅದ್ಕೆ ಅಲ್ಲ ಅಂವ ಆ ಹುಡುಗಿ ಮನೆವ್ರು ಅಳ್ತಾ ಇದಾರೆ ನೋಡಿ ಅಂಥ ಫೋನಲ್ಲೆ ಕೇಳಿಸಿದ ಅಂದಪ್ಪ" ಎಂದು ಶಾಂತಕ್ಕ ಹೇಳುತ್ತಿರುವಾಗಲೇ ಹೆಬ್ಬಾರ್ ಮಾಸ್ಟ್ರ ಸವಾರಿ ಅಲ್ಲಿಗೆ ಬಂತು.

ಹೆಬ್ಬಾರ್ ಮಾಸ್ಟ್ರ ಸವಾರಿ ಬಂದಮೇಲೆ ಕೇಳಬೇಕೆ?! ಅವರು ಊರಿನ ಒಂದು ನ್ಯೂಸ್ ಚಾನಲ್ ತರಹ. ಸುದ್ದಿ ಸಂಗ್ರಹಣೆ, ಪ್ರಸಾರ, ವಿಶ್ಲೇಷಣೆ ಎಲ್ಲವನ್ನೂ ಅವರೊಬ್ಬರೇ ಮಾಡುತ್ತಾರೆ.

"ಯಾರ್ ಆ ರಾಮಪ್ರಸಾದನ ವಿಷ್ಯವಾ? ಈಗಳಿಕೆಲ್ಲ ಹಾಂಗೇ. ಬ್ರಾಹ್ಮಣರಂಗೆ ಹುಡುಗಿ ಸಿಕ್ಕದಿಲ್ಲೆ ಅಲ್ದಾ ಅದ್ಕೆ ಎಲ್ಲಾ ಮೋಸ ಮಾಡ್ತೋ. ದಲ್ಲಾಳಿಗೆ ಕಮಿಷನ್ ಕೊಟ್ರೆ ಹುಡುಗಿ ಹುಡ್ಕಿ ಕೊಡ್ತ, ಆರೆ ಮದ್ವೆ ಆಯಿ 6 ತಿಂಗಳಂಗೆ ಹುಡ್ಗಿ ಪುಡ್ಚ, ಆ ಪಾದೆಕಲ್ಲ್ ಮನೆ ಪ್ರಸಾದ, ಅವನ್ ಮದ್ವೆ ದಿನ ಹುಡುಗಿ ಮನೆವರನ್ನ್ ಕಂಡೇ ಅಲ್ದ ಅವು ಬ್ರಾಂಬ್ರ ಅಲ್ದ ಅಂದ್ಕಂಡ್ದ್ ನಮ್ಗ್ ಗೊತ್ತಾದ್. ಅವು ಘಟ್ಟದವು, ಯಾವ್ ಜಾತಿಯೋ ಎಂಥದ್ದೋ. ಈಗ ಹೆಣ್‌ಗಳೇ ಇಲ್ಲ ಅಲ್ದ್ಪ ಮೊದ್ಲ ಆದ್ರೆ ಹವ್ಯಕ ಆಗ, ಕೋಟ ಆಗ , ಸ್ಥಾನಿಕರಾಗ ... ಈಗ ಮಾಂಸ ತಿನ್ನದೆ ಇದ್ದವರಾದ್ರೆ ಆಯ್ತ್ ಅಂದ್ರೂ ಹೆಣ್ ಸಿಕ್ಕುದಿಲ್ಲೆ, ಈಗ ಪುರೋಹಿತ್ರಿಗೆ, ಮನೇಲಿ ದೊಡ್ಡ್ ಬಾಯಿ ಇಪ್ಪವರಿಗೆ ಎಲ್ಲಾ ಸರೀ ಮರ್ಯಾದೆ ಮಾಡ್ರೆ ಹುಡುಗಿಗೆ ಶುದ್ಧ ಮತ್ತೊಂದು ಮಗದೊಂದು ಎಲ್ಲವೂ ಆತ್"

"ಸೀತಾರಾಮಾ ನಿಮ್ ಪೈಕಿ ಆ ಶ್ಯಾಮ್ ಭಟ್ರ ಮಗ ರಮೇಶನಿಗೆ ಎಷ್ಟ್ ವರ್ಷದಿಂದ ಹೆಣ್ ಹುಡಕ್ತೆ ಇದ್ರ್, ಹೆಣ್ ಸಿಕ್ತಾ? ಅದ್ ಇದ್ದವ್ರ ಹತ್ರ ಎಲ್ಲ ಎಲ್ಲಾರ್ ಒಂದ್ ಹೆಣ್ ಇದ್ರೆ ಹೇಳಿ, ಹೆಣ್ ಇದ್ರೆ, ಮರ್ಯಾದೆ ಬಿಟ್ ಕೇಳ್ತ್ರ್, ಮೊನ್ನೆ ನ ಅಪ್ಪಯ್ಯಂಗೆ ಹುಷಾರಿಲ್ಲೆ, ದೇವಸ್ಥಾನ ಪೂಜ ಎಡುದಿಲ್ಲೆ, ಜನವೂ ಸಿಕ್ತದಿಲ್ಲೆ, ನಾನೇ ಪೂಜ ಅಂದ್ರೆ ಮದ್ವೀ ಆಯ್ದೆ ಒಳಗೆ ಹೋಪುಹಾ ಎಲ್ಲಾರು ಹುಡ್ಗಿ ಇದ್ರೆ ಹೇಳಿ ಅಂಥ ಹೆ ಅಬ್ಬೆ ಬ್ಯೆತ್ಲ ಎಲ್ಲರ್ ಹತ್ರ ಅದೆಂಥ ಹಾ ಇತ್ತಾ ಅಂಥ ಕೇಂಬುದ್ ಅಂದ್ಕಂಡ್ ಆ ಸಿಕ್ಕುದಿಲ್ಲೆ" ಹೆಬ್ಬಾರ್ ಮಾಸ್ಟ್ರ ದನಿ ಪ್ರೈಮ್ ಆಂಕರ್ ತರ ತಾರಕಕ್ಕೇರುತ್ತಿತ್ತು, ಊರಲ್ಲಿದ್ದ ಎಲ ಎಳೆದು ತರುವ ಉತ್ಸಾಹ ಕಾಣುತ್ತಿತ್ತು

ಅಷ್ಟರಲ್ಲಿ ಈ ಮಾಸ್ಟ್ರ ಕತೆ ಕೇಂತಾ ಕು ಅಂಥ "ನಾ ಬತ್ತೆ ಸೀತಾರಾಮಣ್ಣ, ಬತ್ತೆ ಮಾ ಶಾಂತಕ್ಕ ಹೊರಬಿದ್ರು. ಹೊರಗೆ ಇದ್ದ ನನ್ನ ನ ಹೆಬ್ಬಾರ್ ಮಾಸ್ಟ್ರಿಗೆ ಮಾಡುಕ್ ಬೇರೆ ಕಸ ಮದ್ವೆ ಆದ್ರೂ ಹುಡುಗಿ ನಮ್ ಜಾತಿ ಹೌದ ಅಂಥ ತನಿಖೆ ಮಾಡುದೇ ಕೆಲ್ಸ. ಪಾಪ ಕಷ್ಟಪಟ್ಟು ಕೆಲಸ ಮಾಡ್ತ ಅವಂಗೆ ಎಷ್ಟೋ ಹುಡುಗಿ ಹುಡ್ಕಿ ಹುಡ್ಕಿ ಸಿಕ್ಕದೆ ಕೊನೆಗೆ ಮ ಆಯ್ತು. ಈ ಮಾಸ್ಟ್ರ ನಿನ್ನ ದೊಡ್ಡಪ್ಪ ಎಲ್ಲ ತಿಳ್ಕಂಡ್ ಬಂದವರ್ ಕಣಂಗೆ ಇಡೀ ಊ ಶೇಖರನ ಹೆಂಡತಿಗೆ ಇದ್ ಎರಡನೇ ಮ ಗಂಡ ತೀರಿಹೋಯ್ದ ಅಂದ್ಕಂಡ್ ಬಂದೀ ಮೆಲುದನಿಯಲ್ಲಿ ಉಸುರಿ, "ನಾ ಬತ್ತೆ ದ ಮಾರಾಯ್ತಿ"" ಅಂಥ ಶಾಂತಕ್ಕ ಮನೆ ದಾರಿ

* * * *

ಈ ಘಟನೆ ಕಳೆದು ಎರಡು ತಿಂ ರಾಮಪ್ರಸಾದ ಮದುವೆ ಹೇಳಿಕೆಗೆ ಅಕ್ಷತ ಪುನಃ ನಮ್ಮ ಮನೆಯಲ್ಲಿ ಹಾಜರಾಗಿದ್ದ. ದಲ್ಲಾಳಿಯೇ ಗೊತ್ತು ಮಾಡಿದ್ದು. ತಂದೆ ಇ ಓದಿದ್ದು, ಕೆಲಸಕ್ಕೆ ಹೋತೇ ಇದ್ದು, ಈ ಸಾರಿ ಹೆಚ್ಚು ಜನಕ್ಕೆ ಹೇಳಿಕೆ ಇಲ್ಲ, ಗೌಜಿ ಇಲ್ಲ, ಎಲ ಬನ್ನಿ ಅಂದ.

ಊರಿನವರೆಲ್ಲ ಸಂಭ್ರಮದಿಂದಲೇ ಹೋದರು. ಕೆಲವರು ಬೇರೆ ಜಾತಿ ಹುಡು ಹ್ಯಾಂಗಾತ್ತು ಕಾಂಬ ಅಂಥ ಕುತೂಹಲದಿಂ ಇನ್ನು ಕೆಲವರು ಆ ಆಚಾರ್ ಮನೆಯವ್ರು ಮಾಡ್ತ್, ಊರಿನವರಿಗೆಲ್ಲ ಮಡಿ, ಶಾಸ್ತ್ರ ಹೇ ಅವ್ರ ಮನಿಯವ್ರು ಮದಿಗೆ ಬಂದೀರಾ ಅಂಥ ಬಂದರು. ಮತ್ತೆ ಸ್ವಲ್ಪ ಮಂದಿ ಈ ಬ್ರಾ ಹೀಂಗಾಯ್ತಲ್ಲೆ ಅಂಥ ಕನಿಕರ ಪಟ್ಟರು. ಕೆಲವ ಕೊನೆಗೂ ಮದಿ ಆಯ್ತಲ್ಲಾ ಅಂಥ ಖು ಒಟ್ಟನಲ್ಲಿ ರಾಮಪ್ರಸಾದನಿಗೆ ಮದ್ವೆ ಆಯ ಊರಿನ ಒಳ್ಳೆ ಹೃದಯದ ಹುಡುಗಿ ಅವ್ರ ಮ

ಈ ಖುಷಿಗೆ ಬಹಿಷ್ಕಾರ ಹಾಕಿ ಮದುವ ಆಚಾರ್ ಮನೆಯವರು ಮಾತ್ರ. ಶಾವ ಒಳಗೊಳಗೆ ದುಃಖವೂ ಆಯ್ತು. "ನಾನು ಯಾವ್ ಕಾರ್ಯಕ್ರಮಕ್ಕೂ ಹೋತಿಲ್ಲೆ, ಪೂಜ ನನ್ನ ಪಾಲಿಗೆ 15 ವರ್ಷಕ್ಕೆ ಒಂದ್ ಸಲ ನಾನು ತಲೆ ಹಾಳು ಮಾಡ್ಕಂತಿಲ್ಲೆ" ಅಂಥ ಫಂಕ್ಷನಗಳ ಸೀಸನ್ ಇದ್ದ ಕಾರಣ ತನ್ನ ಪ ತನ್ನ ಹೊಟ್ಟೆ ಹೊರೆಯುವ ಕಾಯಕದಲ್ಲಿ

ಮೊನ್ನೆ ಮನೆಯಲ್ಲಿ ಸಿಗ್ನಲ್ ಸರಿ ಸಿಕ್ಕಲಿಲ್ಲ, ಫೋನ್ ಮಾಡುವುದಿತ್ತು ಎಂದು ತೋಟದ ಹಿಡಿದು ನಿಂತಿದ್ದಾಗ ಸೀತಾರಾಮ ಭಟ್ಟರು ಓಡಿಬಂದರು. "ನಿನ್ನೊಂದ್ ಚೂರು ಫೋನ್ ಮಗಾ. ನಮ್ಮ ಮನೇಲಿ ಲ್ಯಾಂಡ್‌ಲೈನ್ ಹಾ ಅರ್ಜೆಂಟ್ ಆಚಾರ್‌ಗೆ ಫೋನ್ ಮಾಡುಕ್ಕಿತ್, ಸೂತಕ ಬಂದಿತ್, ನಮ್ ಕುಟುಂಬದ ತೀರಿಹೋಯಿರ್. ಪೂಜೆಗೆ ಯಾರ್ ಜನ ಆಚಾರ್ ಹತ್ರ ಚೂರು ಕೇಣ್ಕಿದಿತ್" ಅಂ

ಯಾವತ್ತೂ ಅವು ಸೂತಕಕ್ಕೆ ಸೀತಾರಾ ಪೂಜೆ ಮಾಡಿಕೊಡುವ ಪ್ರಸನ್ನ ಶಾಸ್ತ್ರಿಗಳು ತಾನು 3-4 ಮದುವೆ ವಹಿಸಿಕೊಂಡಿದ್ದೇನ ಹುಷಾರಿಲ್ಲ, ಪುರುಸೊತ್ತಿಲ್ಲೆ ಮಾರಾಯಾ ಎಂದು ಕೈ ಎತ್ತಿದರು. ದೇವಸ್ಥಾನಕ್ಕೆ ಅಗ ಮಾಡಿಕೊಡಲು ಬರುತ್ತಿದ್ದ ರಾಮಪ್ರಸಾ ಮದುವೆಯ ನಂತರ ಕರೆಯಬೇಕೆ ಬೇಡ ಗೊಂದಲಕ್ಕೆ ಭಟ್ಟರು ಬಿದ್ದರು. ರಾಮಪ್ರಸಾ ಮನೆಯವರು ಈ ದೇವಸ್ಥಾನಕ್ಕೆ ತಂತ್ರಿ ಮಾಡುದು ಎಂದು ಭಟ್ಟರು ಅವರಿಗೇ ಫೋ "ಮತ್ತೆಂಥ ಮಾಡುದು ಅವನನ್ನೇ ಹೇಳಿ. ನಾ ಅಂಥ ಹೇಳ್ಬೇಡಿ" ಆಚೆಯಿಂದ ಫೋನ್

■ ಶ್ರೀನಿಧಿ

ಬಾಬರಿ ಮಸೀದಿ ಧ್ವಂಸ: ಬೆಚ್ಚಿಬೀಳಿಸುವ ಮಾಹಿತಿಗಳು

ವಿಶ್ವ ಹಿಂದೂ ಪರಿಷತ್ತಿನ ಹಿರಿಯ ನಾಯಕನೂ, ...ಜನ್ಮಭೂಮಿ ಹೋರಾಟದ ರೂವಾರಿಯೂ ಆಗಿದ್ದ ...ಸಿಂಘಾಲ್‌ಗೆ ಇದೇ ನವೆಂಬರ್ 22ರಂದು ...ಗೋವಿಂದ ಕಲ್ಯಾಣ ಮಂಟಪದಲ್ಲಿ ಶ್ರದ್ಧಾಂಜಲಿ ...ಕಾರ್ಯಕ್ರಮ ಜರುಗಿತು. ಆ ಸಂದರ್ಭದಲ್ಲಿ ...ಡಿದ ಪೇಜಾವರ ವಿಶ್ವೇಶತೀರ್ಥ ಸ್ವಾಮಿ, ...ಮವರದ್ದು ಉಪ್ಪಿನ ಸತ್ಯಾಗ್ರಹವಾದರೆ ರಾಮ ...ಮಿ ಹೋರಾಟ 'ಸಕ್ಕರೆ ಸತ್ಯಾಗ್ರಹ'" ಎಂಬ ...ವ್ಯಾಖ್ಯಾನವೊಂದನ್ನು ಮಂಡಿಸಿದರು (ವಿಜಯ ..., 23.11.2015). ಆದರೆ ಉಪ್ಪಿನ ಸತ್ಯಾಗ್ರಹ ...ದ್ಧ ಅಹಿಂಸಾತ್ಮಕ ಚಳವಳಿಯಾಗಿತ್ತು, ರಾಮ ...ಮಿ ಹೋರಾಟ ಒಂದು ಹಿಂಸಾತ್ಮಕ ಕಾರ್ಯಾ...ಗಿತ್ತು. ಮಾನ್ಯರು ಈ ಹಿಂಸಾತ್ಮಕ ಹೋರಾಟವನ್ನು ...ಸಾತ್ಮಕ ಚಳವಳಿಯೊಂದಿಗೆ ಸಮೀಕರಿಸಿರುವುದು ...ಹೀರ ಕೃತ್ಯವೊಂದಕ್ಕೆ ನ್ಯಾಯಸಮ್ಮತತೆಯ ಸಕ್ಕರೆ ...ಡುವ ಪ್ರಯತ್ನ ಇರಬಹುದೇ ಎಂಬ ಅನುಮಾನ ...ಇಷ್ಟಕ್ಕೆ ನಿಲ್ಲಿಸದ ಪೇಜಾವರರು ಧ್ವಂಸ ಕೃತ್ಯವನ್ನು ...ಕೊಳ್ಳುತ್ತ "ಬಾಬರಿ ಮಸೀದಿಯನ್ನು ನೆಲಸಮ ...ಸರಿಯಾಗಿಯೆ ಇತ್ತು, ಆದರಿಂದ ನಮಗೆ ...ಷ ಆಗಿತ್ತು" (ವಾರ್ತಾಭಾರತಿ, 23.11.2015) ...ಹೇಳಿದರು. ಇತ್ತೀಚಿನ ದಿನಗಳಲ್ಲಿ ಸಂಘ ...ದ ಕೆಲವೊಂದು ವ್ಯಕ್ತಿ ಹಾಗೂ ಸಂಘಟನೆಗಳು ...ಗಾಂಧಿಯನ್ನು ಕೊಂದದ್ದು ಸರಿ, ಅವನೊಬ್ಬ ... ಎಂದು ಪ್ರತಿಪಾದಿಸುತ್ತಿರುವುದಕ್ಕೂ ಇದಕ್ಕೂ ...ವೇನಾದರೂ ವ್ಯತ್ಯಾಸವಿದೆಯೇ ಎಂದು ...ತಿಳಿಸಬೇಕು. ಹಾಗೆ ನೋಡಿದರೆ ಪೇಜಾವರ ...ವಾದಾತ್ಮಕ ಹೇಳಿಕೆಗಳಿಗೆ ಹೊಸಬರೇನಲ್ಲ, ಈ ...ಇಂತಹುದೆ ಕೆಲವು ಮಾತುಗಳನ್ನು ಆಡಿದವರು ...ದನದ ಮಾಂಸ ಕುರಿತ ರಾಷ್ಟ್ರೀಯ ವಿವಾದ ...ಲ್ಲೂ ಪ್ರತಿಧ್ವನಿಸಿದ್ದಾಗ "ಮಸೀದಿ ಮುಂದೆ ಹಂದಿ ...ಸಮಾರಾಧನೆ ಆದ್ರೆ ಮುಖ್ಯಮಂತ್ರಿ ಸುಮ್ಮನೆ ...?" ಎಂದು ಸವಾಲೆಸೆದುದನ್ನು ಜ್ಞಾಪಿಸಿಕೊಳ್ಳಬ...ಹುಶಃ ಯತಿವರ್ಯರ ವಿಶ್ವ ಹಿಂದೂ ಪರಿಷತ್ತಿನ ...ಅವರಿಂದ ಇಂತಹ ಹೇಳಿಕೆಗಳನ್ನು ಮತ್ತು ...ಗಳನ್ನು ನೀಡಿಸುತ್ತಿರುವಂತೆ ಕಾಣುತ್ತದೆ.

...ಾಲ್‌ರ ಶ್ರದ್ಧಾಂಜಲಿ ಸಭೆಯಲ್ಲಿ ನೀಡಿರುವ ಈ ...ನ್ನು ದೇಶದ ಸಂವಿಧಾನ ಮತ್ತು ಕಾನೂನಿಗೆ ...ಅನಾದರ ಮತ್ತು ಅಗೌರವಗಳ ಸೂಚಕವೆಂದು ...ವಿಧಿಯಿಲ್ಲ, ಏಕೆಂದರೆ ಬಾಬರಿ ಮಸೀದಿಯನ್ನು ...ಮತ್ತು ಅದಕ್ಕೆ ಪ್ರಚೋದನೆ ನೀಡಿದ್ದು ಇವೆರಡೂ ...ಸ ಕಾನೂನಿನಪ್ರಕಾರ ಕ್ರಿಮಿನಲ್ ಕೃತ್ಯಗಳಾಗಿದ್ದು ...ಸಂಬಂಧಪಟ್ಟಂತೆ ಕಾರ್ಯಗತಗೊಳಿಸಿದವರು ...ಪಿತೂರಿಕೋರರ ವಿರುದ್ಧ ಎರಡು ಪ್ರತ್ಯೇಕ ...ಣಗಳು ದಾಖಲಿಸಲ್ಪಟ್ಟಿವೆ (ಅಪರಾಧ ಸಂಖ್ಯೆ: ...92 (32 ಆರೋಪಿಗಳು); 198/1992 (8 ...ಗಳು). ಮಾತ್ರವಲ್ಲದೆ ಈ ಅಪರಾಧಗಳ ತನಿಖೆಗಾಗಿ ...ಪ್ರತ್ಯೇಕ ಆಯೋಗವನ್ನು ಕೂಡಾ ರಚಿಸಲಾಗಿತ್ತು ...ಹಾನ್ ಆಯೋಗ. 17 ವರ್ಷಗಳ ಸುದೀರ್ಘ ...ಬಳಿಕ 2009ರ ಜೂನ್ 30ರಂದು ಇದು ...ತಿಮ ವರದಿಯನ್ನು ಸಲ್ಲಿಸಿದೆ). ಆದರೆ ...ಪೋಸ್ಟ್ ನಡೆಸಿದ 'ಆಪರೇಷನ್ ಜನ್ಮಭೂಮಿ' ...ಕುಟುಕು ಕಾರ್ಯಾಚರಣೆ ಇವೆರಡಕ್ಕಿಂತ ಹೆಚ್ಚು ಪ್ರಬಲವಾದ ಸಾಕ್ಷ್ಯಾಧಾರವೆಂದು ಪರಿಗಣಿಸಲ್ಪಡಲು ಅರ್ಹವಾಗಿದೆ. 'ಆಪರೇಷನ್ ಜನ್ಮಭೂಮಿ' ಬಾಬರಿ ಮಸೀದಿ ಧ್ವಂಸ ಪ್ರಕರಣದ ನೈಜ ಆಯಾಮಗಳನ್ನು ಅಂದಿನ ಪಾತ್ರಧಾರಿಗಳ ಮಾತುಗಳಲ್ಲೆ ಪೂರ್ತಿಯಾಗಿ ತೆರೆದಿಡುತ್ತದೆ. ಮಸೀದಿ ಉರುಳಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಉಮಾಭಾರತಿ, ಬಿ.ಎಲ್.ಶರ್ಮ ಪ್ರೇಮ್, ವಿನಯ ಕಟಿಯಾರ್, ಸಾಧ್ವಿ ರಿತಂಬರಾ, ಸಾಕ್ಷಿ ಮಹಾರಾಜ್, ರಾಮ್ ವಿಲಾಸ್ ವೇದಾಂತಿ ಸೇರಿದಂತೆ ಒಟ್ಟು 23 ನಾಯಕರ ಜೊತೆ ಕೋಬ್ರಾಪೋಸ್ಟ್‌ನ ಸಹ ಸಂಪಾದಕ ಎ. ಖೇತನ್ ನಡೆಸಿರುವ ಸಂದರ್ಶನಗಳು ಅದೊಂದು ಸಾಕಷ್ಟು ಮುಂಚಿತವಾಗಿ ಯೋಜಿಸಿ, ಕಾರ್ಯಕರ್ತರ ಪಡೆಯನ್ನು ತರಬೇತುಗೊಳಿಸಿ, ಸೇನಾ ಕಾರ್ಯಾಚರಣೆಯ ಮಾದರಿಯಲ್ಲಿ ಕಾರ್ಯಗತಗೊಳಿಸಿದ್ದ ಹೂಟವಾಗಿತ್ತೆಂಬುದನ್ನು ಸಂಶಯಾತೀತವಾಗಿ ದೃಢಪಡಿಸುತ್ತವೆ. ಬಾಬರಿ ಮಸೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಿಕ್ಕೆಲ್ಲ ವರದಿಗಳಿಗಿಂತಲೂ ಹಲವು ಪಟ್ಟು ಹೆಚ್ಚು ವಿಶ್ವಾಸಾರ್ಹ ದಾಖಲೆಯಾಗಿ ಪರಿಣಮಿಸಿರುವ ಈ ಕುಟುಕು ಕಾರ್ಯಾಚರಣೆಯ ಕೆಲವೊಂದು ಮಹತ್ವದ ತುಣುಕುಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದ್ದು ಇವನ್ನು ಎ.ಜಿ.ನೂರಾನಿಯವರ ಕೃತಿ **Destruction of the Babri Masjid: A National Dishonour** ನಿಂದ ಉದ್ಧರಿಸಲಾಗಿದೆ.



• ಬಾಬರಿ ಮಸೀದಿ ಧ್ವಂಸ ಕೃತ್ಯದ ಪಿತೂರಿಯನ್ನು ವಿಶ್ವ ಹಿಂದೂ ಪರಿಷತ್ತು ಮತ್ತು ಶಿವಸೇನೆ ಸ್ವತಂತ್ರವಾಗಿ ರೂಪಿಸಿದ್ದವು. ವಿಹಿಂಪ 1200 ಆರೆಸ್ಸೆಸ್ ಕಾರ್ಯಕರ್ತರ 'ಲಕ್ಷ್ಮಣ ಸೇನೆ'ಯನ್ನು ಸಿದ್ಧಗೊಳಿಸಿದ್ದರೆ ಶಿವಸೇನೆಯ ವತಿಯಿಂದ 'ಪ್ರತಾಪ ಸೇನೆ' ಎಂಬ ತುಕಡಿಯನ್ನು ನಿಯೋಜಿಸಲಾಗಿತ್ತು. ಇದಲ್ಲದೆ ಮಸೀದಿ ಕೆಡವಲೆಂದೆ ಒಂದು ಪ್ರತ್ಯೇಕ ಆತ್ಮಹತ್ಯಾ ದಳವನ್ನು ಸಿದ್ಧಗೊಳಿಸಿ ಅದಕ್ಕೆ 'ಬಲಿದಾನಿ ಜಾಥಾ' ಎಂಬ ಹೆಸರಿಡಲಾಗಿತ್ತು.

• 'ಆಪರೇಷನ್ ಜನ್ಮಭೂಮಿ'ಯಲ್ಲಿ ಒಂದು ಕಡೆ ಸಾಕ್ಷಿ ಮಹಾರಾಜ್ ಜೊತೆ ನಡೆಸಿದ ಸಂಭಾಷಣೆಯ ವಿವರಗಳಿವೆ. ಈ ಹೊತ್ತು ಉತ್ತರ ಪ್ರದೇಶದ ಉನ್ನಾವೊ ಕ್ಷೇತ್ರದ ಬಿಜೆಪಿ ಸಂಸದನಾಗಿರುವ ಸ್ವಾಮಿ ಸಚ್ಚಿದಾನಂದ ಸಾಕ್ಷಿ ಮಹಾರಾಜರ ಹೆಸರು ಕೇಳದವರು ತೀರ ವಿರಳ ಎನ್ನಬಹುದು. "ಗೋಡ್ಸೆ ದೇಶಭಕ್ತ", "ಮದ್ರಸಗಳಲ್ಲಿ ಭಯೋತ್ಪಾದನೆ ಕಲಿಸಲಾಗುತ್ತದೆ", "ಹಿಂದೂ ಸ್ತ್ರೀಯರು ಕನಿಷ್ಠ ನಾಲ್ಕು ಮಕ್ಕಳನ್ನು ಹಡೆಯಬೇಕು", "ಮತಾಂತರ ಮತ್ತು ಗೋಹತ್ಯೆ ಮಾಡುವವರನ್ನು ನೇಣಿಗೇರಿಸುವ ಕಾನೂನು ತರಬೇಕು" ಮೊದಲಾದ ನುಡಿಮುತ್ತುಗಳ ಒಡೆಯನೀತ! ಪ್ರಸ್ತುತ ಸಂದರ್ಶನದಲ್ಲಿ ತಾನು ಚಳವಳಿಯ ನಾಲ್ವರು ಹೀರೊಗಳಲ್ಲೊಬ್ಬನೆಂದು ಹೇಳಿಕೊಳ್ಳುವ ಸಾಕ್ಷಿ ಮಹಾರಾಜ್ ಉಳಿದ ಮೂವರನ್ನು ಅಡ್ವಾನಿ, ಕಲ್ಯಾಣ್ ಸಿಂಗ್ ಮತ್ತು ಉಮಾಭಾರತಿ ಎಂದು ಹೆಸರಿಸಿದ್ದಾರೆ. 1990ರ ಅಕ್ಟೋಬರ್ 30ರಂದು ಮಸೀದಿ ಕೆಡವುವ ವಿಫಲ ಯತ್ನ ನಡೆದಿದ್ದ ವೇಳೆ ಗುಂಡೇಟಿಗೆ ಬಲಿಯಾದ ಕರಸೇವಕರ ಸಾವಿಗೆ ಅಶೋಕ್ ಸಿಂಘಾಲರೇ ಹೊಣೆ ಎನ್ನುವ ಈತ, ಮಹಾರಾಜ್ ವಾಮದೇವ ಎಂಬಾತನನ್ನು ಉದ್ದೇಶಿಸಿ ಸಿಂಘಾಲ್ ಹೇಳಿದಂಥಾ "ಕೆಲವು ಜನರಾದರೂ ಸಾಯದಿದ್ದರೆ ಚಳವಳಿಗೆ ಆವೇಗ ಬರದು" ಎಂಬ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾರೆ (ಪುಟ 452).

• ಸಾಕ್ಷಿ ಮಹಾರಾಜ್ ಹೇಳಿರುವಂತೆ 1992ರಲ್ಲಿ ಈತ ಮಹಾಭಾರತದ ಸಂಜಯನಂತೆ "ಯುದ್ಧಭೂಮಿ"ಯಿಂದ ಕ್ಷಣಕ್ಷಣದ ವರ್ತಮಾನಗಳನ್ನು ರಾಜ್ಯದ ಅಂದಿನ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್‌ರಿಗೆ (ಹಾಟ್‌ಲೈನ್ ಮೂಲಕ) ರವಾನಿಸುತ್ತಿದ್ದರು. ಪೇಜಾವರರನ್ನು ಉಡುಪಿಯ ಶಂಕರಾಚಾರ್ಯ ಎಂದು ಕರೆಯುವ ಸಾಕ್ಷಿ ಮಹಾರಾಜ್, ಪೇಜಾವರ ಸ್ವಾಮಿ ಮತ್ತು (ಅಂದಿನ ಪ್ರಧಾನಿ) ನರಸಿಂಹ ರಾವ್ ಮಧ್ಯೆ ಗುರು, ಶಿಷ್ಯ ಸಂಬಂಧಗಳಿದ್ದ ವಿಚಾರವನ್ನು ಅರುಹುತ್ತಾರೆ. "ಉಡುಪಿಯ ಶಂಕರಾಚಾರ್ಯ ಜಗದ್ಗುರು ವಿಶ್ವೇಶತೀರ್ಥಜೀ ಮಹಾರಾಜ್ ನರಸಿಂಹ ರಾವ್‌ರ ಗುರು ಆಗಿದ್ದರು..... ಆ ದಿನ ನಡೆದ ಎಲ್ಲಾ ಘಟನೆಗಳಿಗೆ ಸಂಬಂಧಿಸಿದಂತೆ ನರಸಿಂಹರಾವ್‌ರ ಮನವೊಲಿಸಿದವರು ಅವರೇ...... ಉಡುಪಿಯ ಶಂಕರಾಚಾರ್ಯರು ಹಿಂದಿ ಅರಿಯದ ಮಂದಿಯನ್ನು ಅಲ್ಲಿ (ಅಯೋಧ್ಯೆಯಲ್ಲಿ) ಒಟ್ಟುಗೂಡಿಸಿದ್ದರು" ಎನ್ನುವ ಆಘಾತಕಾರಿ ಮಾಹಿತಿಯನ್ನು ಬಯಲುಗೊಳಿಸುತ್ತಾರೆ. ಮುಂದುವರಿದು, ಮಸೀದಿ ಧ್ವಂಸ ಕೃತ್ಯದ ಪ್ರತ್ಯಕ್ಷದರ್ಶಿಯಾಗಿರುವ ತಾನು ಎಲ್ಲವನ್ನೂ ಕಂಡಿರುವೆ ಎನ್ನುವ ಈತ ಮತ್ತೊಂದು ಮರ್ಮಾಘಾತಕಾರಿ ಸಂಗತಿಯನ್ನು ಬಿಚ್ಚಿಡುತ್ತಾರೆ: "ಉಡುಪಿಯ ಶಂಕರಾಚಾರ್ಯರು ಮಸೀದಿಯ ಮುಖ್ಯದ್ವಾರದ ಮೇಲೆ ನಿಂತಿದ್ದರು. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಂದ ಬಂದ ಕರಸೇವಕರು ಅಲ್ಲಿ ನೆರೆದಿದ್ದರು. ಅವರಿಗೆ ಹಿಂದಿ ಮಾತಾಡಲು ಬರುತ್ತಿರಲಿಲ್ಲ. ಕರಸೇವೆಯನ್ನು ಆರಂಭಿಸಿ ಮಸೀದಿ ಮೇಲೆ ಮೊದಲು ಹತ್ತಿದವರು ಇವರೇ......... (ಹೊ.ವೆ.) ಶೇಷಾದ್ರಿಯವರೂ ಅವರನ್ನು ತಡೆಯಲೆತ್ನಿಸಿದರು. ಆದರೆ ಉಡುಪಿಯ ಶಂಕರಾಚಾರ್ಯರು ತಮ್ಮ ಕನ್ನಡ ಭಾಷೆಯಲ್ಲಿ ಅದೇನೋ 'ಕುಡ್ಸೇವ, ಕುಡ್ಸೇವ್' ಎನ್ನುತ್ತಾ ಅವರನ್ನೆಲ್ಲ ಪ್ರಚೋದಿಸುತ್ತಿದ್ದರು." ತಾನು ಈ ವಿಷಯಗಳನ್ನೆಲ್ಲ ಲೈಬರ್‌ಹಾನ್ ಆಯೋಗಕ್ಕೂ ತಿಳಿಸಿರುವೆನೆಂದು ಆತ ಹೇಳುತ್ತಾರೆ. (ಪುಟ 454-455)

• ಇನ್ನು ಮಾಜಿ ಬಿಜೆಪಿ ಸಂಸದ ಮಹಾಂತ್ ರಾಮ್ ವಿಲಾಸ್ ವೇದಾಂತಿ ಕೋಬ್ರಾಪೋಸ್ಟ್‌ನ ಸಂದರ್ಶಕನಿಗೆ ತಿಳಿಸಿರುವಂತೆ 1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಜಮಾಯಿಸಿದ್ದ ಲಕ್ಷಾಂತರ ಕರಸೇವಕರಿಗೆ ಆತ 'ಸಂಕಲ್ಪ ವಿಧಿ' ಬೋಧಿಸುತ್ತಿದ್ದಾಗ ಉಪಸ್ಥಿತರಿದ್ದ "ಸಾಧುಸಂತ"ರಲ್ಲಿ ಶಂಕರಾಚಾರ್ಯರೂ ಒಬ್ಬರು. ಮಸೀದಿ ಧ್ವಂಸ ಪ್ರಕರಣದಲ್ಲಿ ಪೇಜಾವರ ಸ್ವಾಮಿಯ ಶಿಷ್ಯ ನರಸಿಂಹ ರಾವ್ ವಹಿಸಿದ ಪಾತ್ರದ ಕುರಿತು ಪರಮಾಣು ಬಾಂಬ್ ಒಂದನ್ನು ವೇದಾಂತಿ ಸಿಡಿಸುತ್ತಾರೆ. ಆತ ಹೇಳುತ್ತಾರೆ: "ನರಸಿಂಹರಾವ್ ಡಿಸೆಂಬರ್ 6ರಂದು ಬೆಳಗ್ಗೆ 6 ಗಂಟೆಗೆ ನನಗೆ ಫೋನ್ ಮಾಡಿದರು...... ಅವರು 15 ದಿನಗಳ ಹಿಂದೆ ನನಗೆ ಕರೆಮಾಡಿ 'ವೇದಾಂತಿಜೀ ಏನಾಗಲಿದೆ?' ಎಂದು ಕೇಳಿದ್ದರು...... ಕಟ್ಟಡದ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿರುವಿರಿ ಎಂದು ಕೇಳಿದರು...... ನಂತರ ಅದನ್ನು ಪೂರ್ತಿಯಾಗಿ ಕೆಡವಬೇಕೆಂದು ಹೇಳಿದರು." ಮಸೀದಿ ಉರುಳಿಸಿ ರಾಮ ಲಲ್ಲಾ ಮೂರ್ತಿಯನ್ನು ತಾತ್ಕಾಲಿಕ ಮಂದಿರದಲ್ಲಿ ಸ್ಥಾಪಿಸಿದ ಬಳಿಕ ರಾತ್ರಿ 1 ಗಂಟೆಗೆ ಪುನಃ ನರಸಿಂಹ ರಾವ್‌ಗೆ ಕರೆಮಾಡಿ ವಿಷಯವನ್ನು ಅರುಹಿದಾತನೂ ಇದೇ ವೇದಾಂತಿ (ಪುಟ 472-474).

ಸಾಕ್ಷಿ ಮಹಾರಾಜ್ ಮತ್ತು ರಾಮ್ ವಿಲಾಸ್ ವೇದಾಂತಿ ಹೊರಹಾಕಿರುವ ಮಾಹಿತಿಗಳು ಬೆಚ್ಚಿಬೀಳಿಸುವಂತಿವೆ. ಜಾತ್ಯತೀತತೆಯ ತತ್ವಕ್ಕೆ ಬದ್ಧವಾಗಿರಬೇಕಿದ್ದ ಕೇಂದ್ರ ಸರಕಾರದ ಪ್ರಧಾನಮಂತ್ರಿಯೆ ಮೃದು ಹಿಂದೂತ್ವದ ಪೋಷಕನಂತೆ ವರ್ತಿಸುವುದು ದೇಶದ ಸಂವಿಧಾನಕ್ಕೆ ಬಗೆದ ಘನಘೋರ ಅಪಚಾರವಲ್ಲದೆ ಇನ್ನೇನು? ದೇಶವನ್ನು ಸಾಂವಿಧಾನಿಕ ಧರ್ಮದ ಆಧಾರದಲ್ಲಿ ಮುನ್ನಡೆಸುವ ಬದಲು ಅದೇ ಜಾತೀಯತೆ, ಮತೀಯತೆಗಳ ಸಂಕುಚಿತ ವ್ಯವಸ್ಥೆಯೊಳಗೆ ಬಂಧಿಯಾಗಿ ಉಳಿಸುವುದೇ ಇಂತಹ ನಡವಳಿಕೆಗಳು. ಧರ್ಮನಿರಪೇಕ್ಷತೆಯ ಮೌಲ್ಯವನ್ನು ಸಾರ್ವತ್ರೀಕರಣಗೊಳಿಸುವುದನ್ನು ಬಿಟ್ಟು ಧರ್ಮ ಧರ್ಮಗಳ ನಡುವೆ ಅಡ್ಡ ಗೋಡೆಗಳ ನಿರ್ಮಾಣವನ್ನು ಪ್ರೋತ್ಸಾಹಿಸುವ ಇಂತಹ ನಡವಳಿಕೆಗಳನ್ನು ತಿರಸ್ಕರಿಸದಿದ್ದಲ್ಲಿ ದೇಶಕ್ಕೆ ಉಳಿಗಾಲವಿಲ್ಲ ಎಂಬುದನ್ನು ಭಾರತೀಯ ಸಮಾಜ ಮನಗಾಣಬೇಕು.

ಅರಿಷಡ್ವರ್ಗಗಳಿಂದ ದೂರವಿದ್ದು ಸಕಲ ಮನುಕುಲದ ಒಳಿತಿಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕಾದ ಯತಿಗಳು ಅಧರ್ಮದ ಕೆಲಸಗಳಲ್ಲಿ ತೊಡಗುವುದನ್ನು ಯತಿಧರ್ಮಕ್ಕೆ ಬಗೆಯುವ ಅಪಚಾರವೆಂದು ಪರಿಗಣಿಸಲಾಗುತ್ತಿದ್ದ ಕಾಲವೊಂದಿತ್ತು. ಆದರೆ ಇವತ್ತು ಎಲ್ಲವೂ ತಲೆಕೆಳಗಾಗಿರುವುದನ್ನು ಕಾಣುತ್ತಿದ್ದೇವೆ. ಜಾತಿಗೊಂದರಂತೆ ಮಠಗಳನ್ನು ಕಟ್ಟಿಕೊಂಡು ರಾಜಕಾರಣದಲ್ಲಿ ಕೈಯಾಡಿಸುತ್ತಾ; ರಾಜಕಾರಣಿಗಳನ್ನು ಓಲೈಸುತ್ತಾ; ಜಾತ್ಯತೀತ ಪ್ರಭುತ್ವಗಳಿಗೆ ಅನಧಿಕೃತ ಆಸ್ಥಾನ ಪುರೋಹಿತರಂತಿರುತ್ತಾ; ಜಾತೀಯತೆ, ಮತೀಯತೆಗಳನ್ನು ಪ್ರೋತ್ಸಾಹಿಸುತ್ತಾ ಹೊನ್ನು, ಹೆಣ್ಣು, ಮಣ್ಣು, ದೌಲತ್ತು ಎಲ್ಲವಕ್ಕೂ ಹಾತೊರೆಯುವ ಮಾರ್ಜಾಲ ಸನ್ಯಾಸಿಗಳ ಸಂಖ್ಯೆ ಗಣನೀಯವಾಗಿ ಬೆಳೆದಿದೆ. ಅತ್ತ ಯತಿ ಧರ್ಮವನ್ನೂ ಪಾಲಿಸದ ಇತ್ತ ಸಾಂವಿಧಾನಿಕ ಧರ್ಮವನ್ನೂ ಪಾಲಿಸದ ಇಂಥವರಿಂದ ದೇಶಕ್ಕೆ ಒಳಿತೊ ಕೆಡುಕೊ ಎಂಬುದನ್ನು ಭಾರತೀಯ ಸಮಾಜವೆ ನಿರ್ಧರಿಸಬೇಕು.

■ ಸುರೇಶ್ ಭಟ್ ಬಾಕ್ರಬೈಲ್

ಬ್ರಹ್ಮದ್ರವ್ಯ ಎಂಬ ಮೋಸ

...ದ್ರವ್ಯ ಅಂದರೇನು? ಈ ಪದ ಹಿಂದೂ ಭಾವುಕರನ್ನು ಬ್ರೈನ್-ವಾಶ್ ...ಸಲು ರೂಪಿಸಿರುವ ಸಂಘ ಪರಿವಾರದ ಶಬ್ದಕೋಶದಲ್ಲಿ ಹುಟ್ಟಿಕೊಂಡ ...ಪದ. ಗಂಗಾನದಿಯ ಬುಡದಲ್ಲಿ ಬ್ರಹ್ಮದ್ರವ್ಯ ಎಂಬ ನಿಗೂಢ ...ಶಕ್ತಿ ಇದೆಯಂತೆ. ಅದುವೇ ನೀರಿನಲ್ಲಿಯ ಹಾನಿಕಾರಕ ...ಣುಗಳನ್ನು ನಾಶ ಮಾಡಿ ಗಂಗಾನದಿಯ ನೀರು ಸ್ವಯಂ ಶುದ್ಧೀಕರಣ ...ವಾಗಿ ನೋಡಿಕೊಳ್ಳುತ್ತಿದೆಯಂತೆ. ಆ ನೀರಿಗೆ ವಿಶೇಷ ಔಷಧಿ ...ತ್ವ ಸೇರಿಸುತ್ತದೆಯಂತೆ. ಗಂಗೆಯ ಪಾವಿತ್ರ್ಯತೆಯನ್ನು ವೈಜ್ಞಾನಿಕವಾಗಿ ...ಹಾಗೂ ಬ್ರಹ್ಮದ್ರವ್ಯದ ಗುಟ್ಟನ್ನು ಬಿಡಿಸುವ ಸಂಶೋಧನೆಗೆ ...ಕಾರದ ಆರೋಗ್ಯ ಸಚಿವಾಲಯ ಆರ್‌ಎಸ್‌ಎಸ್ ಆಣತಿಯಂತೆ 150 ಕೋಟಿ ರೂಪಾಯಿ ಬಿಡುಗಡೆ ಮಾಡಿದೆಯಂತೆ.

...ಗ ನಿಮಿತ್ತ ನಾನು ನಾಲ್ಕು ವರ್ಷ ಕಾನ್ಪುರದಲ್ಲಿ ಇದ್ದಾಗ ಆ ...ದ್ದ ನೂರಕ್ಕೂ ಹೆಚ್ಚು ಜಾನುವಾರು ಚರ್ಮ ಹದ ಮಾಡುವ ... ಕಾನ್ಪುರದ ಹತ್ತಿರ ಹರಿಯುವ ಗಂಗಾ ನದಿಗೇ ದಿನಾಲು ...ತಮ್ಮ ಹೊಲಸು ನೀರು ಬಿಡುತ್ತಿದ್ದುದನ್ನು ನಾನು ಫ್ಯಾಕ್ಟರಿಗಳ ...ಗೆ ಹೋದಾಗ ಸ್ವತಃ ನೋಡಿದ್ದೇನೆ. ಅಲ್ಲಿಯ ಹರಿಶ್ಚಂದ್ರ ಘಾಟ್ ...ಲ್ಲೂ ಹಲವಾರು ಹೆಣಗಳನ್ನು ದಿನಾಲೂ ಅರ್ಧ ಸುಟ್ಟು ಗಂಗಾ ...ಸೆಯುತ್ತಾರೆ. ಸಾಕುಪ್ರಾಣಿಗಳ ಸಾವಿರಾರು ಶವಗಳೂ ಗಂಗೆಯನ್ನೇ ...ಸೇರುತ್ತವೆ. ಅವೆಲ್ಲಾ ಕೊಳೆತು ಉಬ್ಬಿ ತೇಲಿಕೊಂಡು ಮುಂದೆ ...ಹಾಗೂ ಹೋಗುತ್ತವೆ. ಸ್ವತಃ ವಿಶ್ವ ಆರೋಗ್ಯ ಸಂಸ್ಥೆ ...ಇಡೀ ಜಗತ್ತಿನಲ್ಲಿಯೇ ಗಂಗಾನದಿ ಅತಿ ಹೆಚ್ಚು ದೂಷಿತವಾಗಿರುವ ...ನದಿ ಕೊಟ್ಟಿದೆ.

...ಪುರದಲ್ಲಿದ್ದಾಗ ನಮ್ಮ ಆಫೀಸಿನ ಐದು ಕುಟುಂಬದವರು ...ಲು ವಾರಣಾಸಿಯ (ಕಾಶಿಯ) ವಿಶ್ವನಾಥ ದೇವಳಕ್ಕೆ ಭೇಟಿ ... ಗಂಗಾ ನೀರು ಐದು ಬಾಟಲಿಯಲ್ಲಿ ತುಂಬಿಕೊಂಡು



ನಂತರ ಅಲಹಾಬಾದಿಗೆ ಹೋಗಿ ಅಲ್ಲಿ ಗಂಗಾ ನದಿಯ ನಟ್ಟನಡುವೆ ಇರುವ ತ್ರಿವೇಣಿ ಸಂಗಮಕ್ಕೆ ದೋಣಿಯಲ್ಲಿ ಹೋಗಿ ಅಲ್ಲಿಯ ನೀರು ಸಹ ಇನ್ನೊಂದು ಬಾಟಲಿಯಲ್ಲಿ ಎಲ್ಲರೂ ತುಂಬಿಕೊಂಡು ಬಂದಿದ್ದೆವು. ಆದರೆ 15 ದಿನಗಳ ನಂತರ ದೇವರಮಂಟಪದಲ್ಲಿ ಇಟ್ಟಿದ್ದ ಎರಡೂ ಬಾಟಲಿಗಳನ್ನು ನಾವು ಬಿಸಿಲಿಗೆ ಹಿಡಿದು ನೋಡಿದಾಗ ಬಾಟಲಿಯೊಳಗೆ ನೂರಾರು ಹುಳುಗಳು ಥಕಥೈ ಡಿಸ್ಕೋ ಮಾಡುತ್ತಿದ್ದವು. ನಮ್ಮ ಆಫೀಸಿನ ಎಲ್ಲಾ ಐದು ಕುಟುಂಬಗಳದ್ದೂ ಇದೇ ಅನುಭವ. ಆದರೂ ಗಂಗಾ ನದಿಯ ನೀರು ಯಾವಾಗಲೂ ಶುದ್ಧವಾಗಿರುತ್ತದೆ ಎಂದು ಧಾರ್ಮಿಕ ಮನೋಭಾವದ ಜನರನ್ನು ಮೂರ್ಖರನ್ನಾಗಿಸಲು ಆರ್‌ಎಸ್‌ಎಸ್ ಆಣತಿಯಂತೆ ಬಿಜೆಪಿ ಸರಕಾರ 150 ಕೋಟಿ ರೂಪಾಯಿಯ ಬ್ರಹ್ಮದ್ರವ್ಯವೆಂಬ ಶಬ್ದಗಳ ಸರ್ಕಸ್ ಮಾಡುತ್ತಿದೆ. ಇದಕ್ಕೇ ಪ್ರಗತಿಪರರು ಕುಜ್ಞಾನ ಎಂಬ ಪದ ಬಳಸಿರುವುದು.

ಮೋದಿ ಸರಕಾರವು ತೆರಿಗೆದಾರರ ಹಣವಾದ 150 ಕೋಟಿ ರೂಪಾಯಿ ಬಳಸಿ ಗಂಗೆಯ ಶುದ್ಧೀಕರಣದ ಕೆಲವು ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದಿತ್ತು.

ಇನ್ನು ಮೌಢ್ಯದ ಪೆಟ್ಟಿಗೆಗಳಾದ ಕನ್ನಡ ಟಿವಿ ಸುದ್ದಿವಾಹಿನಿಗಳು ಈ ಬ್ರಹ್ಮದ್ರವ್ಯ ಎಂಬ ಶಬ್ದವನ್ನು ಹಿಡಿದುಕೊಂಡು ವಿಸ್ಮಯ-ಕೌತುಕ-ನಿಗೂಢ-ರಹಸ್ಯ ಎಂದು ಅರಚುತ್ತಾ ಅದೆಷ್ಟು ಜಗಿಯಲಿವೆಯೋ ಆ ಗಂಗಾದೇವಿಗೇ ಗೊತ್ತು. ಗಂಗಾನದಿಗೆ ವರ್ಷವಿಡೀ ಹಿಮಾಲಯದಿಂದಲೇ ಹೊಸ ನೀರು ಪೂರೈಕೆಯಾಗುತ್ತದೆ. ಕಡು ಬೇಸಿಗೆಯಲ್ಲೂ ಹಿಮಾಲಯದ ಹಿಮ ಕರಗಿ ಭಾರಿ ಪ್ರಮಾಣದ ಹೊಸ ಶುದ್ಧ ನೀರು ಗಂಗೆಗೆ ಹರಿದುಬರುತ್ತಲೇ ಇರುವುದರಿಂದ ಭಾರತದ ಇತರ ನದಿಗಳಂತೆ ಗಂಗೆ ಬೇಸಿಗೆಯಲ್ಲಿ ಒಣಗುವುದಿಲ್ಲ. ಹಾಗಾಗಿ ಉತ್ತರಾಂಚಲ ಮತ್ತು ಪಶ್ಚಿಮ ಉತ್ತರ ಪ್ರದೇಶದಲ್ಲಿ ಹರಿಯುವ ಗಂಗೆಯು ಯಾವಾಗಲೂ ಹಿಮಾಲಯದ ಶುದ್ಧ ನೀರು ಹೊಂದಿರುತ್ತದೆ. ಆದರೆ ಅದು ಒಮ್ಮೆ ಕಾನ್ಪುರ ಮುಟ್ಟಿದ ಮೇಲೆ ನೂರಾರು ಚರ್ಮದ ಫ್ಯಾಕ್ಟರಿಗಳ ತ್ಯಾಜ್ಯದಿಂದ ಮಲಿನಗೊಳ್ಳಲು ಶುರುವಾಗಿ ಬಿಹಾರ ಮುಟ್ಟುವಾಗ ಘೋರವಾಗಿ ಮಲಿನವಾಗಿರುತ್ತದೆ. ಇದನ್ನು ಈಗಿನ ಕೇಂದ್ರ ಸರಕಾರ ಮುಚ್ಚಿಟ್ಟು ಬ್ರಹ್ಮದ್ರವ್ಯದ ರಹಸ್ಯ ಬಿಡಿಸುವ ಕುಜ್ಞಾನದ ಸಂಶೋಧನೆ ನಡೆಸುತ್ತಿರುವುದು ವಿಷಾದಕರ. ಭಾವುಕ ಜನರ ಮೇಲೆ ಮನೋವೈಜ್ಞಾನಿಕ ಪರಿಣಾಮ ಬೀರಿ ಅವರನ್ನು ತನ್ನ ಕರಡಿ ಅಪ್ಪುಗೆಗೆ ತೆಗೆದುಕೊಳ್ಳುವ ಇಂತಹ ನೂರಾರು ಕುಜ್ಞಾನಗಳು ಆರ್‌ಎಸ್‌ಎಸ್‌ನ ಗುಪ್ತ ಬತ್ತಳಿಕೆಯಲ್ಲಿದ್ದು ಅವು ಒಂದೊಂದಾಗಿ ಹೊರಬಂದು ಮುಗ್ಧ ಜನರ ಬ್ರೈನ್ ವಾಶ್ ಮಾಡಲು ಬಳಕೆಯಾಗಲಿವೆ.

■ ಜೆ. ರವಿಕಿರಣ, ಮೈಸೂರು


ನರೇಂದ್ರ ಮೋದಿಯ ಆತ್ಮರತಿ

ಇವತ್ತು ಭಾರತದ ಪ್ರಧಾನಿಯಾಗಿರುವ ನರೇಂದ್ರ ಮೋದಿಯ ವ್ಯಕ್ತಿತ್ವವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿದ ಮೊದಲಿಗರೆಂದರೆ ಆಶೀಶ್ ನಂದಿ. ಸಮಾಜಶಾಸ್ತ್ರಜ್ಞರಾಗಿರುವುದರ ಜೊತೆಗೆ ಮನಶಾಸ್ತ್ರದಲ್ಲೂ ತರಬೇತು ಪಡೆದಿರುವವರಾದ ಆಶೀಶ್, ಮೋದಿಗೆ ಸರ್ವಾಧಿಕಾರಿ ವ್ಯಕ್ತಿತ್ವದ ಮಾನದಂಡಗಳ ಪೈಕಿ ಹೆಚ್ಚುಕಮ್ಮಿ ಎಲ್ಲವೂ ಅನ್ವಯವಾಗುತ್ತವೆಂದು ಸುಮಾರು ಮೂವತ್ತು ವರ್ಷಗಳ ಹಿಂದೆಯೆ ಹೇಳಿದ್ದರು. ಇತ್ತೀಚೆಗೆ ಕ್ಯಾಚ್ ನ್ಯೂಸ್‌ನ ಸಂಪಾದಕರಾದ ಭರತ್ ಭೂಷಣ್ (BHARAT BHUSHAN hbharatitis) ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಮೋದಿಯ ನಡವಳಿಕೆಯನ್ನು ವಿಶ್ಲೇಷಿಸಿ ಆತನ ವ್ಯಕ್ತಿತ್ವದ ಇನ್ನೊಂದು ಮಗ್ಗುಲನ್ನು ಪರಿಚಯಿಸಿದ್ದಾರೆ. ಭರತ್ ಅವರ ಲೇಖನದ ಪೂರ್ಣಪಾಠ ಇಲ್ಲಿದೆ:

"ಬ್ರಿಟನ್ ಪ್ರವಾಸದಿಂದ ಚೂರು ನವತಾರುಣ್ಯ ಪಡೆದುಕೊಂಡ ಮೋದಿ ಇದೀಗ ಭಾರತಕ್ಕೆ ವಾಪಸ್ಸಾಗಿದ್ದಾನೆ. ಬ್ರಿಟನ್‌ನ ವೆಂಬ್ಲಿ ಕ್ರೀಡಾಂಗಣದಲ್ಲಿ ಉಪಸ್ಥಿತರಿದ್ದ ಬ್ರಿಟಿಷ್ ಪ್ರಧಾನಿ ಮತ್ತು ಅನಿವಾಸಿ ಭಾರತೀಯರು ಮೋದಿ ಮೇಲೆ ಪ್ರಶಂಸೆ, ಓಲೈಕೆ ಮತ್ತು ಮುಖಸ್ತುತಿಗಳ ಸುರಿಮಳೆಗರೆದಿರುವುದು ಆತನ ಆಡಂಬರಯುತ ಪ್ರದರ್ಶನದ ಒಲವಿಗೆ ಗೊಬ್ಬರ ಎರೆದಂತಾಗಿದೆ. ವೆಂಬ್ಲಿಯಲ್ಲಿ ನೆರೆದಿದ್ದ 60,000 ಪ್ರೇಕ್ಷಕರನ್ನುದ್ದೇಶಿಸಿ "ಅಚ್ಛೇ ದಿನ್ ಆಯೆಂಗೆ, ಜರೂರ್ ಆಯೆಂಗೆ" ಎಂಬ ಘೋಷಣೆಯನ್ನು ಬ್ರಿಟಿಷ್ ಪ್ರಧಾನಿಯಿಂದ ಮಾಡಿಸಿ ಅವರ ಜೈಕಾರದ ಕೂಗಿಗೆ ಬೀಗಿ ತಲೆದೂಗುವ ಅಗತ್ಯ ಏನಿತ್ತೆಂದು ಊಹಿಸಲು ಕಷ್ಟವಿಲ್ಲ, ಬಿಹಾರದ ಮತದಾರರು ನೀಡಿದ ಚಾಟಿಯೇಟಿನ ನೋವನ್ನು ಮರೆಸುವಂಥಾ ಆ ಜಯಘೋಷ ಕೇಳಿ ಖುಷಿಯಿಂದ ಉಬ್ಬಿ "ಧನ್ಯವಾದಗಳು, ವೆಂಬ್ಲಿ" ಎಂದ ವಿದ್ಯಮಾನವೂ ನಡೆಯಿತು.


18 ತಿಂಗಳ 'ರಾಜ್ಯಭಾರ'ದ ನಂತರ ಇಂದು ಮೋದಿಯ ಇಮೇಜು ಕಳೆಗುಂದುತ್ತಿರುವ ಲಕ್ಷಣಗಳು ಗೋಚರಿಸತೊಡಗಿವೆ. ದೆಹಲಿಯ ಬಳಿಕ ಬಿಹಾರದ ಮತದಾರರು ಕೂಡ ಮೋದಿ ನಾಯಕತ್ವವನ್ನು ತಿರಸ್ಕರಿಸಿರುವ ಸತ್ಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. 2014ರ ಚುನಾವಣೆಗಳ ಕಾಲದಲ್ಲಿ ಬಹಳಷ್ಟು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದ ಮೋದಿಯಲ್ಲಿ ಇಂದು ಆ ಆಕರ್ಷಣೆ ಉಳಿದಿಲ್ಲವೆಂದೇ ಹೇಳಬಹುದು. ಹೀಗಿದ್ದರೂ ಆತನ ಕಥೆ ಮುಗಿದುಹೋಯಿತೆಂದು ಈಗಲೆ ಹೇಳಲಾಗದು. ಆದರೆ ಆತನ ಕಲ್ಪಿತ ರಾಜಕೀಯ ವ್ಯಕ್ತಿತ್ವವನ್ನು ಕಳಚಲು ಬಹುಶಃ ಇದು ಸಕಾಲ.

ಮೋದಿ ರಾಜಕಾರಣಕ್ಕೆ ಇಳಿದುದು ದುಡ್ಡಿಗೋಸ್ಕರ ಅಲ್ಲವಾದರೂ ಆತನಿಗೆ ಅಧಿಕಾರ, ಪ್ರತಿಷ್ಠೆ, ಸ್ಥಾನಮಾನ, ವರ್ಚಸ್ಸುಗಳ ಬಗ್ಗೆ ಅತಿಯಾದ ಮೋಹ ಇರುವಂತೆ ತೋರುತ್ತದೆ. ಆತನನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ದೈವಸಂಕಲ್ಪದಂತೆ ಭಾರತೀಯರ ಉದ್ಧಾರಕ್ಕಾಗೆಂದು ಜನ್ಮವೆತ್ತಿರುವ ಹೀರೊ ತಾನೆಂಬ ಆತನ ಡಾಂಭಿಕ ನಿಲುವನ್ನು ಕಂಡು ಅಚ್ಚರಿ ಎನಿಸುತ್ತದೆ. ಆತ ಗುಜರಾತಿನಲ್ಲಿ ಮಾತಾಡಲಿ, ರಾಷ್ಟ್ರಮಟ್ಟದಲ್ಲೆ ಮಾತಾಡಲಿ, ಆತನ ಸಾರ್ವಜನಿಕ ಭಾಷಣಗಳೆಲ್ಲವೂ ಇತರರು ವಿಫಲರಾಗಿರುವಲ್ಲಿ ತಾನೊಬ್ಬನೆ ಹೇಗೆ ಸಫಲನಾಗಬಲ್ಲೆ ಎಂಬ ಭರವಸೆಗಳಿಂದ ಕೂಡಿರುತ್ತವೆ. ಭಾರಿ ಶ್ರದ್ಧಾಪೂರ್ವಕವಾಗಿ ಆಯೋಜಿಸಲಾಗುವ ನ್ಯೂಯಾರ್ಕಿನ ಮ್ಯಾಡಿಸನ್ ಗಾರ್ಡನ್, ಸಿಡ್ನಿಯ ಆಲ್ಫೋನ್ಸ್ ಅರೀನ ಅಥವಾ ಲಂಡನ್‌ನ ವೆಂಬ್ಲಿ ಸ್ಟೇಡಿಯಂಗಳಂಥಾ ರಾಕ್‌ಸ್ಟಾರ್ ಮಾದರಿಯ ಶೋಗಳು ಆತನ ಅಪರಿಮಿತ ಪ್ರಚಾರಪ್ರಿಯತೆಯ ನಿದರ್ಶನಗಳಾಗಿವೆ. ಇವುಗಳ ಆಯೋಜನೆ, ಖರ್ಚುವೆಚ್ಚ ಇತ್ಯಾದಿಗಳನ್ನು ವಿದೇಶ ವ್ಯವಹಾರಗಳ ಮಂತ್ರಾಲಯ ಅಥವಾ ಆತಿಥೇಯ ಸರಕಾರಗಳು ನೋಡಿಕೊಳ್ಳುತ್ತವೆಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಅದೆಲ್ಲವೂ ಆತನ ಹೊಗಳುಭಟ ಪಡೆಗಳಿಂದ ನಡೆಯುತ್ತದೆ. ತನ್ನ ಈ ಖಾಸಗಿ ಕಾರ್ಯಕ್ರಮಗಳಿಗೆ ಆತ ಈ ಹಿಂದೆ ತನ್ನನ್ನು ಕ್ಯಾರೆ ಅನ್ನದ ಪಾಶ್ಚಿಮಾತ್ಯ ನಾಯಕರನ್ನು ಕರೆಯುತ್ತಿರುವುದರ ಮರ್ಮವೇನು? ಅವರು ತನ್ನ ವರ್ಚಸ್ಸನ್ನು ಗುರುತಿಸಬೇಕು ಎಂಬ ಭಾವನೆ ಇರಬಹುದೇ? ಮೋದಿ ಆಗಾಗ ತಾನು ಹಿಂದೊಮ್ಮೆ ಚಾಯ್‌ವಾಲ ಆಗಿದ್ದನೆಂದು ಹೇಳುತ್ತಿರುವುದು ತಾನೀಗ ದೇಶದ ಪ್ರಧಾನಿ ಸ್ಥಾನಕ್ಕೇರಲು ಸಮರ್ಥನಾದೆ ಎನ್ನುವುದಕ್ಕೆ ಒತ್ತು ನೀಡಲೆಂದು. ತಾನು ಕೆಳಮಟ್ಟದಿಂದ ಮೇಲೆ ಬಂದವನಾಗಿರುವುದರಿಂದ ಹೆಚ್ಚು ವಿದ್ಯಾವಂತ ರಾಜಕಾರಣಿಗಳಿಗೆ ಸಿಗುವುದಕ್ಕಿಂತ ಹೆಚ್ಚು ಮೆಚ್ಚುಗೆ ತನಗೆ ಸಿಗಬೇಕೆಂಬ ಅದಮ್ಯ ಬಯಕೆ ಆತನದು.



ಆತನ ಡಾಂಭಿಕತೆಯ ಪ್ರದರ್ಶನಗಳು ಸಾಕಷ್ಟು ನಡೆದಿವೆ. ಆತನ ವಿಶೇಷ ದಿರಿಸುಗಳು, ತೋಳುಗಳನ್ನೆತ್ತಿ ಮಾತಾಡುವ ಶೈಲಿ, ಸಂಸತ್ತಿನ ಮೆಟ್ಟಲುಗಳಿಗೆ ತಲೆಬಾಗಿ ನಮಸ್ಕರಿಸಿದುದು, ತಾಯಿಯನ್ನು ಸ್ಮರಿಸುತ್ತ ಕಂಬನಿ ಮಿಡಿದುದು ಮುಂತಾದ ಘಟನೆಗಳಿಂದು ದಂತಕಥೆಗಳಾಗಿವೆ. ಆತನೋರ್ವ ಪಕ್ಕಾ ನಟ ಎನ್ನುವುದು ಹಲವರ ಅಭಿಪ್ರಾಯ. ಇದಕ್ಕೆ ಕಾರಣವೂ ಇಲ್ಲದಿಲ್ಲ, ಟಿವಿ ಕ್ಯಾಮರಾಗಳ ಮುಂದೆ ಹೇಗೆ ನಿಲ್ಲಬೇಕು, ಎಲ್ಲಿ ನಿಲ್ಲಬೇಕು, ಯಾವ ಬಣ್ಣಗಳಲ್ಲಿ ಕಾಣಿಸಿಕೊಳ್ಳಬೇಕು, ಯಾವ ಭಾವನೆಗಳನ್ನು ತೋರಬೇಕು ಎಂಬುದನ್ನೆಲ್ಲ ಮೋದಿ ಚೆನ್ನಾಗಿ ಅರಿತಿದ್ದಾನೆ. ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಟಿವಿ ಸಂದರ್ಶನಗಳಿಗೆಂದೆ ಮನೆಯಲ್ಲೊಂದು ವಿಶೇಷ ಸುಸಜ್ಜಿತ ಸ್ಟೂಡಿಯೊ ನಿರ್ಮಿಸಿಕೊಂಡಿದ್ದ. ಆತ ಕೂರುವ ಕುರ್ಚಿಯನ್ನು ಕ್ಯಾಮರಾಗೆ ಸರಿಯಾದ ಕೋನ ಸಿಗುವ ಹಾಗೆ ಸೂಕ್ತ ಜಾಗದಲ್ಲಿ ಇರಿಸಲಾಗಿತ್ತು, ದೊಡ್ಡ ದೊಡ್ಡ ವಿಶ್ವನಾಯಕರೊಂದಿಗೆ ಜೋಕಾಲಿಯಲ್ಲಿ ಕೂರುವುದು, ಚರಕದಲ್ಲಿ ನೂಲುವುದು, ದೋಣಿ ವಿಹಾರ, ಚಹಾಕೂಟಗಳು ಇವೆಲ್ಲವೂ ಪ್ರಚಾರದ ಗಿಮಿಕ್ಕುಗಳಲ್ಲದೆ ಇನ್ನೇನೂ ಅಲ್ಲ, ವೀಕ್ಷಕರೆಲ್ಲ ಆತ ಇಂಥಾ ಗಣ್ಯ ವ್ಯಕ್ತಿಗಳ ಜೊತೆಗಿರುವುದನ್ನು ನೋಡಿ ನಿಬ್ಬೆರಗಾಗಿ ಆತನನ್ನು ಮೆಚ್ಚಬೇಕೆಂಬುದೆ ಇದರ ಉದ್ದೇಶ. ವಿಶ್ವ ನಾಯಕರ ಜೊತೆ ಸೆಲ್ಫೀ ಕ್ಲಿಕ್ಕಿಸುವ ಹಿಂದೆಯೂ ಇದೇ ಉದ್ದೇಶ ಅಡಗಿದೆ. ಸ್ವಂತ ಹೆಸರಿನ ಸೂಟು, ಬಣ್ಣಬಣ್ಣದ ಜಾಕೆಟ್ಟುಗಳು, ದಿನಕ್ಕೆ ಹಲವು ಬಾರಿ ಬಟ್ಟೆ ಬದಲಾಯಿಸುವುದು ಇವೆಲ್ಲ ಆತ್ಮರತಿಯ ಲಕ್ಷಣಗಳಾಗಿವೆ.

ರಾಜಕಾರಣದ ಏಣಿಯಲ್ಲಿ ತುತ್ತತುದಿ ತಲುಪಿದ ಬಳಿಕ ಅಲ್ಲಿ ಗಟ್ಟಿಯಾಗಿ ತಳವೂರುವಂತೆ ಮಾಡಿರುವುದು ಆತನ ನಿಷ್ಕರುಣೆ, ಕಣ್ಣಲ್ಲಿ ನೆತ್ತರಿರದ ಗುಣ. ಆತ ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ವರ್ತಿಸಿದ ರೀತಿಯನ್ನು ಪರೀಕ್ಷಿಸಿದಾಗ ಆತ ಇತರರ ಗುಣದೋಷಗಳನ್ನು ಬಳಸಿಕೊಂಡು ತನ್ನ ಗುರಿ ಸಾಧಿಸುವವನೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅಂದು ಸ್ವಹಿತಾಸಕ್ತಿಗಾಗಿ ಪಕ್ಷವನ್ನು ಒಡೆದುದಷ್ಟೆ ಅಲ್ಲ, ಮುಖ್ಯಮಂತ್ರಿಯಾಗಲು ಸಹಾಯ ಮಾಡಿದ್ದ ಮಂತ್ರಿಗಳನ್ನೆ ನಂತರ ಕಿತ್ತುಹಾಕಿದ ವ್ಯಕ್ತಿ ಈತ. ಪ್ರಧಾನಿಯಾದ ನಂತರವೂ ಮೋದಿ ಮಾಡಿದ ಮೊದಲ ಕೆಲಸವೆಂದರೆ ತನ್ನನ್ನು ಪ್ರಶ್ನಿಸುವ ವ್ಯಕ್ತಿಗಳನ್ನು ಮತ್ತು ರಾಜಕಾರಣದಲ್ಲಿ ತನಗಿಂತ ಹೆಚ್ಚು ಅನುಭವ ಉಳ್ಳವರನ್ನು ಮೂಲೆಗುಂಪು ಮಾಡಿರುವುದು. 2002ರ ಗಲಭೆಗಳು ಮತ್ತು ಶಂಕಿತ ಭಯೋತ್ಪಾದಕರ ಎನ್ಕೌಂಟರ್ ಸಾವುಗಳು ಅವನಲ್ಲಿ ಪರಾನುಭೂತಿ ಇಲ್ಲ, ಅವನು ಇತರರ ನೋವನ್ನು, ದುಃಖವನ್ನು ಅನುಭವಿಸಲಾರ ಎಂಬುದಕ್ಕೆ ಅತಿದೊಡ್ಡ ಪುರಾವೆಯಾಗಿ ನಮ್ಮ ಮುಂದೆ ನಿಲ್ಲುತ್ತವೆ. ಈ ನೈತಿಕ ಅಪೌಷ್ಟಿಕತೆ ಪ್ರಧಾನಿಯಾದ ಬಳಿಕವೂ ಮುಂದುವರಿದಿದೆ. ವಿಚಾರವಾದಿಗಳ ಹತ್ಯೆ, ದಾದ್ರಿ ಕಗ್ಗೊಲೆಯಂತಹ ಅಸಹಿಷ್ಣುತೆಯ ಘಟನೆಗಳಿಗೆ ಆತ ತೋರುವ ಮಂದಗತಿಯ ಪ್ರತಿಕ್ರಿಯೆಗಳನ್ನು ಕಂಡಾಗ ಆತನಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಅದೇನೋ ಹಿಂಜರಿಕೆ ಇರುವಂತಿದೆ. ಹೀಗಿದ್ದರೂ ಈ ವ್ಯಕ್ತಿ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಸಂವಿಧಾನವನ್ನು ಹೊಗಳುತ್ತಾನೆ, ಭಾರತದ ವೈವಿಧ್ಯತೆಯನ್ನು, ಪ್ರಜೆಗಳ ಸ್ವಾತಂತ್ರ್ಯವನ್ನು ಸಂರಕ್ಷಿಸುವ ಬಗ್ಗೆ ಮಾತಾಡುತ್ತಾನೆ. ಹೀಗೆ ವಿಶ್ವದ ಮುಂದೆ ಮುತ್ಸದ್ದಿಯಂತೆ ತೋರಿಸಿಕೊಂಡರೂ ತನ್ನೂರಿಗೆ ವಾಪಸ್ಸಾದ ತಕ್ಷಣ ಮುಖವಾಡ ಕಳಚಿಕೊಳ್ಳುತ್ತದೆ.



ಇಲ್ಲಿ ಜನರು ಇವನೋರ್ವ ನಿರಂಕುಶ ... ಚಲಾಯಿಸುವ ವ್ಯಕ್ತಿ ಕಲ್ಲೆದೆಯ ಮನುಷ್ಯ ಸ್ವಾರ್ಥಿ ... ತಿಳಿದಿದ್ದಾರೆ; ಭಯಪಡುತ್ತಾರೆ.

ಸಂಸತ್ತಿನ ಕಲಾಪಗಳು ಸುಸೂತ್ರವಾಗಿ ನಡೆ... ದರಿಂದ ಆತನ ಆರ್ಥಿಕ ಸುಧಾರಣೆಗಳ ... ಹಿನ್ನಡೆಯಾಗಿದೆ. ಮೋದಿ ಪ್ರತಿಪಕ್ಷಗಳೊಂದಿ... ತನ್ನದೇ ಸಂಸದರ ಜೊತೆಗೂ ದುರಹಂಕಾ... ಬಿಗುಮಾನ ತೋರ್ಪಡಿಸುತ್ತಾನೆ. ತಮ್ಮೊಂದಿ... ಮಾಸ್ತರನಂತೆ ವರ್ತಿಸುವ ಈತನನ್ನು ಪಕ್ಷದ ... ಅದು ಹೇಗೋ ಸಹಿಸಿಕೊಳ್ಳುತ್ತಿದ್ದಾರೆ. ಮೋ... ಟೀಕೆಗಳನ್ನು ಆಲಿಸುವ ಸಾಮರ್ಥ್ಯದ ಅಭಾವ ಇ... 'ಮನ್ ಕಿ ಬಾತ್' ಎಂಬ ಅತ್ಯಂತ ನೀರಸ ಹ... ರೇಡಿಯೊ ಕಾರ್ಯಕ್ರಮದ ಮೂಲಕ ಆತ ... ಒರಟೊರಟಾದ ಚಿಂತನೆಗಳು ಭವಿಷ್ಯದ ಪಿ... ಆತನೋರ್ವ ಅನುಕರಣೀಯ ಮಾದರಿ ಎಂದು ... ರೀತಿಯಲ್ಲಿವೆ. ಇದನ್ನಾತ ಕೇವಲ ಮಕ್ಕಳ ... ಮಾಡುವ ವಿದ್ಯಾರ್ಥಿಗಳು ಅಥವಾ ... ಶ್ರೋತೃಗಳಂತಹ ಭಯವಿಸ್ಮಿತ ಪ್ರೇಕ್ಷಕರಿಂದ ... ಗಳಿಸುವಂತಹ ಸನ್ನಿವೇಶಗಳಲ್ಲಿ ಮಾಡಲು ಇಷ್ಟ... ಏಕೆಂದರೆ ಅಲ್ಲಿ ಯಾರೊಬ್ಬನಿಗೂ ಪ್ರಶ್ನಿಸುವ ... ಇರುವುದಿಲ್ಲ.

ಜನ ತನ್ನ ಕಟ್ಟುಕತೆಯನ್ನು ನಂಬಬೇ... ಮೋದಿಯ ಬಯಕೆ. ಆದರೆ ಕಳೆದ 18 ... ಅವಧಿಯಲ್ಲಿ ಆತನ ಇಮೇಜು ಕುಸಿದಿದೆ. ದೇಶ... ಸ್ಥಿತಿಯಲ್ಲಿ ಪವಾಡಸದೃಶ ಅಭಿವೃದ್ಧಿಯಾಗಲಿ... ನಿರೀಕ್ಷೆ ಇಟ್ಟುಕೊಂಡಿದ್ದ ಜನರಿಗೂ ಆತನನ್ನು ... ಕಾರ್ಪೋರೇಟುಗಳಿಗೂ ನಿರಾಸೆಯಾಗಿದೆ. ಉದ್... ಸೃಷ್ಟಿಯಾಗುತ್ತವೆಂದು ನಂಬಿದವರು ಕಾದವ... ಆತ ಕೊಟ್ಟ ಭರವಸೆಗಳನ್ನು ನಂಬಿ 15 ಲಕ್ಷ ... ನೇರವಾಗಿ ಜೇಬಿಗೆ ಸುರಿಯುತ್ತದೆಂದು ಬಗೆದವರ... ಕಾಸಿಗಾಗಿ ಕಿಸೆ ತಡಕಾಡಿದ್ದೇ ಬಂತು. ಪರಿ... ಇವರಲ್ಲೆಲ್ಲ ಮೊದಲಿದ್ದ ಉತ್ಸಾಹ ಈಗ ಕಾಣುತ್ತಿ... "ಮೋದಿ, ಮೋದಿ" ಅಂತ ಬೊಬ್ಬೆ ಹೊಡೆ... ಯಾರು? ಯಾವತ್ತೋ ಸ್ವದೇಶ ಬಿಟ್ಟು ವಿ... ತೆರಳಿ ಅಲ್ಲಿನ ಪ್ರಜೆಗಳಾಗಿ ನೆಲಸಿರುವ ... ಭಾರತೀಯರು. ಬಿಹಾರ ಚುನಾವಣೆಗ... ದುರ್ಬಲನಾಗಿರುವ ಮೋದಿಗೆ ಇನ್ನಷ್ಟು ಸಂಕಷ್ಟ... ಕಾದಿವೆ. 2016ರ ಮೇ ಮತ್ತು ಜೂನ್ ತಿಂಗಳ... ಬಂಗಾಳ, ಅಸ್ಸಾಮ್, ಕೇರಳ, ತಮಿಳ್ನಾಡು, ... ರಾಜ್ಯಗಳಲ್ಲಿ; 2017ರ ಮಾರ್ಚ್ ತಿಂಗಳಲ್ಲಿ ... ಮಣಿಪುರ, ಗೋವಾಗಳಲ್ಲಿ; ಇದಾದ ಎರಡು ತಿ... ಉತ್ತರ ಪ್ರದೇಶ ಮತ್ತು ಉತ್ತರಾಖಂಡಗಳಲ್ಲಿ ಚು... ನಡೆಯಲಿವೆ. ಪ್ರತಿಪಕ್ಷಗಳು ಮೈತ್ರಿಕೂಟದಿಂದಾಗು... ಪಾಠ ಕಲಿತಿರುವ ಸಂದರ್ಭದಲ್ಲಿ ಬಿಜೆಪಿಗೆ ... ಮೋದಿಯನ್ನು ಬಳಸಿಕೊಂಡು ದೊಡ್ಡ ರಾ... ಗೆಲ್ಲುವೆನೆಂಬ ನಿರೀಕ್ಷೆ ಇಟ್ಟುಕೊಳ್ಳಲು ಕಷ್ಟವಾಗ... ಒಂದು ವೇಳೆ ಅದು ಪಶ್ಚಿಮ ಬಂಗಾಳ, ... ಪಂಜಾಬ್, ಉತ್ತರ ಪ್ರದೇಶಗಳಲ್ಲಿ ಸೋತಿ... ಮೋದಿಯ ಪ್ರಭಾವಳಿ ಇನ್ನಷ್ಟು ಮಂಕಾಗಬಹ... ತನ್ನ ಬಗ್ಗೆ ಆದೇನು ಇಮೇಜು ಕಟ್ಟಿಕೊಂಡಿದ್ದಾ... ಅಪಜಯಗಳ ನಿಭಾವಣೆಯನ್ನು ಯಶಸ್ಸುಗಳಿಗ... ಕಷ್ಟಕರವಾಗಿಸಬಹುದು. ತಾನು ಭಾರ... ಉದ್ಧಾರಕನೆಂದು ಹೇಳುತ್ತ ಅಧಿಕಾರದ ಗದ್... ವ್ಯಕ್ತಿ ಮುತ್ಸದ್ದಿಯಲ್ಲ, ಆತ ಬರೀ ಸೊ... ಅಸುರಕ್ಷತೆಯಿಂದ ಬಳಲುವ ಆತ್ಮಾಸಕ್ತ ವ... ಸತ್ಯವನ್ನು ಭಾರತೀಯರು ಪ್ರಾಯಶಃ ಬ... ಮನಗಾಣಬಹುದು.

ನಾಯಿ ಮರೀತಾವ್ರೋ ಅಣ್ಣ ನಾಯಿ ಮರೀತಾವ್ರೊ

ನಾಯಿ ಮರೀತಾವ್ರೋ ಅಣ್ಣ ನಾಯಿ ಮರೀತಾವ್ರೋ
ನೋವು ತರತಾವ್ರೋ ಧರ್ಮದ ಸಾವು ತರತಾವ್ರೋ

ಅಡ್ಡ ಪಲ್ಲಕ್ಕಿಮ್ಯಾಲ ಅಡ್ಡಡ್ಡ ಕುಂತಗೊಂಡು
ಅಡ್ಡಾದಿಡ್ಡಿ ಮಾತಾಡಿ ಅಡ್ಡಾಡಿ ಅನಿಸಿಕೊಂಡು
ಕೈಕಾಲು ಬೀಸಿಕೊಂಡು, ಮುಗುಳ್ನಗುವ ತಂದುಕೊಂಡು

ಪಂಚೆ ರಂಗದ ನಾಯಿ, ಪಂಚೆ ಬಿಚ್ಚಿದ ನಾಯಿ
ಕಚ್ಚಿ ಮೇಯ್ದುದ ನಾಯಿ, ಕಚ್ಚೆ ಹರುಕ ನಾಯಿ
ತುಡುಗು ಧರ್ಮದ ನಾಯಿ, ಮೈಯ ತುಂಬಿದ ನಾಯಿ

ಪೀಠ ಗೊಟದ ಮ್ಯಾಲ ಗುಂಡಾಗಿ ಕುಂತಗೊಂಡು
ಸಿದ್ಧಾಂತ ಗಿದ್ಧಾಂತ ಪಂಡಿತನೆನಿಸಿಕೊಂಡು
ಕಿರೀಟವ ಧರಿಸಿಕೊಂಡು, ಕೈಯ ಮೇಲೆತ್ತಿಕೊಂಡು



ಹಗಲ ಏರಿದ ನಾಯಿ, ಮಿದುಳ ತಿಂದ ನಾಯಿ
ಕರುಳ ತಿಂದ ನಾಯಿ, ಅಫೀಮು ಬಿತ್ತಿದ ನಾಯಿ
ಮೌಢ್ಯ ತುಂಬಿದ ನಾಯಿ, ಮೂಳೆ ಕಡಿದ ನಾಯಿ

ಮೋಕ್ಷ ಸ್ವರ್ಗದ ಕತೆಯ ಹೇಳುತ್ತ ಕುಂತಗೊಂಡು
ಡುಬ್ಬದ ಮೇಲೇರಿ ದೊಡ್ಡವರು ಅನಿಸಿಕೊಂಡು
ಶ್ಲೋಕವ ಹೇಳುತ್ತ ಮಂತ್ರವ ಪಠಿಸಿಕೊಂಡು

ಹಂಡ ಬಂಡ ನಾಯಿ, ಹಣೆಯ ಚಿಕ್ಕಿಯ ನಾಯಿ
ಬೆದೆಗೆ ಬಂದ ನಾಯಿ, ಬದುವು ಹೊಕ್ಕ ನಾಯಿ
ಗೊಡ್ಡು ಧರ್ಮದ ನಾಯಿ, ಬರಡು ಮಾಡಿದ ನಾಯಿ

ಕಾಲುಗಳ ಚಾಚಿಕೊಂಡು, ಜೊಲ್ಲನ್ನು ಸುರಿಸಿಕೊಂಡು
ದುಡ್ಡನ್ನು ಗೆಬರಿಕೊಂಡು ಗುರುಗಳು ಅನಿಸಿಕೊಂಡು
ಪಲ್ಲಕ್ಕಿ ಮ್ಯಾಲೇರಿ, ಪಟ್ಯಾಂಗ ಹೊಡೆಯುತ್ತ

- ವಿಶ್ವಾರಾಧ್ಯ ಸತ್ಯಂಪೇಟೆ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ದೃಷ್ಟಿ: ಗ್ರಹಿಕೆ ಮತ್ತು ಅಪರಾಧ ಪ್ರಜ್ಞೆ

ಷ್ಟಿಯಾಗುವುದು, ಕೆಟ್ಟ ಕಣ್ಣು ಅಥವಾ ಕ ದೃಷ್ಟಿಯಿಂದ ನೋಡಲ್ಪಟ್ಟಿರುವ ದ ಏನೋ ಕೆಡುಕಾಗುವುದು ಎಂಬ ಯು ವಿಶ್ವದಾದ್ಯಂತ ಅದೆಷ್ಟೇ ಬಲವಾಗಿ ಂಸ್ಕೃತಿಯಲ್ಲಿದ್ದರೂ ಅದೊಂದು ಅಪ್ಪಟ ಸುಳ್ಳು. ಅದರ ಪರಿಕಲ್ಪನೆ ಬೆಳೆದುಬಂದಿರುವ ರೀತಿ ಗಮನಾರ್ಹವಾದದ್ದು.

ತಾಳೀಯುಗಳ ಮಂಡನೆ ಅಥವಾ ಭಯವನ್ನು ನೆ ಮಾಡಿಕೊಳ್ಳಲು ಅಥವಾ ಹೆದರಿಸಲು; ನಾ ಕಾರಣಗಳ ಹಿನ್ನೆಲೆಯನ್ನು ಹೊಂದಿರುವ ಕಲ್ಪನೆಯೋ, ದೇವರ ಪರಿಕಲ್ಪನೆಯಷ್ಟೇ ಬೆಳೆದುಬಂದಿರುವುದಕ್ಕೆ ನಾನಾ ವೆ.

ಪ್ರತಿಪಾದಕರು

ಚ್ಚೆಕಿಚ್ಚು ಅಥವಾ ಕೊರತೆಯುಳ್ಳವರ ನೋವು ಮೇಲೆ ಅಥವಾ ವಸ್ತುಗಳ ಮೇಲೆ ಬಿದ್ದಾಗ, ಕ ತರಂಗಗಳು ಉಂಟಾಗಿ ಅದು ತಟ್ಟುತ್ತದೆ. ನ್ನು ಉಂಟುಮಾಡುತ್ತದೆ ಎಂದು ಇದೇ ದೃಷ್ಟಿ ನ್ನು ತರಂಗವಿಜ್ಞಾನದ ಮೂಲಕ ವವರ ಒಂದು ವಿವರಣೆ. ಆದರೆ ಇದೇ ವಿವರಣೆಯು ಮುಂದುವರಿದು, ಇದು ಡುವವರದಲ್ಲ, ದೃಷ್ಟಿ ಪಡೆಯುವವರ ಮೇಲೆ ಬಿತವಾಗಿರುತ್ತದೆ ಎಂಬುದು.

ಕೊಂಚ ಸ್ವಾರಸ್ಯಕರವಾಗಿದೆ. ಈ ವಾದದ ಪ್ರಕೃತಿಯಲ್ಲಿ ನಕಾರಾತ್ಮಕ ಮತ್ತು ಕವಾದಂತಹ ಎರಡೂ ಬಗೆಯ ತರಂಗಗಳು ರುತ್ತದೆ. ಸದಾ ಸಂಚಲನದಲ್ಲಿಯೇ ಇರುತ್ತದೆ. ಮ್ಮ ನಮ್ಮ ದೃಷ್ಟಿ, ಒಲವು, ನಿಲುವು, ಮತ್ತು ಗ್ರಹಿಕೆಯ ಪ್ರಕಾರ ಅವುಗಳನ್ನು ತ್ತೇವೆ. ನಮ್ಮ ಧೋರಣೆ ಮತ್ತು ಒಲವುಗಳು ಕವಾಗಿದ್ದರೆ ನಮ್ಮ ಮೇಲೆ ಬೀಳುವ ಪ್ರ ಅಥವಾ ಆಗುವ ಪರಿಣಾಮವು ಕವಾಗಿಯೂ, ಋಣಾತ್ಮಕವಾಗಿದ್ದರೆ ಕವಾಗಿಯೂ ಆಗುತ್ತದೆ. ಒಳಿತಾಗಲಿ, ಲಿ ಅವು ನಮ್ಮ ಮೇಲೆ ಬಿತವಾಗಿರುತ್ತದೆಯೇ ಹೊರತು ಹೊರಗಿನ ವ ಕಾರಣವಲ್ಲ ಎಂಬುದು ಇದರ ಒಟ್ಟು ಯು. ವಿಶ್ವದಾದ್ಯಂತ ನಡೆಯುವ ವ್ಯಕ್ತಿ ವಿಕಸನ ಲ್ಲಿ ಸುಪ್ತ ಮನೋಶಕ್ತಿಯ ಉದ್ದೀಪನದ ರಗಳಲ್ಲಿ ಬೋಧಿಸುವ ಅಂಶಗಳೇ . ಅವರ ಪ್ರಕಾರ ವರ ಅಥವಾ ಶಾಪವು ವರ ಮೇಲಲ್ಲಾ ಅವಲಂಬಿತವಾಗಿರುವುದು, ವವರ ಮೇಲೆ ಎಂದು. ಒಳಿತಾಗಲಿ, ಲಿ ಅಥವಾ ವರವಾಗಲಿ, ಅನುಗ್ರಹವಾಗಲಿ, ಲಿ, ಅನುಕೂಲವಾಗಲಿ, ಪ್ರತಿಕೂಲವಾಗಲಿ ತಿಯಲ್ಲಿ ಸಹಜವಾಗಿ, ಮುಕ್ತವಾಗಿ, ಗಿ ತರಂಗಗಳ ರೂಪದಲ್ಲಿ, ಅಭೌತಿಕ ರೂಪದಲ್ಲಿ ಇದ್ದೇ ಇದೆ. ವ್ಯಕ್ತಿಯು ತನ್ನ ಧೋರಣೆ ಮತ್ತು ಒಲವುಗಳ ವಾಗಿ ಅವುಗಳನ್ನು ಪಡೆಯುತ್ತಾನೆ ಅಥವಾ ಗೆ ತನ್ನ ಟ್ಯೂನ್ ಮಾಡಿಕೊಳ್ಳುತ್ತಾನೆ. ಅಥವಾ ಇನ್ನಾವುದೇ ಮುಗ್ಧ ಜೀವಿಗಳು ಒಲವು, ನಿಲುವು ಮತ್ತು ಧೋರಣೆಗಳ ಬಗೆಗೆ ನಿರ್ದಿಷ್ಟ ಸೈದ್ಧಾಂತಿಕ ನವಿಲ್ಲದೇ ಬರಿದೇ ತಮ್ಮ ಜೀವದ, ಉಳಿವು ಮತ್ತು ಸಾಗಿಸುವಿಕೆ ಇದರ ಬಗ್ಗೆ ಅತೀ ಸಹಜವಾದಂತಹ ಒಲವನ್ನು ತ್ತವೆ. ಜೀವದ, ಜೀವಂತಿಕೆಯ ದೇನೇ ಅದು ಬೆಳೆಯುವುದು, ಗುವುದು. ತನ್ನ ಒಂದು ಜೀವವು ಯಿಂದ ಇರಲು ನೋಡಿಕೊಳ್ಳುವುದು ವು ಜೀವಿಗೂ ನೈಸರ್ಗಿಕವಾಗಿ ಸಹಜವೇ ಅದಕ್ಕೆ ಪೂರಕವಾಗಿ ಆ ಜೀವವು ಶ್ರಮವನ್ನು ಗಲಿ, ಯೋಜನೆಗಳನ್ನು ಳ್ಳುವುದಾಗಲಿ ಅಗತ್ಯವಿಲ್ಲ ಎನ್ನುತ್ತದೆ ಲುವು. ಒಂದು ಪ್ರಾಣಿಯು ತನ್ನ ದೇಹ ಅಗತ್ಯವಿರುವಂತಹ ಆಹಾರವನ್ನು ಯಾವ ವಿಶೇಷ ಪ್ರಯತ್ನವನ್ನು ಲ್ಲ, ಉತ್ತುವುದಿಲ್ಲ, ಬಿತ್ತುವುದಿಲ್ಲ, ಹಾಗೆ ಯಾವ ಯಾವ ವಿಟಮಿನ್‌ಗಳು

ಬೇಕು, ಯಾವ ಯಾವ ಪೌಷ್ಟಿಕಾಂಶಗಳು ಬೇಕು ಎಂದು ಹುಡುಕುವುದಿಲ್ಲ, ಸಹಜವಾಗಿಯೇ ತಮ್ಮ ಆಹಾರವನ್ನು ತಾವು ಪಡೆಯುತ್ತವೆ. ಎಲ್ಲಿ ಆಹಾರ ಸಿಗುವುದಿಲ್ಲವೋ ಆ ಸ್ಥಳವನ್ನು ತೊರೆದು, ಆಹಾರ ಸಿಗುವ ಕಡೆಗೆ ಚಲಿಸುತ್ತವೆ. ಹಾಗೆಯೇ ತನ್ನ ವಾಸಕ್ಕೆ, ಬದುಕಿಗೆ ಪ್ರತಿಕೂಲಕರವಾದಂತಹ ವಾತಾವರಣ ಪ್ರಕೃತಿಯಲ್ಲಿ ಸೃಷ್ಟಿಯಾಗುತ್ತದೆ ಎನ್ನುತ್ತಿದ್ದಂತೆ ಯಾವ ಗೂಗಲ್ ಮ್ಯಾಪ್‌ಗಳ ಸಹಾಯವಿಲ್ಲದೇ, ಯಾವುದೇ ಹವಾಮಾನ ವೀಕ್ಷಣಾ ವರದಿಯ ಎಚ್ಚರಿಕೆಯಿಲ್ಲದೇ ಅನುಕೂಲವಾದಂತಹ ಕಡೆಗೆ ಹೊರಟುಹೋಗುತ್ತವೆ. ಅಂದರೆ, ಮಾನವ ಅದೆಷ್ಟೇ ತಂತ್ರಜ್ಞಾನದಲ್ಲಿ ಮುಂದುವರೆದರೂ ನಿಸರ್ಗದ ಮುಂದೆ, ಅಸ್ತಿತ್ವದ ಇರುವಿಕೆಯ ಹರವಿನ ಶಕ್ತಿಯ ಮುಂದೆ ಮನಸ್ಸಿನ ಲೆಕ್ಕಾಚಾರಗಳೆಲ್ಲಾ ಸೀಮಿತವೂ, ಮಿತವೂ ಆಗಿದೆ ಎಂದಾಯ್ತು.

ಗ್ರಹಿಕೆಯ ತಾಕತ್ತು


ಹಿಂದೆ ದಾರ್ಶನಿಕರು, ಪ್ರವಾದಿಗಳು, ಯೋಗಿಗಳು ಕಂಡ ದರ್ಶನಗಳು, ಪ್ರವಾದಿಸಿದ ವಿಷಯಗಳು, ಅವತೀರ್ಣವಾದ ದೇವವಾಣಿಗಳೆಂಬುವೆಲ್ಲವೂ ಅಸ್ತಿತ್ವದ ನೈಸರ್ಗಿಕ ಸ್ಥಿತಿಯಲ್ಲಿ ಪಡೆದಂತವು. ತಮ್ಮ ಮಾನವ ಮನಸ್ಸಿನ ಸೀಮಿತ ಲೆಕ್ಕಾಚಾರ, ಅಂತಹುದರ ಒಕ್ಕೂಟವಾದ ಸಮಾಜದ ಸಂಪ್ರದಾಯ, ಇಂತವನ್ನು ಮೀರಿದ ಸ್ಥಿತಿಯಲ್ಲಿ ಪಡೆದಂತಹ ವಿಚಾರಗಳು ಮತ್ತು ಹೊಳಹುಗಳು. ನಿಸರ್ಗದ ಅಪಾಯವನ್ನು, ಸಮಾಜಗಳಿಂದುಂಟಾಗುವ ಅಪಾಯಗಳನ್ನು ಮನಗಂಡು ತಾವೂ ಎಚ್ಚರಗೊಂಡು ಮತ್ತು ತಮ್ಮ ಜನರನ್ನೂ ಎಚ್ಚರಿಸಿ ಅಪಾಯಗಳಿಂದ ಪಾರಾದರು. ಮೋಸೆಸ್ ತನ್ನ ಜನರನ್ನು ಸಮುದ್ರವನ್ನು ದಾಟಿಸಿದ್ದಾಗಲಿ, ಯೇಸುವಿನ ಮೇಲೆ ಪವಿತ್ರಾತ್ಮನು ಪಾರಿವಾಳದ ರೂಪದಿಂದ ಇಳಿದುದ್ದಾಗಲಿ, ಪ್ರವಾದಿ ಮಹಮದ್‌ಗೆ ದೇವರ ವಾಕ್ಯವು ಅವತೀರ್ಣವಾದುದ್ದಾಗಲಿ ಇಂತಹವೇ ಗ್ರಹಿಕೆಗಳಾಗಿದ್ದು ದೇವರೆಂಬ ಯಾವುದೇ ಕಾಸ್ಟ್ಯೂಮ್ಡ್ ಪರ್ಸನಾಲಿಟಿಯಾಗಲಿ, ಶಾಪ ಮತ್ತು ಅನುಗ್ರಹಗಳನ್ನು ಯಾವಾಗ ಮಾಡಬೇಕು, ಯಾವಾಗ ಮಾಡಬಾರದು ಎಂದು ನಿರ್ಧರಿಸುವ ಆಲೋಚನಾಗಾರನಾಗಲಿ ಇಲ್ಲ.

ಪ್ರವಾದಿತ್ವವಾಗಲಿ, ಅವತೀರ್ಣವಾಗುವ



ವಾಕ್ಯವಾಗಲಿ ಅವರವರ ಗ್ರಹಿಕೆಯೇ ಹೊರತು ಮೇಲಿಂದ, ಮೋಡಗಳ ಒಳಗಿಂದ, ಗುಡ್ಡಗಾಡುಗಳಿಂದ ನೀಡಿದಂತಹ ವಾಣಿಯೇನಲ್ಲ. ದೇವರ ಪರಿಕಲ್ಪನೆಯೆಂಬುದು ಆದಿಮ ಕಾಲದಲ್ಲಿಯೇ ಪ್ರಕೃತಿಯ ವೈಚಿತ್ರ್ಯಗಳಿಗೆ ಬೆರಗಾದ ಮತ್ತು ಬೆದರಿದ ಉದ್ಗಾರಗಳೇ ಆಗಿದ್ದು, ಅದೇ ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ. ಅದನ್ನು ಏಸು, ಮಹಮದ್, ಬಸವರಂತವರೂ ನಿರಾಕರಿಸುವ ಧಾರ್ಷ್ಟ್ಯ ತೋರದೇ ಅದನ್ನು ಗ್ರಹಿಸುವ ವಿಧಾನವನ್ನು ಬದಲಿಸುವ ಯತ್ನ ಮಾಡಿದರು. ಅಜ್ಞಾನಕ್ಕೆ, ಶೋಷಣೆಗೆ ಕಾರಣವಾಗುವಂತಹ ಇತರರ ಗ್ರಹಿಕೆಗಳನ್ನು ನಿರಾಕರಿಸಿದರು, ಖಂಡಿಸಿದರು. ಇಂತಹದ್ದೊಂದು ಬಗೆಯಲ್ಲಿ ಗ್ರಹಿಸುವುದರಿಂದ ಪ್ರಕೃತಿಯೂ ಸಹಜವಾಗಿ ತನ್ನಲ್ಲಿ ಹೊಂದಿರುವ ಅನುಗ್ರಹಗಳನ್ನು ಪಡೆಯಲು ಸಾಧ್ಯವಾಗುವುದು

ಮತ್ತು ಆದೇರೀತಿ ನಕಾರಾತ್ಮಕವಾಗಿರುವುದರ ಪ್ರಭಾವಗಳಿಂದ ಬಿಡುಗಡೆಯಾಗಬಹುದು ಎಂಬುದು ಕೂಡ ಒಂದು ಗ್ರಹಿಕೆಯಾಗಿತ್ತು, ಆದೇರೀತಿ ವ್ಯಕ್ತಿಗಳ ಸಮೂಹಗಳು ಸಮಾಜಗಳಾಗಿ ರೂಪುಗೊಂಡಿರುವಾಗ ಅವರಲ್ಲಿ ಇದೇ ಬಗೆಯ ಗ್ರಹಿಕೆಯ ದೋಷಗಳು



ಉಂಟಾಗಿ ಅದರಿಂದಾಗುವ ಸಂಘರ್ಷಗಳನ್ನು ತಪ್ಪಿಸಲು ಕೂಡ ಹೆಣಗಾಡಬೇಕಿತ್ತು. ದುರಂತವೆಂದರೆ, ಇಂತಹ ಸಂಘರ್ಷಗಳೇ ಮುಂದಾಗಿ ಪ್ರಾಮಾಣಿಕವಾದಂತಹ ಗ್ರಹಿಕೆಯ ಮೌಲ್ಯಗಳು ಮೂಲೆಗುಂಪಾಗಿಹೋದವು. ಬರಿಯ ಗ್ರಹಿಕೆಯ ಮಾರ್ಗದ ಸಿದ್ಧಾಂತಗಳೇ ದಾರಿಮುಳ್ಳುಗಳಾಗಿದ್ದಾವೆ.

ಪ್ರಾಣಿಗಳ ಅನುಕರಣೆ

ವಿಶ್ವಾದ್ಯಂತ ವಿವಿಧ ಸಂಸ್ಕೃತಿಗಳಲ್ಲಿ ಶಕುನಗಳಿಗೆ ಅವಲಂಬಿತರಾಗುವುದು ಪ್ರಾಣಿಗಳ ಮೇಲೆ. ಅದಕ್ಕೂ ಕಾರಣಗಳು ಇಲ್ಲದಿಲ್ಲ. ಪ್ರಾಣಿಗಳು ಪ್ರಕೃತಿಯ ಅನುಕೂಲ ಮತ್ತು ಪ್ರತಿಕೂಲಗಳಿಗೆ ಅಥವಾ ವಿಕೋಪಗಳಿಗೆ ಸ್ಪಂದಿಸುವುದು, ಎಚ್ಚೆತ್ತು ತನ್ನ ಜೀವವನ್ನು ತಾನು ಉಳಿಸಿಕೊಳ್ಳುವುದನ್ನು ನಮ್ಮ ಆದಿಮ ಕಾಲದ ಜನರು, ಪೂರ್ವಜರು ಕಂಡುಕೊಳ್ಳದೇ ಹೋದವರೇನಲ್ಲ. ಅವುಗಳು ಹೇಗೆ ಗ್ರಹಿಸುತ್ತವೆ ಎಂಬುದರ ರಹಸ್ಯವನ್ನು ಬೇಧಿಸಲು ಸಾಕಷ್ಟು ಹೆಣಗಾಡುತ್ತಿದ್ದರು. ಒಂದು ಅಂಶವನ್ನೂ ಅವರು ಗಮನಿಸಿದರು. ಅದೇನೆಂದರೆ ಯಾವುದೇ ಪ್ರಾಣಿಯು ಪ್ರಕೃತಿಯಲ್ಲಿ ಇಂತಹ ಮುನ್ಸೂಚನೆಯನ್ನು ಪಡೆಯುವಾಗ ತಾನು ಸಹಜವಾಗಿರುವ ರೀತಿಗಿಂತಲೂ ವಿಚಿತ್ರವಾಗಿ ವರ್ತಿಸುತ್ತದೆ. ಅದು ಕೂಗುವುದೋ, ನೆಲದ ಮೇಲೆ ಬಿದ್ದು ಬೆನ್ನಿನ ಮೇಲೆ ಹೊರಳಾಡುವುದೋ, ತಲೆಯನ್ನು ಎತ್ತಿಕೊಂಡು ವರ್ತುಲಾಕಾರವಾಗಿ ಸುತ್ತುತ್ತಾ ಊಳಿಡು ವುದೋ, ನೆಲದ ಮೇಲೆಲ್ಲಾ ಮೂಸಿಕೊಂಡು ನುಗ್ಗುವುದು ಇತ್ಯಾದಿ. ಇಂತಹ ಕ್ರಿಯೆಗಳನ್ನು ಗಮನಿಸಿದ ಮನುಷ್ಯ ತಾನೂ ಇಂತದ್ದೇ ಕ್ರಿಯೆಗಳನ್ನು ಮಾಡಿದರೆ ಅಂತಹ ಮುನ್ಸೂಚನೆಗಳು ಸಿಗಬಹುದೇನೋ ಎಂದುಕೊಂಡು ಅನುಕರಣೆ ಮಾಡತೊಡಗಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಬಹಳಷ್ಟು ಬುಡಕಟ್ಟು ಸಂಸ್ಕೃತಿಗಳಲ್ಲಿ ಪ್ರಾಣಿಗಳ ಹಾಗೆ ಕೂಗುವುದರಿಂದ ಹಿಡಿದು, ಅವುಗಳ ಹಾಗೆ ವರ್ತಿಸುವುದು, ವಿಚಿತ್ರವಾಗಿ ಪ್ರಾಣಿಗಳಂತೆಯೇ ಧ್ವನಿ ಹೊರಡಿಸುವುದು, ಹೊರಳಾಡುವುದು, ಸಾಮೂಹಿಕವಾಗಿಯೇ ಅನುಕರಿಸುವುದು ಸಹಜವಾಗಿಯೇ ಇದೆ. ಇಂತಹ ಅನುಕರಣೆಗಳಿಂದ ಅಂತಹ ಶಕ್ತಿಗಳು ತಮಗೂ ದೊರಕುವುದು ಅಥವಾ ಮುನ್ಸೂಚನೆಗಳು ತಮಗೂ ಸಿಗಬಹುದೇನೋ ಎಂಬಂತಹ ಆಶಯಗಳಾಗಿದ್ದವು.


ಇವುಗಳು ಮುಂದುವರಿದು ಇಂದಿಗೂ ದೇವರು ಮೈಮೇಲೆ ಬಂದವೆಂದು ಹೇಳುವವರು ಅದೇ ಅನುಕರಣೆಯನ್ನು ಉಳಿಸಿಕೊಂಡು ತಮ್ಮ ಮಾತುಗಳನ್ನು ಮಧ್ಯೆ ಪೋಣಿಸಿಕೊಂಡು ಬಿಡುತ್ತಾರೆ. ಶನಿಯೋ, ಮಾರಿಯೋ, ಮಸಣಿಯೋ, ಇನ್ನಾವುದೇ ದೇವಿಯೋ ಮೈಮೇಲೆ ಬಂದರೆಂದು ಘೋಷಿಸಿಕೊಳ್ಳುವವರು ಕೂಡ ವಿಚಿತ್ರವಾಗಿ ಮೈ ನುಲಿಯುತ್ತಾ, ಹೂಂಕರಿಸುತ್ತಾ, ಆರ್ಭಟಿಸುತ್ತಾ ಅದೇ ಅನುಕರಣೆ ಮುಂದುವರಿಸುತ್ತಾರೆ. ಆದರೆ, ಅವರಿಗೆ ಇದು ಪ್ರಾಣಿಗಳ ಅನುಕರಣೆ ಎಂದು ತಿಳಿದಿಲ್ಲ, ಶಕ್ತಿಯು ಮೈಯೊಳಗೆ ಆವಾಹನೆಯಾಗುವಾಗ ಹೀಗೆಲ್ಲಾ ಅನಿಯಂತ್ರಿತವಾದದ್ದೆಲ್ಲಾ ಆಗುತ್ತದೆ ಎಂದು ತಿಳಿದಿದ್ದಾರೆ.

ದೊಡ್ಡ ತಮಾಷೆಯೆಂದರೆ, ಪ್ರಾರಂಭದಲ್ಲಿ ನಟಿಸಲು ಪ್ರಾರಂಭಿಸುವ ಅವರು ಕ್ರಮೇಣ ನಿಜವಾಗಿಯೇ ಮೈಮರೆತುಬಿಡುತ್ತಾರೆ. ನಟನೆಯಲ್ಲಿ ತಾದಾತ್ಮತೆ ಹೊಂದಿ ಮಾನಸಿಕವಾಗಿ ಅದೊಂದು ಬಗೆಯ ಉನ್ಮಾದಕ್ಕೆ ಒಳಗಾಗಿ ತಮ್ಮನ್ನು ತಾವು ಮರೆತುಬಿಡುತ್ತಾರೆ. ಆದರೆ ಹೀಗೇ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಒಂದೊಂದು ವ್ಯಕ್ತಿಗೂ ಒಂದೊಂದು ರೀತಿಯ ವ್ಯಕ್ತಿಗತವಾದಂತಹ ಪ್ರಭಾವ, ದೌರ್ಬಲ್ಯ ಮತ್ತು ಉನ್ಮತ್ತತೆ ಇರುತ್ತದೆ ಎಂಬುದೂ, ದೇವರಾಗಲಿ, ದೈವವಾಗಲಿ, ಭೂತವಾಗಲಿ ಇಲ್ಲದೇ ಇರುವ ಯಾವುದೇ ಆಗಲಿ ಆವಹಿಸುವುದಿಲ್ಲ ಎಂಬುದಂತೂ ಸುಸ್ಪಷ್ಟ. ಅವರವರ ಮಾನಸಿಕ, ಭಾವನಾತ್ಮಕ ದೌರ್ಬಲ್ಯ ಅಥವಾ ಉನ್ಮತ್ತತೆಯ ಗಾಢತೆಯನ್ನು ಅವರು ಬಿಂಬಿಸುತ್ತಾರಷ್ಟೇ.

ಸೃಷ್ಟಿಯೊಳಗಿನ ಅಪರಾಧಪ್ರಜ್ಞೆ: ದೃಷ್ಟಿ

ಯಾರೋ ತಮ್ಮ ಮೇಲೆ ಕೆಡುಕಿನ ದೃಷ್ಟಿ ಬೀರಿ ತಮಗೆ ಕೆಡುಕಾಯಿತು ಎನ್ನುವುದಕ್ಕಿಂತ, ತಮ್ಮಲ್ಲೇ ಇರುವ ನಕಾರಾತ್ಮಕವಾದಂತಹ ಪ್ರಜ್ಞೆಗಳು ಕೆಲಸ ಮಾಡುತ್ತವೆ ಎಂಬುದಂತೂ ಬಹಳಷ್ಟು ಬಾರಿ ನಿರೂಪಿತವಾಗಿವೆ.


ಯಾರಾದರು ಉಣ್ಣದವರ ಮುಂದೆ ಅಥವಾ ಆಸೆಯಿಂದಲೋ, ಹಸಿವಿನೊಂದಲೋ ನೋಡುವವರ ಮುಂದೆ ಊಟ ಮಾಡಿದರೆ ಹೊಟ್ಟೆ ನೋಯುವುದು ಎನ್ನುವುದನ್ನು ಗಮನಿಸಿ. ತಾನು ಉಣ್ಣುತ್ತಿದ್ದು ಅವರಿಗೆ ಕೊಡುತ್ತಿಲ್ಲ ಎಂಬುದರ ಅಪರಾಧ ಪ್ರಜ್ಞೆಯೇ ಅಲ್ಲಿದೆ. ಹಾಗೆ ತಾನುಂಡು, ಹಸಿದವರಿಗೆ ಅಥವಾ ಆಸೆಪಟ್ಟವರಿಗೆ ಕೊಡುತ್ತಿಲ್ಲ ಎಂಬುದರ ಅಪರಾಧಪ್ರಜ್ಞೆಯ ಸೂಚನೆಯೇ ತಾನೇ ತಂದುಕೊಳ್ಳುವ ಹೊಟ್ಟೆನೋವು. ಇದೇರೀತಿ ಹಲವು ವಿಷಯಗಳಲ್ಲಿ ಕಟ್ಟಿಕೊಟ್ಟಿರುವಂತಹ ವಿಚಾರಗಳಲ್ಲಿ, ಮನೆಯಿಲ್ಲದವರು ಸೂರಿಲ್ಲದೇ ನರಳುವಾಗ ತಾನೊಬ್ಬ ಸೂರನ್ನು ಕಟ್ಟಿಕೊಂಡು ಮೆರೆಯುವುದು, ತಿನ್ನಲು, ಉಡಲು ಇಲ್ಲದವರ ಮುಂದೆ ತಾನು ವೈಭವೋಪೇತ ಒಡವೆ ವಸ್ತ್ರಗಳನ್ನು ತೊಟ್ಟುಕೊಂಡು ಪ್ರದರ್ಶಿಸುವುದು ಕೂಡ ದೃಷ್ಟಿಯಾಗುವುದು ಎನ್ನುವುದರಲ್ಲಿ ಇಂತಹುದೇ ಅಪರಾಧಪ್ರಜ್ಞೆಯ ಸಂಕೇತಗಳಾಗಿವೆ. ಆದರೆ ತಮ್ಮ ಅಪರಾಧಪ್ರಜ್ಞೆಯನ್ನು ನೇರವಾಗಿ ಒಪ್ಪಿಕೊಳ್ಳದೇ ಅದನ್ನು ನೋಡುಗರ ಮೇಲೆ ವರ್ಗಾಯಿಸಿದ್ದು ಕೈ ತೊಳೆದುಕೊಳ್ಳುವುದರ ಪ್ರಕ್ರಿಯೆಯ ಭಾಗವಾಗಿದೆ. ಅದಕ್ಕೇ ದೃಷ್ಟಿ ತೆಗೆಸಿಕೊಳ್ಳುವ ಪಾಡಿಗೂ ಬೀಳುತ್ತಾರೆ. ಅನುದ್ದೇಶವಾಗಿ (ಹಂಚಿಕೊಳ್ಳದಿರುವ) ನಾವು ತೊಡಗಿರುವ ಕ್ರಿಯೆ ಅಥವಾ ವೈಭವವನ್ನು ಯಾವ್ಯಾವ ದಾರಿದ್ರ್ಯದ ಅಥವಾ ಅಸೂಯೆಯ ಕಣ್ಣುಗಳು ದಿಟ್ಟಿಸಿರುವವೋ, ಕೇಡುಂಟಾಗದಿರಲಿ ಎಂದು ಪರಿಹಾರಕ್ಕೆ ಹಾತೊರೆಯುವ ವಿಧಾನಗಳು ಈ ದೃಷ್ಟಿ ತೆಗೆಸಿಕೊಳ್ಳುವುದು. ■



ಉಡುಪಿಯ ಮ್ಲೇಚ್ಛ ಸಂಪತ್ತು

ಕಳೆದ ಸಂಚಿಕೆಯಲ್ಲಿ ನಾನು ಬರೆದ ಪತ್ರದಲ್ಲಿ ಉಡುಪಿಯ ಸಂಪತ್ತು ಮಧ್ವನ ಕಾಲದ್ದೆಂದು ಬರೆದಿದ್ದೆ. ಅದು ಮಧ್ವನ ಬದಲು 1500ರ ಕಾಲದಲ್ಲಿದ್ದ ಮಾಧ್ವ ಯತಿ ವಾದಿರಾಜ ಎಂದಾಗಬೇಕಿತ್ತು. ಆ ಅಗಾಧ ಸಂಪತ್ತು ದೆಲ್ಲಿಯಿಂದ ಕಾಣಿಕೆಯ ರೂಪದಲ್ಲಿ ಉಡುಪಿಗೆ ಬಂತಂತೆ. ಮಗನನ್ನ ಉಳಿಸಿದ್ದಕ್ಕಾಗಿ ಮುಸಲ್ಮಾನ ದೊರೆ ನೀಡಿದ ಆ ಭಾರೀ ಸಂಪತ್ತನ್ನು ಸ್ವಯಂ ಶ್ರೀಕೃಷ್ಣನ ಆದೇಶದಂತೆ ದೇವಾಲಯದಲ್ಲಿ ಸುಬ್ರಹ್ಮಣ್ಯನನ್ನು ಪ್ರತಿಷ್ಠಾಪಿಸಿ ಆ ಸುಬ್ರಹ್ಮಣ್ಯ ದೇಗುಲದೊಳಗೆ ಶೇಖರಿಸಿಡಲಾಗಿದೆಯೆಂದು ದೇಗುಲದಲ್ಲಿ ಗಡ್ಡಧಾರಿ ಮುಸಲ್ಮಾನರ ಉಬ್ಬು ಚಿತ್ರಗಳಿರುವ ಕಥೆಯಲ್ಲಿ ತಿಳಿಸಲಾಗಿದೆ.

ಮಠದೊಳಗಿನ ಈ ದೇಗುಲದಲ್ಲೇ ಮಡೆಸ್ನಾನ ನಡೆಯುತ್ತಿರುವುದು. ಮಧ್ವನ ಕಾಲದಲ್ಲಿ ಈ ರೀತಿಯ ಸಂಪತ್ತು ಇದ್ದಿರಲಿಲ್ಲ. ಪರ್ಯಾಯವೂ (ಮಹೋತ್ಸವ ರೂಪದಲ್ಲಿ) ಇದ್ದಿರಲಿಲ್ಲ. ಅಲ್ಲಿರುವ 8 ಯತಿಗಳು ಪೂಜಾ ಕೈಂಕರ್ಯವನ್ನು ಎರಡು ತಿಂಗಳಿಗೊಮ್ಮೆ ಬದಲಿಸಿಕೊಳ್ಳಬೇಕಿತ್ತಷ್ಟೆ. ಅದನ್ನು ಅಪರೂಪದ ಕಾತರದಿಂದ ಕಾಯುವ ಹಬ್ಬದ ಅನುಭವ ಬರುವ ರೀತಿಯಲ್ಲಿ ಎರಡು ವರ್ಷಕ್ಕೆ ಬದಲಿಸಿದವರೇ ಈ ವಾದಿರಾಜ ಸ್ವಾಮಿ. ಈ ಹಬ್ಬವೀಗ ನಾಡ ಹಬ್ಬವಾಗುವ ತರಾತುರಿಯಲ್ಲಿದೆ.




ಕರಾವಳಿಯ ಸಪ್ತಕ್ಷೇತ್ರಗಳೆಂದು ಹೇಳಿಸಿಕೊಂಡ ಸುಬ್ರಹ್ಮಣ್ಯ, ಉಡುಪಿ, ಕೊಲ್ಲೂರು, ಕುಂಭಾಸಿ ಕೋಟೇಶ್ವರ, ಶಂಕರನಾರಾಯಣ, ಗೋಕರ್ಣ ಕ್ಷೇತ್ರಗಳಲ್ಲಿ ದೂರವಿರುವ ಸುಬ್ರಹ್ಮಣ್ಯ ಹಾಗು ಗೋಕರ್ಣ ಬಿಟ್ಟರೆ ಅಕ್ಕಪಕ್ಕದಲ್ಲಿರುವ ಕೋಟೇಶ್ವರ, ಶಂಕರನಾರಾಯಣ, ಕೊಲ್ಲೂರು (ಉಡುಪಿ) ಕ್ಷೇತ್ರಗಳಿಗೆ ಟಿಪ್ಪು ಸುಲ್ತಾನ ಭೇಟಿಯಿತ್ತಿದ್ದನೆಂಬ ನಂಬಿಕೆಯಿದೆ. ಕೋಟೇಶ್ವರದಲ್ಲಿರುವ ಸಲಾಮ್ ಪೂಜೆಯ ಆಚರಣೆ ಪ್ರಸಿದ್ಧವಾದ ಕೊಲ್ಲೂರಿನಲ್ಲೂ ಆಚರಣೆಯಲ್ಲಿದೆಯಲ್ಲದೇ ಕೋಟೇಶ್ವರದ ಕೋಟಲಿಂಗೇಶ್ವರ ದೇಗುಲ ಮಸೀದಿಯಲ್ಲಿರುವಂತೆ ಗುಂಬಜ್‌ನ ರಚನೆಯನ್ನೂ ಹೊಂದಿದೆ. ಟಿಪ್ಪು ಯುದ್ಧಪ್ರೇಮಿ ಹಾಗು ಮಹತ್ವಾಕಾಂಕ್ಷಿ ಎನ್ನುವುದು ಎಷ್ಟು ಸತ್ಯವೋ ಧಾರ್ಮಿಕ ವ್ಯಕ್ತಿಯಾಗಿರುವ ಆತ ಹಿಂದೂ ದೇವದೇವತೆಗಳಲ್ಲೂ ಅಷ್ಟೇ ನಂಬಿಕೆಯುಳ್ಳವ ಆಗಿದ್ದನೆಂಬುವುದೂ ಅಷ್ಟೇ ಸತ್ಯ.

- ಶಶಿ ಪುತ್ತೂರು, ದಕ



ಹಿಂದೂತ್ವದ ಬೊಬ್ಬೆ ಲಾಭದಾಯಕ ವ್ಯಾಪಾರ!


ಇತ್ತೀಚೆಗೆ ತೀರಿಕೊಂಡ ವಿಎಚ್‌ಪಿ ನೇತಾರ ಅಶೋಕ್ ಸಿಂಘಾಲ್ ಇವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಪೇಜಾವರ



ಶ್ರೀಗಳು ಹೇಳಿದ್ದೇನೆಂದರೆ "ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ನಾನೇ ಅವರಿಗೆ ಹೇಳಿದ್ದೆ- ಅಯೋಧ್ಯೆಯ ರಾಮಮಂದಿರದ ಕೆಲಸ ನೀವು ತಕ್ಷಣ ಶುರು ಮಾಡಿ ಹಾಗೂ ಒಂದು ವೇಳೆ ಅದಕ್ಕಾಗಿ ನಿಮ್ಮ ಸರಕಾರ ಬಿದ್ದರೂ ಮರು ಚುನಾವಣೆಯಲ್ಲಿ ನಿಮಗೆ ಬಹುಮತ ಖಂಡಿತಾ ಸಿಗುತ್ತದೆ. ಒಂದು ವೇಳೆ ಆಗ ವಾಜಪೇಯಿ ನನ್ನ ಮಾತು ಕೇಳಿದ್ದರೆ ಸಿಂಘಾಲರ ಜೀವಿತ ಕಾಲದಲ್ಲಿಯೇ ರಾಮಮಂದಿರದ ಕೆಲಸ ಸಂಪೂರ್ಣವಾಗಿರುತಿತ್ತು."

ಹೀಗೆ ಪೇಜಾವರ ಸ್ವಾಮೀಜಿ ತಮ್ಮ ಬೆನ್ನು ತಾವೇ ತಟ್ಟಿಕೊಂಡರು. ಆದರೆ ವಿಚಿತ್ರವೆಂದರೆ ಸದ್ಯದಲ್ಲಿಯೇ ಪರ್ಯಾಯದ "ಸರ್ವಜ್ಞ" ಪೀಠ ಏರಲಿರುವ ಪೇಜಾವರರಿಗೆ ಸ್ವಲ್ಪವೂ ಕಾನೂನು ಜ್ಞಾನವಿಲ್ಲ. ಒಂದು ವಿವಾದ ಕೋರ್ಟಿನಲ್ಲಿ ಇದ್ದು ಆ ಕೋರ್ಟು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದ್ದರೆ ಅಲ್ಲಿ ದೊಡ್ಡ ದೇವಸ್ಥಾನ ಬಿಡಿ ಒಂದು ಸಣ್ಣ ಕಾಂಪೌಂಡ್ ಗೋಡೆಸಹಿತ ದೇಶದ ಪ್ರಧಾನಿ ಕಟ್ಟುವಂತಿಲ್ಲ ಎಂಬ ಸತ್ಯ 84 ವರ್ಷದ ಪೇಜಾವರಶ್ರೀಗೆ ಇನ್ನೂ ಗೊತ್ತಿಲ್ಲದಿರುವುದು ಆಶ್ಚರ್ಯ. ಇವರೇ ಸರ್ವಜ್ಞ ಪೀಠ ಏರಲಿರುವ ಮಹಾಜ್ಞಾನಿಗಳು.

ಅವರಿಗೆ ವಯಸ್ಸಾಗಿದೆ, ಹಾಗಾಗಿ ಅಸಂಗತ



ಮಾತನಾಡುತ್ತಾರೆ, ಅದನ್ನು ನಾವು ನಿರ್ಲಕ್ಷಿಸೋಣ ಎಂದು ಹಗುರವಾಗಿ ತೆಗೆದುಕೊಳ್ಳುವಂತೆಯೂ ಇಲ್ಲ. ಯಾಕೆಂದರೆ ಅವರು ಹೇಳುವ ವಿಷಯಗಳು ಸಮಾಜದಲ್ಲಿ ಸೌಹಾರ್ದ ಕದಡುವಂತಹ ವಿಷಯಗಳು. ಕೆಲವೇ ದಿನಗಳ ಹಿಂದೆ ಗೋಮಾಂಸದ ಬಗ್ಗೆ ಹಾಗೂ ಟಿಪ್ಪು ಜಯಂತಿ ಬಗ್ಗೆ ಅನಗತ್ಯವಾಗಿ ಮಾತನಾಡಿ ತಮ್ಮ ಸ್ವಪ್ರಚಾರದಲ್ಲಿ ತೊಡಗಿದ್ದರು. ಭಗವದ್ಗೀತೆಯಲ್ಲಿ ಎಲ್ಲೆಡೆ ಕೃಷ್ಣ ನಾನು ನಾನು ಅಹಂ ಅಹಂ ಎನ್ನುತ್ತಾ ಮುಗಿಸಿದಂತೆ ಇತ್ತೀಚೆಗೆ ಪೇಜಾವರಶ್ರೀಗಳಿಗೂ 'ನಾನು ನಾನು' ಎನ್ನುವ ಸ್ವಪ್ರಚಾರದ ಖಯಾಲಿ ಹೆಚ್ಚುತ್ತಿದೆ. ಎಷ್ಟಾದರೂ ಅರವತ್ತಕ್ಕೆ ಅರ್ಧ... ಎಂಬತ್ತಕ್ಕೆ ಪೂರಾ....!

ಇವರ ಓರಿಗೆಯವರಾದ ಉಡುಪಿ ಮೂಲದ ಪಕ್ಕಾ ಆರ್‌ಎಸ್‌ಎಸ್ ಕಾರ್ಯಕರ್ತ 85 ವರ್ಷದ ಪಿ.ಬಿ. ಆಚಾರ್ಯ ಎಂಬ ಅಸ್ಸಾಮ್ ರಾಜ್ಯಪಾಲ ಮೊನ್ನೆ ಒಂದು ಕಾರ್ಯಕ್ರಮದಲ್ಲಿ ಭಾರತದ ಅಲ್ಪಸಂಖ್ಯಾತರು ಪಾಕಿಸ್ತಾನಕ್ಕೆ ಹೋಗಬಹುದು ಎಂದಿದ್ದರು. ಒಟ್ಟಾರೆ ಆರ್‌ಎಸ್‌ಎಸ್ ಕಾರ್ಯಕರ್ತರು ಎಷ್ಟೇ ಉನ್ನತ ಹುದ್ದೆಗೇರಲಿ ಅವರ ಮೂಲ ಸಣ್ಣ ಬುದ್ಧಿ ಎಂದೂ ಬದಲಾಗುವುದಿಲ್ಲ.

ಆ ಬ್ರಹ್ಮಚಾರಿ ಅಶೋಕ್ ಸಿಂಘಾಲ್ ಶುರುಮಾಡಿದ್ದ ರಾಮಮಂದಿರದ ಕರ್ ಸೇವಾಕ್ಕೆ (ಕರಸೇವಾ ಅಂದರೆ ಹಸ್ತ ಸೇವೆ?) ಭಾರತಾದಂತ್ಯದಿಂದ ಕರ ಸೇವಕರು ಒಟ್ಟು ಐನೂರು ಕೋಟಿ ಇಟ್ಟಿಗೆಗಳನ್ನು ಅಯೋಧ್ಯಾಕ್ಕೆ ಕಳುಹಿಸಿದ್ದರು. ಆದರೆ ವಿಎಚ್‌ಪಿ ತಯಾರಿಸಿದ್ದ ರಾಮ ಮಂದಿರದ ನೀಲನಕ್ಷೆಯಂತೆ ಸಂಪೂರ್ಣ ಮಂದಿರ ಗ್ರಾನೈಟ್ ಕಲ್ಲಿನಿಂದ ಕಟ್ಟಲ್ಪಡಲಿದೆ. ಹಾಗಾದರೆ ಕರಸೇವಕರಿಂದ ಇಟ್ಟಿಗೆ ತರಿಸಿದ್ದು ಯಾಕೆ? ಕೊನೆಗೆ ಕರಸೇವಕರು ತಂದುಕೊಟ್ಟ ಐನೂರು ಕೋಟಿ ಇಟ್ಟಿಗೆಗಳು ಏನಾದವು ಗೊತ್ತೇ? ಅವನ್ನೆಲ್ಲ ಸಂಘ ಪರಿವಾರದವರು ಅಯೋಧ್ಯೆ ಸಮೀಪದ ಲಕ್ನೋವ್, ಕಾನ್ಪುರ, ಅಲಹಾಬಾದ್ ನಗರಗಳಲ್ಲಿ ದೊಡ್ಡ ಬಿಲ್ಡರುಗಳಿಗೆ ಒಂದು ರೂಪಾಯಿಗೆ ಒಂದು ಇಟ್ಟಿಗೆಯಂತೆ ಮಾರಿದರಂತೆ. ಹೀಗೆ ಒಟ್ಟು ಐನೂರು ಕೋಟಿ ರೂಪಾಯಿ ಕೂಡಿತು. ಈ ಭಾರಿ ಮೊತ್ತ ಏನಾಯಿತು? ಜೊತೆಗೆ ಆಗ ರಾಮಮಂದಿರ ಕಟ್ಟಲು ದೇಶ-ವಿದೇಶದ ಹಿಂದೂ ಭಕ್ತರು ದಾನ ಮಾಡಿದ 1300 ಕೋಟಿ ರೂಪಾಯಿ ಮೌಲ್ಯದ ಚಿನ್ನಬೆಳ್ಳಿಯ ಆಭರಣಗಳು ಏನಾದವು? ದಿವಂಗತ ಸಿಂಘಾಲರ ಡಬ್ಬಲ್ ಮುಖದ ಪರಿಚಯವಿದ್ದವರಿಗೆ ಉತ್ತರ ಗೊತ್ತು! ಇನ್ನು ಕಲ್ಲಡ್ಕ ಭಟ್ಟ, ಪ್ರವೀಣ್ ತೊಗಾಡಿಯಾ, ಸಾಧ್ವಿ ಬಾಲಿಕಾ ಇವರಿಗೆಲ್ಲಾ ಹಿಂದೂತ್ವ ಸಭೆಯಲ್ಲಿ ಪ್ರಚೋದಕ ಭಾಷಣ ಮಾಡಲು ಆಯೋಜಕರಿಂದ ಸಂದಾಯವಾಗುವ ಫೀಸ್ ಎಷ್ಟು ಗೊತ್ತೇ? ಒಂದು ಭಾಷಣಕ್ಕೆ ಒಂದು ಲಕ್ಷ ರೂಪಾಯಿಯಂತೆ! ಹಿಂದೂತ್ವದ ಬೊಬ್ಬೆ ಕೆಲವರಿಗೆ ಎಷ್ಟೊಂದು ಲಾಭದಾಯಕ ವ್ಯಾಪಾರ!

- ಹರೀಶ್ ಎಂ ರಾವ್, ಉಡುಪಿ


ಆಮಿರ್ ಮಾತನ್ನ ಸಾಬೀತುಮಾಡಿದ ಚೆಡ್ಡಿಗಳು

ಅಮಿರ್ ಲೋಕಜ್ಞಾನ ತಿಳಿಯದ ದಡ್ಡನೇನಲ್ಲ. ಶಾರೂಖ್‌ನಂತವರೇ ತಮ್ಮ ಹೇಳಿಕೆಗಳಿಗಾಗಿ ಸನಾತನ ವಾದಿಗಳ ಟೀಕಾಪ್ರಹಾರಕ್ಕೆ ಗುರಿಯಾಗಿದ್ದು ಇತ್ಯಾದಿಗಳನ್ನು ಅಮಿರ್ ನೋಡಿದಂತವನೇ. ಇದೀಗ ದೇಶಾದ್ಯಂತ ಅಸಹಿಷ್ಣುತೆಯ ಪರವಿರೋಧ ಬಗ್ಗೆ ತೀವ್ರ ಚರ್ಚೆಗಳಾಗುತ್ತಿವೆ. ಅಸಹಿಷ್ಣುತೆಯ ಬಲಿಪಶುಗಳೆನಿಸಿಕೊಂಡವರು ಮಾತನಾಡುವಂತಹ ಪರಿಸ್ಥಿತಿಯೇ ಈಗಿಲ್ಲ. ಹಾಗಿದ್ದೂ ಬುದ್ಧಿವಂತ ಅಮಿರ್ ಹದತಪ್ಪಿ ಮಾತಾಡುವ ಸಾಧ್ಯತೆ ಇದೆಯೇ? ಮುಂದಾಗುವ ಪ್ರತಿಕ್ರಿಯೆಗಳ ಅರಿವಿದ್ದುಕೊಂಡೇ ಅಮಿರ್ ಈ ಎಲ್ಲಾ ಮಾತನಾಡಿದ್ದಾನೆ. ಅದಕ್ಕಾಗೇ ಎಂತಹ ಟೀಕೆಗಳೇ ಬಂದಿದ್ದರೂ ತನ್ನ ಮಾತುಗಳಿಗೆ ತಾನಿನ್ನೂ ಬದ್ಧನಿದ್ದೇನೆಂದು ಆತ ಹೇಳಿಕೊಂಡಿರುವುದು.

ಮುಸ್ಲಿಮನಾಗಿ ಅಮಿರನ ಅಸಹಿಷ್ಣುತೆಯ ಮಾತನ್ನ ಗ್ರಹಿಸುವುದು ಕೂಡ ತಪ್ಪು. ಯಾಕೆಂದರೆ ಅದು ಆತನ ಮಾತಲ್ಲ, ಆತನ ಮಡದಿ ಬ್ರಾಹ್ಮಣ ಸಮುದಾಯದ ಕಿರಣ್‌ರಾವ್ ಹೇಳಿದಂತಹ ಮಾತನ್ನ ಅಮಿರ್ ಸಾಂದರ್ಭಿಕವಾಗಿ ಇಲ್ಲಿ ಉಲ್ಲೇಖಿಸಿದ್ದಾನಷ್ಟೆ. ಇದು ಸರಿಯೇ ತಪ್ಪೇ? ನೀನು ಹೇಳಿದ್ದು ಹೌದೇ? ಎಂದು ಆಕೆಯನ್ನ ಪ್ರಶ್ನಿಸಬೇಕೇ ವಿನಃ ಮತಾಂಧ ಹಳದಿ ಕಣ್ಣಿನವರು ಅಮಿರ್‌ನನ್ನು ಪಾಕಿಸ್ತಾನಕ್ಕೆ ಹೋಗು ಸಿರಿಯಾಕ್ಕೆ ಹೋಗು ಎಂದರೆ ಅದಕ್ಕೆ ಅರ್ಥವಿಲ್ಲ.

ಗೌರಿ ಮೇಡಮ್ ಅಂದಂತೆ ಅಮಿರ್‌ನ ಇನ್ನಿತರ ಅಭಿಪ್ರಾಯಗಳನ್ನು ಬದಿಗಿಟ್ಟು ಕೇವಲ ಈ ಮಾತನ್ನಷ್ಟೇ ಪ್ರಮುಖವಾಗಿಸಿ ಮಾಧ್ಯಮಗಳು ಜನರ ದಿಕ್ಕುತಪ್ಪಿಸುತ್ತಿವೆ. "ನಾನು ಭಾರತ ಬಿಟ್ಟು ಹೋಗುತ್ತೇನೆಂದು" ನೇರವಾಗಿ ಆತ ಎಲ್ಲೂ ಹೇಳದಿದ್ದರೂ (ಆತನ ಮಾತಿನಲ್ಲಿ ಅಂತಹ ಬೇಸರದ ವಾತಾವರಣ ಇಲ್ಲಿ ಸೃಷ್ಟಿಗೊಂಡಿದೆ ಎನ್ನುವ ಅಭಿಪ್ರಾಯ ಸೂಚ್ಯವಾಗಿ ವ್ಯಕ್ತಗೊಂಡಿದೆಯಷ್ಟೆ) ಆತನ ಮಾತನ್ನ ಆ ರೀತಿಯ ಅರ್ಥಬರುವಂತೆ ತಿರುಚಿ ಬಿಂಬಿಸಲಾಗುತ್ತಿದೆ. ಅಮಿರ್ ಉಲ್ಲೇಖಿಸಿದಂತೆ ಕಿರಣ್ ರಾವ್ ಅಂತಹ ಮಾತನಾಡಿದರೂ ತಪ್ಪೇನಿದೆ? ಅಮಿರ್ ಸಾಮಾಜಿಕ ಕಾಳಜಿ ತೋರಿದ 'ಸತ್ಯಮೇವ ಜಯತೆ'ಯನ್ನು ಅಪರಾಧದ ದೃಷ್ಟಿಯಿಂದ ನೋಡಲಾಯಿತು.

ಅಮಿರ್‌ನ ಮಾತುಗಳು ಮಾಧ್ಯಮಗಳಲ್ಲಿ ಬಂದಾಕ್ಷಣ ಅಮಿರ್ ಹೇಳಿದ ಅಸಹಿಷ್ಣುತೆ ಇರುವುದು ಸುಳ್ಳು ಎನ್ನುತ್ತಾ ಅಮಿರ್‌ನ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳುವ ತಾಳ್ಮೆಯನ್ನೂ ತೋರದೇ, ತಪ್ಪೋ ಸರಿಯೋ ಒಬ್ಬ ಸೆಲೆಬ್ರಿಟಿಯಾಗಿ (ಅಥವ ಸಾಮಾನ್ಯನಾಗಿದ್ದರೂ ಕೂಡ) ತನ್ನದೊಂದು ಅಭಿಪ್ರಾಯ ಹಂಚಿಕೊಳ್ಳುವ ಹಕ್ಕು ಅಮಿರ್ ಖಾನ್‌ಗೂ ಇದೆ ಎಂಬುವುದನ್ನೂ ಮರೆತು ಅಮಿರನ ಮೇಲೆ ಹರಿಹಾಯ್ದು ಇವರ ನಡೆ ಅಮಿರ್ ಹೇಳಿದಂತಹ ಅಸಹಿಷ್ಣುತೆ ಇರುವುದು ಸತ್ಯ ಎಂದೇ ಎತ್ತಿ ತೋರಿಸಿದಂತಾಯ್ತಲ್ಲವೇ? ಅಮಿರ್ ಪರೋಕ್ಷವಾಗಿ ಈ ಮೂಲಕ ಎತ್ತಿ ತೋರಿಸಿದ ಈ ಅಸಹಿಷ್ಣುತಾ ಚೀರಾಟಗಳಿಗಿಂತ



ದೊಡ್ಡ ಸಾಕ್ಷಿ ಬೇರೆ ಬೇಕೆ? ಅಷ್ಟಕ್ಕೂ ಚರ
ಎಂದಾದರೂ ಬದಲಾಗುವುದುಂಟೇ?

ಆಮೀರ್, ಶಾರೂಖ್‌ನಂತಹ ಮುಸಲ್ಮಾನ
ತೋರಿ ಹೀರೋ ಮಾಡಿದ್ದೇ ನಾವು. ಅ
ಅವರಿಗಿರಲಿ ಎನ್ನುವ ಉಪೇಂದ್ರರಂತವರು ಒಂದ
ನೆನಪಿನಲ್ಲಿಡಲಿ. ಹಿಂದೂತ್ವ ಹಿಂದೂತ್ವ ಎಂದ
ಎಷ್ಟೇ ಬೊಬ್ಬಿಡಲಿ ವಾಸ್ತವ ಏನೆಂದರೆ ಸಾವ
ಈ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳರು. ಅವರಿಗ
ಜಾತಿ ಮುಖ್ಯವಲ್ಲ, ಕಲೆ ಅಷ್ಟೆ ಮುಖ್ಯ.

ಅಮಿರ್‌ನ ಮಾತುಗಳಿಗೆ ಪ್ರತಿಕ್ರಿಯೆರಿಯಾ
ಸೇನಾ ಅಮಿರ್ ಕುಟುಂಬಕ್ಕೆ ಪಾಕಿಸ್ತಾನದ ಟಿಕೆ
ಮಾಡಿದೆಯಂತೆ. ಅದಕ್ಕಿಂತ ಇನ್ನೂ ತಮಾ
ಶಿವಸೇನೆ ತನ್ನ ಸಾಮ್ನಾದಲ್ಲಿ ಈ 'ರಣ್ ಛೋಡ್
ಹಿಗ್ಗಾಮುಗ್ಗಾ ಜರಿದಿದೆ. 'ಭಾರತ ತಮ್ಮದ್ದಲ್ಲವೆ
ಹೊಂದಿರುವವರು ದೇಶಭಕ್ತಿ ಮತ್ತು ಸತ್ಯಮೇವ
ಬಗ್ಗೆ ಮಾತನಾಡಬಾರದು' ಎಂದು ಫರ್ಮಾನು
ರುವ ಶಿವಸೇನೆ ಮೂಲತಃ ಭಾರತದೊಳಗಿನ
ಹಾಗು ಧಾರ್ಮಿಕ ಅಸಹಿಷ್ಣುತೆಗೋಸ್ಕರ ಹ
ಕೊಳಕು ಕೂಸು ತಾನೆ? ದಕ್ಷಿಣದ ಮದ
ಪೂರ್ವದ ಬಿಹಾರಿಗಳು, ಉತ್ತರದ ಉತ್ತರ
ಭಾರತೀಯರೇ ಆಗಿದ್ದರೂ ಕೂಡ ಅವರ ವಿರು
ಈ ಕೆಟ್ಟ ಜಂತುಗಳ ಅಸಹಿಷ್ಣುತೆ ಜಗತ್ತ
ಇಂತವರಿಂದ ಆಮೀರ್ ಬುದ್ಧಿ ಕಲಿಯಬೇ

ಅಂದಹಾಗೆ, ಕಳೆದ ಸಂಚಿಕೆಯಲ್ಲಿ
ಶೇಣವರವರು ಅಂದಂತೆ ಕರಾವಳಿಯಲ್ಲಿ ಗೌ
ಪತ್ರಿಕೆ ಕೊಳ್ಳುವುದೆಂದರೇ ಹೇಗೆ ಕಾತುರವೊ
ಮನಸ್ಸಿಗೆ ಹಿಂಸೆ ಅನ್ನಿಸುವುದೂ ಹೌದು.
ನಿಗೂಢ ಹಾಗು ಕಾನೂನುಬಾಹಿರ ವಸ್ತುವನ್ನು
ವಂತೆ ಕೇಳಿ ತೆಗೆದುಕೊಳ್ಳಬೇಕಾಗುತ್ತದೆ. ಅ
ಚೆಡ್ಡಿ ಮೈಂಡೆಡ್ ಆಗಿದ್ದರೆ ಕೊಡುವಾಗ ಮು
ರಾಚುವಂತಿರುವ ಅವರಿಗೆ ಅಪಥ್ಯದ
(ಮೋದಿಯನ್ನು ತೆಗಳಿದ್ದೋ, ಅನಂತ ಮೂರ್ತಿ
ಹೊಗಳಿದ್ದೋ ನೋಡಿ) ಓದಿಕೊಂಡು ಕ
ನೋಡಿ ಕೊಡುವು ದುಂಟು. ಕೆಲವೊ
ಮೂಲಕವೂ ಅಸಭ್ಯದ ಮಾತಾಡಿಯೂ ಕೊಡ
ಹೀಗಾಗಿ ನಮ್ಮ ಗೌರಿ ಲಂಕೇಶ್ ಪತ್ರಿಕೆ ಬಯ
ತಲಪುವುದರಲ್ಲಿ ಕರಾವಳಿಯಲ್ಲಿ ತನ್ನದೇ ಆದ
ಆದರೂ ಕೋಮುವಾದದ ಹಾಗು ಮೌ
ವಿರುದ್ಧ ನಮ್ಮ ಗೌರವಾನ್ವಿತ ಪತ್ರಿಕೆಗೆ ಸ್ಪಂ
ಬಹುತೇಕರು ಕರಾವಳಿಗರೇ ಎನ್ನುವುದು ಅ
ಹಾಗು ಸಮಾಧಾನಕರ ಸಂಗತಿಯಾಗಿದೆ.
ಪೂರಕ ವಾತಾವರಣ ಇಲ್ಲದಿದ್ದರೂ ಕೂಡ
ಮತ್ತು ಸಮಾನತೆ ಬಯಸುವ ಇವರ ತು
ಹೆಮ್ಮೆಯೆನಿಸುತ್ತದೆ.

- ಅವಿನಾಶ್ ಎಮ್.ಎಸ್.

ಸೈಬರ್ ವಂಚಕರನ್ನು ಪೊಲೀಸರು ಹಿಡಿಯಲಿ


ಸಾಧ್ವಿ ಬಾಲಕಿ ಸರಸ್ವತಿ ಎಂಬ ಸಂಘ
ದಿಕ್ಕೊಚಿ ಹುಡುಗಿಯ ತಲೆಯನ್ನು ಇನ್ನೊಂ
ಹುಡುಗಿಯ ನಗ್ನ ದೇಹಕ್ಕೆ ಮಾರ್ಫಿಂ
ವಾಟ್ಸ್-ಅಪ್‌ನಲ್ಲಿ ಹಾಕಿ ಸಾಧ್ವಿ ಸರಸ್ವತಿಗೆ
ಮಾಡಿದ ಮಹಮ್ಮದ್ ನೌಫಾಲ್ ಎಂಬ
ಯುವಕನನ್ನು ಹೈದರಾಬಾದ್ ವಿಮಾನ
ಬಂಧಿಸಿ ಮಂಗಳೂರಿಗೆ ತರಲಾಯಿತು. ಆಧುನಿ
ಉಪಯೋಗಿಸಿ ಕಿಡಿಗೇಡಿಯ ಫೋನ
ಕಂಡುಹಿಡಿದು ಕರ್ನಾಟಕದ ಸೈಬರ್
ಬಂಧಿಸಿದ್ದಕ್ಕೆ ಅಭಿನಂದನೆಗಳು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.co
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬ
ಪ್ರತಿಕ್ರಿಯೆಗಳನ್ನು 9980331427
ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳು



...ಆರೋಪಿಗೆ ಎರಡೆರಡು ಶಿಕ್ಷೆಯಾಗಬೇಕು. ...ಎಂದರೆ ಅವನು ಎರಡು ತಪ್ಪು ಮಾಡಿದ್ದಾನೆ. ...ಲನೆಯ ತಪ್ಪು ಎಂದರೆ ಒಬ್ಬ ಸಾಧ್ವಿಯ ತಲೆಯನ್ನು ...ದೋ ಒಂದು ಹೆಣ್ಣಿನ ನಗ್ನ ದೇಹಕ್ಕೆ ಜೋಡಿಸಿ ಆ ...ಅವಮಾನ ಮಾಡಿದ್ದಾನೆ. ಇನ್ನೊಂದು ದೊಡ್ಡ ...ವರೆ ವಿಕಾರ ಹಿಂದೂತ್ವ ವಿಷ ತುಂಬಿದ ತಲೆಯನ್ನು ...ಮುಗ್ಧ ಹೆಣ್ಣಿನ ದೇಹಕ್ಕೆ ಜೋಡಿಸಿ ಆ ದೇಹಕ್ಕೂ ...ವ ಅವಮಾನ ಮಾಡಿದ್ದಾನೆ. ಹೀಗೆ ತಲೆ ಮತ್ತು ...ಎರಡಕ್ಕೂ ಅವಮಾನ ಮಾಡಿದ ನೌಫಾಲ್‌ಗೆ ...ಡು ಶಿಕ್ಷೆ ಆಗಲೇ ಬೇಕು. ಇನ್ನು ಪೇಜಾವರಸ್ವಾಮಿ ...ಈಶ್ವರಪ್ಪ ಇವರಿಗೂ ಫೋನ್ ಹಾಗೂ ಫೇಸ್‌ಬುಕ್ ...ಲ್ಲೂ ಬೆದರಿಕೆ ಹಾಕಿದವರನ್ನು ಕರ್ನಾಟಕದ ಸೈಬರ್ ...ಸರು ಸದ್ಯದಲ್ಲೇ ಹಿಡಿಯುವುದು ಖಂಡಿತ. ...ದರೆ ರಾಜಕೀಯ ಹಾಗೂ ಧಾರ್ಮಿಕ ನೇತಾರರು ...ಗಿಂತ ಮೇಲು ತಾನೇ. ಸಾಮಾನ್ಯ ಜನರಂತೆ ಅವರು ...ಳಲ್ಲವಲ್ಲಾ.

...ದರೆ ನಮ್ಮಂತಹ ಸಾಮಾನ್ಯ ಜನರನ್ನು ಮೋಸ ...ರುವ ಉತ್ತರ ಭಾರತದ ಎಟಿಎಮ್ ಕಾರ್ಡ್ ...ಕರನ್ನು ಮಾತ್ರ ಹಿಡಿಯಲು ನಮ್ಮ ಸೈಬರ್ ...ಸರಿಗೆ ಸಮಯವೇ ಇಲ್ಲ ಪಾಪ. ನಿಜವಾಗಿ ನೌಫಾಲ ...ಹಿಡಿದಿದ್ದಕ್ಕಿಂತ ಹಿಂದಿಯಲ್ಲಿ ಮಾತನಾಡಿ ಕನ್ನಡಿಗರ ...ಮ್ ಕಾರ್ಡ್ ಪಾಸ್‌ವರ್ಡ್ ಪಡೆದು ವಂಚಿಸುವ ...ಮತ್ತು ರಾಜಸ್ತಾನ್ ಮೂಲದ ವಂಚಕರನ್ನು ...ಯುವುದು ಪೊಲೀಸರಿಗೆ ತುಂಬಾ ಸುಲಭ. ಹೇಗೆಂದರೆ ...ಟಿಎಮ್ ವಂಚಕರ ಮೊಬೈಲ್ ಫೋನ್ ನಂಬರ್




...ನ ಮೊಬೈಲಿನಲ್ಲಿ ದಾಖಲಾಗಿರುತ್ತದೆ. ಜತೆಗೆ ...ಕರು ಸಂತ್ರಸ್ತನ ಖಾತೆಯಿಂದ ಹಣ ಎಲ್ಲಿಗೆ ...ಯಿಸಿದ್ದಾರೆ ಎಂದು ಸಂತ್ರಸ್ತನ ಖಾತೆಯಿಂದಲೇ ...ಯುತ್ತದೆ. ವಂಚಕರು ಆನ್-ಲೈನ್ ಮಾರಾಟ ...ಯಿಂದ ವಸ್ತುಗಳನ್ನು ಖರೀದಿಸಲು ಹಣ ಬಳಸಿದ್ದರೆ ...ವನ್ನು ವಂಚಕರ ಯಾವ ವಿಳಾಸಕ್ಕೆ ಆ ಮಾರ್ಕೆಟಿಂಗ್ ...ಕಳುಹಿಸಿದೆ ಎಂಬುದು ಅವರ ಕಾಂಪ್ಯೂಟರ್‌ನಲ್ಲಿ ...ವಾಗಿರುತ್ತದೆ. ಒಂದು ವೇಳೆ ಸಂತ್ರಸ್ತನ ಖಾತೆಯಿಂದ ...ದೇ ಬೇರೆ ಖಾತೆಗೆ ವಂಚಕರು ಹಣ ವರ್ಗಾಯಿಸಿದ್ದರೆ ...ಬ್ಯಾಂಕಿನಿಂದ ವಂಚಕನ ಫೋಟೋ ಮತ್ತು ವಿಳಾಸ ...ಗುತ್ತದೆ. ಮೂಲ ಎಟಿಎಮ್ ಕಾರ್ಡ್ ಇಲ್ಲದೇ ...ಹಣ ಎಟಿಎಮ್‌ನಿಂದ ಡ್ರಾ ಮಾಡುವಂತೆಯೇ ...ವಾಗಿ ವಂಚಕರು ಕೇವಲ ವರ್ಗಾವಣೆ ಮೂಲಕ ...ಲಪಟಾಯಿಸುತ್ತಾರೆ. ಇದೀ ಕರ್ನಾಟಕ ರಾಜ್ಯದಲ್ಲಿ ...ರು ಜನರಿಗೆ ಈ ಹಿಂದಿವಾಲಾ ಗ್ಯಾಂಗ್ ವಂಚಿಸಿದ್ದು ...ಗೆ ಒಟ್ಟು ಇನ್ನೂರು ಕೋಟಿ ರೂಪಾಯಿಗೂ ಮಿಕ್ಕಿ ...ಗ್ಯಾಂಗ್ ಲಪಟಾಯಿಸಿದೆ.

...ಕ್ಕೆ ಒಂದಾದರೂ ಇಂತಹ ವಂಚನೆ ಪ್ರಕರಣ ...ರ್ನಾಟಕದಲ್ಲಿ ನಡೆಯುತ್ತದೆ. ಇಲ್ಲಿಯವರೆಗೆ ನಮ್ಮ ...ಕ್ಕ ಕರ್ನಾಟಕ ಪೊಲೀಸರು ಕೇವಲ ಒಂದೇ ...ಇಂತಹ ವಂಚನೆ ಕೇಸ್ ಭೇದಿಸಿದ್ದಾರೆ. ಅದೆಂದರೆ ...ಡಿಐಜಿಯವರ ಪತ್ನಿ ಮೋಸ ಹೋಗಿದ್ದಾಗ ...ಒಂದೇ ತಿಂಗಳಲ್ಲಿ ದಿಲ್ಲಿಗೆ ಹೋಗಿ ವಂಚಕ ...ಹೆಡೆಮುರಿ ಕಟ್ಟಿ ತಂದು ಜೈಲಿಗೆ ತಳ್ಳಿ ಡಿಐಜಿ ...ದ ಶಹಬ್ಬಾಸ್ ಎನಿಸಿಕೊಂಡಿದ್ದರು. ನಮ್ಮ ಹೊಸ ...ತ್ರಿ, ಡಾ.ಜಿ.ಪರಮೇಶ್ವರರು ಈ ಬಗ್ಗೆ ಗಮನ ...ಸಿದೆ.

- ಗಿರೀಶ್ ಟಿ ಕುಂಟೆ, ಬೆಂಗಳೂರು


ಆಸ್ಕರ್ ಮನಸ್ಸಿನಲ್ಲಿಟ್ಟುಕೊಂಡು ಸಿನಿಮಾ ಮಾಡಿದೆ

'ಕೇರ್ ಆಫ್ ಫುಟ್‌ಪಾತ್' ಸಿನಿಮಾದ ಮೂಲಕ ನಿರ್ದೇಶಕನಾದ ಮಾಜಿ ಬಾಲನಟ ಕಿಶನ್ ಈಗ ಮತ್ತೊಂದು ಚಿತ್ರಕ್ಕೆ ನಿರ್ದೇಶಕರಾಗಿದ್ದಾರೆ. ಆಸ್ಕರ್ ಪ್ರಶಸ್ತಿಗೆ ಕಳುಹಿಸಲೆಂದೆ ಚಿತ್ರಕತೆಯಲ್ಲಿ ಹಲವು ಅಂಶಗಳನ್ನು ತಮ್ಮ ಹೊಸ ಸಿನಿಮಾದಲ್ಲಿ ಸೇರಿಸಿದ್ದಾರೆ.



*** ಏಳು ವರ್ಷದ ಹಿಂದೆಯೇ 'ಕೇರ್ ಆಫ್ ಫುಟ್‌ಪಾತ್' ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದೀರಿ. ಮತ್ತೆ ಅದೇ ಟೈಟಲ್ ಇಡಲು ಕಾರಣ?**

'ಕೇರ್ ಆಫ್ ಫುಟ್‌ಪಾತ್' ಅಂದಾಕ್ಷಣ ಅದರ ಮುಂದುವರಿಕೆಯ ಸಿನಿಮಾ ಅಂತ ಅನ್ನಿಸಬಹುದು. ಆದರೆ, ಆ ಚಿತ್ರಕ್ಕೂ ಈ ಚಿತ್ರಕ್ಕೂ ಯಾವ ಸಂಬಂಧವೂ ಇಲ್ಲ.



ಆ ಕತೆ ಮಕ್ಕಳ ಎಜುಕೇಷನ್‌ಗೆ ಸಂಬಂಧಿಸಿದ್ದಾಗಿತ್ತು. ಆದರೆ ಹೊಸ ಸಿನಿಮಾ ಬಾಲಾಪರಾಧಿಗಳ ಸುತ್ತ ಹೆಣೆದಿರುವ ಕತೆಯನ್ನು ಆಧರಿಸಿದೆ. ಎರಡೂ ಚಿತ್ರದ ಥೀಮ್ ಒಂದೇ ಆಗಿದೆ. ಹೀಗಾಗಿ ಅದೇ ಟೈಟಲ್ ಇಟ್ಟೆ.

*** ಬಾಲಾಪರಾಧಿಗಳ ಕತೆ ತೆಗೆದುಕೊಂಡಿದ್ದೀರಿ. ಈ ಕುರಿತು ಏನಾದರೂ ವಿಷಯ ಸಂಗ್ರಹಣೆ ಮಾಡಿದ್ದೀರಾ?**

ಮೂರ್ನಾಲ್ಕು ವರ್ಷಗಳಿಂದ ನಾನು ಬಾಲಾಪರಾಧಿಗಳಿಗಾಗಿ ಆಯೋಜಿಸುವ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆ. ಅವರ ಬಗ್ಗೆ ತಿಳಿದುಕೊಳ್ಳುತ್ತಿದ್ದೆ. ಅಲ್ಲದೇ ಈ ಕುರಿತಾಗಿ ಪೊಲೀಸ್ ಅಧಿಕಾರಿಗಳೂ ವಿಷಯ ಕೊಟ್ಟಿದ್ದಾರೆ. ಮಾಜಿ ಗೃಹಮಂತ್ರಿ ಕೆ.ಜೆ.ಜಾರ್ಜ್ ಅವರು ಕೂಡ ತಾವು ನೋಡಿದ ಹಲವು ಘಟನೆಗಳನ್ನು ವಿವರಿಸಿದ್ದಾರೆ. ಅಲ್ಲದೇ ನಾನೇ ಸ್ವತಃ ಅಂತಹ ಅಪರಾಧಿಗಳನ್ನು ಭೇಟಿ ಮಾಡಿ ವಿಷಯ ಸಂಗ್ರಹಿಸಿದ್ದೇನೆ. ಅವರ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದೇನೆ. ಈ ಎಲ್ಲಾ ಯತ್ನಗಳು ಅವರ ಬದುಕನ್ನು ಕುರಿತು ಕೆಲವು ಅಂಶಗಳನ್ನು ಸಿನಿಮಾದಲ್ಲಿ ಸೇರಿಸಲು ಸಹಾಯ ಆಗಿದೆ.

*** ಸಿನಿಮಾದಲ್ಲಿ ಏನೆಲ್ಲ ವಿಶೇಷತೆಗಳಿವೆ?**

ಪೊಲೀಸ್ ಅಧಿಕಾರಿಗಳು ಚಿತ್ರಕತೆಯನ್ನು ರೂಪಿಸಲು ಸಹಾಯ ಮಾಡಿದ್ದಾರೆ. ಅಲ್ಲದೇ ರಿಯಲ್ ಲೊಕೇಶನ್‌ನಲ್ಲಿ ಚಿತ್ರೀಕರಿಸಲು ಅನುಮತಿ ಕೊಟ್ಟಿದ್ದಾರೆ. ಜೊತೆಗೆ ಕೆಲವು ಪೊಲೀಸ್ ಅಧಿಕಾರಿಗಳು ಕ್ಯಾಮೆರಾ ಮುಂದೆಯೂ ನಿಂತಿದ್ದಾರೆ. ಚಿತ್ರಕತೆ ಮತ್ತು ತಾರಾಗಣವೇ ವಿಶೇಷವಾಗಿದೆ.

*** ಕತೆ ಮತ್ತು ಪಾತ್ರಗಳ ಬಗ್ಗೆ ಹೇಳಿ?**

ಇದು ನಾಲ್ಕು ಯುವಕರ ಸುತ್ತ ಹೆಣೆಯಲಾದ ಕತೆ. ಮೂರು ಹುಡುಗರು ಮತ್ತು ಒಂದು ಹುಡುಗಿ ಆ ತಂಡದಲ್ಲಿರುತ್ತಾರೆ. ಅವಿಕಾ ಗೋರ್ ಆ ಹುಡುಗಿ. ದೀಪ್ ಪಾಠಕ್, ಡಿಂಗ್ರಿ ನರೇಶ್ ಮತ್ತು ನಾನು ಪ್ರಮುಖ ಪಾತ್ರ ನಿರ್ವಹಿಸಿದ್ದೇವೆ. ಈ ನಾಲ್ವರು ಸೇರಿಕೊಂಡು ಓರ್ವ ಪೊಲೀಸ್ ಆಫೀಸರ್‌ನನ್ನು ಸಾಯಿಸಲು ಪ್ಲಾನ್ ಮಾಡುತ್ತಾರೆ. ಅವನನ್ನು ಕೊಲ್ಲಲು ಯಾಕೆ ಪ್ಲಾನ್ ಮಾಡುತ್ತಾರೆ? ಅದರಲ್ಲಿ ಅವರು ಸಕ್ಸಸ್ ಆಗುತ್ತಾರಾ? ಇದೇ ಚಿತ್ರದ ಕತೆ. ಜೆಕೆ ಇಲ್ಲಿ ಪೊಲೀಸ್ ಆಫೀಸರ್ ಪಾತ್ರ ಮಾಡಿದ್ದಾರೆ. ವಕೀಲರಾಗಿ ಇಶಾ ಡಿಯೋಲ್ ನಟಿಸಿದ್ದಾರೆ. ಸಯ್ಯದ್ ಶಫಿ, ಮಾಸ್ಟರ್ ಹಿರಣಯ್ಯ ಕೂಡ ಇದರಲ್ಲಿ ನಟಿಸಿದ್ದಾರೆ.

*** ಕನ್ನಡದ ಜತೆ ಮತ್ತಾವ ಭಾಷೆಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ?**

ಕನ್ನಡ ಮತ್ತು ಹಿಂದಿಯಲ್ಲಿ ನೇರವಾಗಿ ಶೂಟಿಂಗ್ ಮಾಡಿದ್ದೇವೆ. ತೆಲುಗಿಗೆ ಡಬ್ಬಿಂಗ್ ಮಾಡುತ್ತಿದ್ದೇವೆ. ಇದನ್ನು ಗಮನದಲ್ಲಿ ಇಟ್ಟುಕೊಂಡೆ ತಾರಾಗಣದ ಆಯ್ಕೆಯನ್ನೂ ಮಾಡಿದ್ದೇವೆ. ಹಿಂದಿ ಮತ್ತು ತೆಲುಗಿನಲ್ಲಿ ಫೇಮಸ್ ಆಗಿರುವ ಕಲಾವಿದರೇ ಈ ಸಿನಿಮಾದಲ್ಲಿದ್ದಾರೆ. ಮೊದಲು ಕನ್ನಡದಲ್ಲಿ ಆನಂತರ ತೆಲುಗಿನಲ್ಲಿ ಸಿನಿಮಾ ಬಿಡುಗಡೆ ಆಗಲಿದೆ.

*** ನಿರ್ದೇಶಕರಾಗಿ ಮತ್ತು ನಟರಾಗಿ ಏನೆಲ್ಲ ಚಾಲೇಂಜ್ ಆಯಿತು?**

ನಾನು ಇಂತಹ ಚಾಲೇಂಜ್ ತೆಗೆದುಕೊಂಡಿರುವುದು ಇದೇ ಮೊದಲೇನೂ ಅಲ್ಲ, ನನ್ನ ಚೊಚ್ಚಲು ನಿರ್ದೇಶನದ ಚಿತ್ರದಲ್ಲೂ ನಾನು ನಟಿಸಿದ್ದೆ. ಆದರೆ, ಈ ಸಿನಿಮಾದಲ್ಲಿ ನನ್ನ ಪಾತ್ರ ಬೇರೆಯದ್ದೇ ಆಗಿದೆ. ಅಲ್ಲದೇ ಹೆಸರಾಂತ ಕಲಾವಿದರ ಜತೆ ನಾನು ಕಾಣಿಸಿಕೊಳ್ಳಬೇಕಿತ್ತು. ಹೀಗಾಗಿ ಸ್ವಲ್ಪ ಚಾಲೇಂಜ್ ಅಂತ ಅನ್ನಿಸಿತು. ಉಳಿದಂತೆ ತೊಂದರೆ ಏನೂ ಆಗಲಿಲ್ಲ. ನಾವು ಅಂದುಕೊಂಡಂತೆಯೇ ಚಿತ್ರ ಮೂಡಿಬಂದಿದೆ.

*** ಆಸ್ಕರ್ ಪ್ರಶಸ್ತಿಗಾಗಿ ಸಿನಿಮಾ ಕಳುಹಿಸಿದ್ದೀರಿ. ಆ ಕುರಿತು ಹೇಳಿ?**

ಈ ಸಿನಿಮಾದ ಕತೆಯನ್ನು ಮಾಡಿಕೊಳ್ಳುವಾಗಲೇ ನಾವು ಆಸ್ಕರ್‌ಗೆ ಕಳುಹಿಸಬೇಕು ಅಂತ ಡಿಸೈಡ್ ಮಾಡಿದ್ದೆವು. ಅಲ್ಲದೇ ಅದೇ ಮಾದರಿಯಲ್ಲೇ ಚಿತ್ರಕತೆಯನ್ನೂ ಬರೆದುಕೊಂಡೆವು. ಈಗಾಗಲೇ ಆಸ್ಕರ್ ಅಕಾಡೆಮಿ ಸದಸ್ಯರು ಸಿನಿಮಾ ನೋಡುತ್ತಿದ್ದಾರೆ. ಅಲ್ಲದೇ ಯುಎಸ್‌ಎನ್ ಹಲವು ಪ್ರೇಕ್ಷಕರು ಸಿನಿಮಾ ನೋಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಸದ್ಯ ಆಸ್ಕರ್ ರೇಸ್‌ನಲ್ಲಂತೂ ಚಿತ್ರವಿದೆ. ನೋಡೋಣ.

*** ಕೇರ್ ಆಫ್ ಫುಟ್‌ಪಾತ್ 2' ಸಿನಿಮಾದ ಮೂಲಕ ಏನು ಹೇಳೋಕೆ ಹೊರಟಿದ್ದೀರಿ?**

ಆಗಲೇ ನಾನು ಹೇಳಿದಂತೆ ಇದರಲ್ಲಿ ಬಾಲಾಪರಾಧಿಗಳ ಬದುಕಿನ ಕತೆ ಇದೆ. ಅವರು ಯಾಕೆ ಈ ರೀತಿ ಆದರು? ಅವರನ್ನು ಈ ಸಮಾಜ ನೋಡಿಕೊಳ್ಳುವ ರೀತಿ ಹೇಗಿದೆ? ಬಾಲಾಪರಾಧಿಗಳಿಗೆ ಎಂಥ ಶಿಕ್ಷೆ ಕೊಡಬಹುದು? ಹೀಗೆ ಹಲವು ರೀತಿಯ ಚರ್ಚೆಗಳನ್ನು ಮಾಡಲಾಗಿದೆ. ಅಲ್ಲದೇ ಅವರ ಬದುಕು ಸರಿ ಹೋಗಲು ಏನು ಮಾಡಬೇಕು ಅನ್ನುವ ಅಂಶವನ್ನೂ ಸೇರಿಸಲಾಗಿದೆ. ಹೀಗಾಗಿ ನನ್ನ ಪಾಲಿಗೆ ಇದು ಕೂಡ ಅತ್ಯುತ್ತಮ ಸಿನಿಮಾ.


*** ಮುಂದಿನ ಪ್ರಾಜೆಕ್ಟ್ ಯಾವುದು? ಎಂಥ ಕತೆ ಆಯ್ಕೆ ಮಾಡಿಕೊಂಡಿದ್ದೀರಿ?**

ಬಹುಕೋಟಿ ವೆಚ್ಚದ ಸಿನಿಮಾ ಮಾಡುವ ಆಸೆಯಿದೆ. ಅಲ್ಲದೇ ದಕ್ಷಿಣ ಭಾರತಕ್ಕೆ ಪರಿಚಯ ಇರುವ ನಟನ ಜತೆ ಕೆಲಸ ಮಾಡುವ ತಯಾರಿ ಕೂಡ ನಡೆದಿದೆ. ಅಲ್ಲದೇ ಹಾಲಿವುಡ್‌ನ ಖ್ಯಾತ ನಟರೂ ಈ ಸಿನಿಮಾದಲ್ಲಿ ಇರುತ್ತಾರೆ. ಕತೆ ರೆಡಿ ಆಗಿದೆ. 'ಕೇರ್ ಆಫ್ ಫುಟ್‌ಪಾತ್' ಸಿನಿಮಾ ರಿಲೀಸ್ ನಂತರ ಈ ಕುರಿತು ಹೇಳುತ್ತೇನೆ. ■

ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಡಬ್ಬಲ್ ಗೇಮ್

ಸಂಘ ಪರಿವಾರದವರು ಮಾತುಮಾತಿಗೆ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲಿ, ಕ್ರೈಸ್ತರು ತಮಗೆ ಬೇಕಾದ ಕ್ರೈಸ್ತ ದೇಶಕ್ಕೆ ಹೋಗಲಿ ಎಂದು ಅರಚುತ್ತಾರೆ. ಇಂತಹ ಕುತ್ಸಿತ ವಿಕೃತ ಮಾತುಗಳನ್ನು ಹೇಳಿಸಲೆಂದೇ ಸಂಘಿಗಳು ಸಾಧ್ವಿ ಪ್ರಾಚಿ, ಆದಿತ್ಯನಾತ, ಸಾಕ್ಷಿ ಮಹಾರಾಜ್, ಗಿರಿರಾಜಸಿಂಗ್, ಮಹೇಶ್ ಶರ್ಮ, ಸೋಮ್ ಮುಂತಾದ ಬೊಗಳು-ಭಟರನ್ನು ಸಾಕಿ ಇಟ್ಟುಕೊಂಡಿರುವುದು. ಈಗ ಅಸ್ಸಾಮ್ ರಾಜ್ಯಪಾಲರಾಗಿರುವ ಉಡುಪಿ ಮೂಲದ ಪಿ.ಬಿ.ಆಚಾರ್ಯ ಹಾಗೂ ಪೇಜಾವರ ಶ್ರೀಗಳು, ಹರ್ಯಾಣ ಮತ್ತು ಉತ್ತರಾಂಚಲದ ಮುಖ್ಯಮಂತ್ರಿಗಳು ಬೊಗಳು ಬ್ರಿಗೇಡನ್ನು ಸೇರಿಕೊಂಡಿದ್ದಾರೆ. ಜತೆಗೆ ಇತರ ಅನೇಕ ಕಾವಿ ವೇಷಧಾರಿಗಳೂ ಸೇರಿದ್ದಾರೆ. ಇವರೆಲ್ಲಾ ತಮ್ಮ ಸ್ವಂತ ಬುದ್ಧಿಯಿಂದ ಮುಸ್ಲಿಮರಿಗೆ ಪಾಕಿಸ್ತಾನಕ್ಕೆ ಹೋಗಿ ಎಂದು ಹೇಳುತ್ತಿಲ್ಲ, ಇದೆಲ್ಲಾ ಆರ್‌ಎಸ್‌ಎಸ್‌ನವರ ಗುಪ್ತ ಆದೇಶದಂತೆ ವ್ಯವಸ್ಥಿತವಾಗಿ ಯಾರ್ಯಾರದೋ ಬಾಯಿಂದ ಹೇಳಿಸಿ ಕ್ರೈಸ್ತ ಮತ್ತು ಮುಸ್ಲಿಮರಲ್ಲಿ 'ಪರಕೀಯ ಪ್ರಜ್ಞೆ' ಬೇರೂರಿಸಲು ಮಾಡಲಾಗುತ್ತಿರುವ ಮಾನಸಿಕ ತಂತ್ರ. ಆದರೆ ಅದು ಉಲ್ಟಾ ಹೊಡೆದರೆ ಆ ಹೇಳಿಕೆ ಅವರವರ ವೈಯಕ್ತಿಕ ಅಭಿಪ್ರಾಯ. ಹಾಗಾಗಿ ಅವರ ಹೇಳಿಕೆಗೂ ಸಂಘಪರಿವಾರ ಅಥವಾ ಬಿಜೆಪಿ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ನುಣುಚಿಕೊಳ್ಳುವ ಹೇಳಿಕೆ ಹೊರಬೀಳುತ್ತದೆ.

ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಈ ಡಬ್ಬಲ್ ಗೇಮ್ ಎಲ್ಲಾ ಜನರಿಗೆ ಈಗ ಗೊತ್ತಾಗಿದೆ. ಈಚೆಗೆ ಒಬ್ಬ ಬಿಜೆಪಿ ಪಕ್ಷದ ನೇತಾರ ಬಾಲಿವುಡ್ ನಟ ಆಮಿರ್ ಖಾನ್‌ನಂತೆ ಡಾ.ಅಂಬೇಡ್ಕರರೂ ದೇಶ ಬಿಡಲು ಯೋಚಿಸಿದ್ದರು ಎಂದು ಅಪದ್ಧ ನುಡಿದಿದ್ದಕ್ಕೆ, ಕಾಂಗ್ರೆಸ್ ಪಕ್ಷದ ನೇತಾರ ಕನ್ನಡಿಗ ಮಲ್ಲಿಕಾರ್ಜುನ ಖರ್ಗೆಯವರು ಲೋಕಸಭೆಯೊಳಗೇನೇ ರೋಷದಿಂದ ಹೀಗೆ ಸರಿಯಾಗಿ



ಉತ್ತರ ಕೊಟ್ಟರು- "ಡಾ.ಅಂಬೇಡ್ಕರ್ ಮತ್ತು ನಾವು ದಲಿತರೇ. ಈ ದೇಶದ ನಿಜವಾದ ಮೂಲನಿವಾಸಿಗಳು, ನಮಗೆ ಈ ದೇಶ ಬಿಡುವ ಅಗತ್ಯವಿಲ್ಲ, ನೀವು ಆರ್ಯರೇ ಪರದೇಶದಿಂದ ಬಂದವರು ಹಾಗೂ ಮೋಸದಿಂದ ನಮ್ಮ ಜಮೀನು ಸಂಪತ್ತು ಅಪಹರಿಸಿ ನಿಮ್ಮ ವಿಚಿತ್ರ ಬೊಂಬೆಗಳನ್ನು ದೇವರೆಂದು ನಮ್ಮ ಕುತ್ತಿಗೆಗೆ ಕಟ್ಟಿ ನಿಮ್ಮ 33 ಕೋಟಿ ಮೌಢ್ಯದ ಗೂಢಾಣವನ್ನು ನಮ್ಮ ಮೇಲೆ ಗೋಮಾತೆಯೆಂದು ಹೇರಿ ನಮ್ಮನ್ನು ಸಾವಿರಾರು ವರ್ಷ ಶೋಷಿಸಿದ್ದು, ಈಗಲೂ ಅದೇ ನೆಪದಲ್ಲಿ ಸಮಾಜವನ್ನು ವಿಘಟಿಸುತ್ತಿರುವುದು!"

ಇನ್ನೊಂದು ಮುಖ್ಯ ವಿಷಯವೆಂದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ವಿದೇಶದಿಂದ ಬಂದ ಧರ್ಮಗಳಾಗಿರಬಹುದು. ಆದರೆ ಆ ಧರ್ಮಕ್ಕೆ ಹಿಂದಿನ ಒಂದು ಸಾವಿರ ವರ್ಷಗಳಿಂದ ಮತಾಂತರ ಹೊಂದಿದವರೆಲ್ಲಾ ಪ್ರಕೃತಿಯ ಆರಾಧಕರಾಗಿದ್ದ ಇಲ್ಲಿಯ ಮೂಲನಿವಾಸಿ ದ್ರಾವಿಡ ಜನಾಂಗದವರು ಅರ್ಥಾತ್ ಹಿಂದುಳಿದ ಹಾಗೂ ತಳವರ್ಗದ ಜನರೇ ಆಗಿರುವರು. ಹಾಗಾಗಿ ತಳವರ್ಗದ ದ್ರಾವಿಡ ಮೂಲದವರಿಂದಲೇ ತುಂಬಿರುವ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳವರಿಗೆ ಭಾರತದಲ್ಲಿರಲು ಆರ್ಯ ಮೂಲದ ವೈದಿಕ ಜನಾಂಗದವರಿಗಿಂತ ಹೆಚ್ಚು ಹಕ್ಕಿದೆ. ನಿಜವಾಗಿ ಭಾರತ ಬಿಟ್ಟುಹೋಗಬೇಕಾಗಿರುವುದು ಆರ್ಯ ಮೂಲದ ವೈದಿಕರು, ವೈಶ್ಯರು, ಜೈನರು ಮತ್ತು ಹಲವು ಉತ್ತರ ಭಾರತೀಯ ಮೇಲ್ಜಾತಿಗಳವರು. ಅದರಲ್ಲಿ ಗವರ್ನರ್ ಪಿ.ಬಿ.ಆಚಾರ್ಯ, ಪೇಜಾವರ ಸ್ವಾಮೀಜಿ, ಆದಿತ್ಯನಾತ, ಸಾಕ್ಷಿ ಮಹಾರಾಜ್, ಸಾಧ್ವಿ ಪ್ರಾಚಿ, ಗಿರಿರಾಜ ಸಿಂಗ್, ಮಹೇಶ್ ಶರ್ಮ ಮುಂತಾದ ಎಡಬಿಡಂಗಿ ಬಾಯಿಹರುಕರು ಹಾಗೂ ಆರ್‌ಎಸ್‌ಎಸ್ ಮತ್ತು ಬಿಜೆಪಿ ಪಕ್ಷದ ಮೇಲ್ಜಾತಿಯವರು ಸೇರಿರುವರು. ಇವರೆಲ್ಲಾ ಆದಷ್ಟು ಬೇಗ ದೇಶ ಬಿಟ್ಟುಹೋದರೆ ಭಾರತ ದೇಶದ ದ್ರಾವಿಡ ಮೂಲದ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರು ಸುಖ ಸೌಹಾರ್ದತೆಯಿಂದ ಖಂಡಿತಾ ಇರಬಹುದು.

ಭಾರತೀಯರಲ್ಲಿ ದ್ರಾವಿಡ- ಆರ್ಯ ಭೇದವಿಲ್ಲ ಅದು ಬ್ರಿಟಿಷರು ಮಾಡಿದ ಒಡೆದು ಆಳುವ ಕುತಂತ್ರ ಎಂಬ ಕೇಸರಿ ಪಡೆಗಳ ಸುಳ್ಳು ಸಮಜಾಯಿಷಿ ನಮಗೆ ಬೇಡ. ಭಾರತದಲ್ಲಿ ದ್ರಾವಿಡ -ಆರ್ಯ ಜನಾಂಗ ಭೇದ ಇರುವುದು ಶತಃಸಿದ್ಧ. ಆರ್‌ಎಸ್‌ಎಸ್‌ನ ಬೆನ್ನೆಲುಬಾಗಿರುವ ಗಾಂಧಿ ಹಂತಕ ನಾಥುರಾಮ್ ಗೋಡ್ಸೆಯನ್ನು ಕೊಟ್ಟ ಜನಾಂಗ ಅಥವಾ ಕರ್ನಾಟಕಕ್ಕೆ ಕದಂಬರ ಕಾಲದಲ್ಲಿ ಅಹಿಚ್ಛತದಿಂದ ವಲಸೆ ಬಂದವರು ಮತ್ತು ಚಂದ್ರಗುಪ್ತ ಮೌರ್ಯನೊಟ್ಟಿಗೆ ಶ್ರವಣಬೆಳಗೊಳಕ್ಕೆ ವಲಸೆ ಬಂದವರೂ ಆರ್ಯರೇ. ಇವರೆಲ್ಲ ಮಧ್ಯ ಯುರೋಪಿನಲ್ಲಿರುವ ತಮ್ಮ ಮೂಲ ನಾಡಿಗೆ ಮರಳಿಹೋದರೆ ದ್ರಾವಿಡರೆಲ್ಲರಿಗೂ ಹಿತ.

- ವೀರಪ್ಪ ಡಿ.ಎನ್, ಮಡಿಕೇರಿ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 16-12-2015 RNI No. KAR




ಸಹೋದರರ ಜೋಡಿ

ಪುನೀತ್ ಮತ್ತು ಶಿವರಾಜ್‌ಕುಮಾರ್ ಒಂದೇ ಸಿನಿಮಾದಲ್ಲಿ ನಟಿಸುತ್ತಿದ್ದಾರೆ ಎಂದು ಸುದ್ದಿ ಆಗಿತ್ತು ಅಲ್ಲದೇ ಸುದೀಪ್ ಜತೆಯೂ ಶಿವಣ್ಣ ನಟಿಸುವುದಾಗಿಯೂ ಪ್ರೇಮ್ ಹೇಳಿದ್ದರು. ಇದು ಅಭಿಮಾನಿಗಳ ಆಸೆಯೂ ಆಗಿತ್ತು. ಆ ಆಸೆಯನ್ನು ಶಿವರಾಜ್‌ಕುಮಾರ್ ಈಡೇರಿಸಿದ್ದಾರೆ. ಅವರಿಬ್ಬರ ಜತೆ ನಟಿಸುವುದಾಗಿ ಶಿವಣ್ಣ ಹೇಳಿದ್ದಾರೆ. ಪುನೀತ್ ಚಿತ್ರವನ್ನು ಸಾಹಸ ನಿರ್ದೇಶಕ ರವಿವರ್ಮ ನಿರ್ದೇಶನ ಮಾಡಿದರೆ, ಸುದೀಪ್ ಜತೆಗಿನ ಚಿತ್ರಕ್ಕೆ ಜೋಗಿ ಪ್ರೇಮ್ ಆಕ್ಷನ್ ಕಟ್ ಹೇಳಲಿದ್ದಾರೆ.

ಇತ್ತೀಚೆಗಷ್ಟೇ ನಡೆದ ಬೆಳ್ಳಿಹೆಜ್ಜೆ ಸಮಾರಂಭದಲ್ಲಿ ಈ ವಿಷಯವನ್ನು ಶಿವಣ್ಣ ಅಧಿಕೃತಗೊಳಿಸಿದರು. ಅಲ್ಲದೇ ಹದಿನೈದಕ್ಕೂ ಹೆಚ್ಚು ಚಿತ್ರಗಳಿಗೆ ಸಹಿ ಮಾಡಿರುವ ವಿಷಯವನ್ನೂ ಬಹಿರಂಗಪಡಿಸಿದರು. ಸದ್ಯ ಇವರು 'ಸಂತೆಯಲ್ಲಿ ನಿಂತ ಕಬೀರ' ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ. ಅಲ್ಲದೇ ಇದೇ ತಿಂಗಳು ಇವರ 'ಶಿವಲಿಂಗ'. ಚಿತ್ರವು ಬಿಡುಗಡೆ ಆಗುತ್ತಿದೆ.

ವಿರಾಟ ದರ್ಶನ್




ಮೂರ್‍ನಾಲ್ಕು ವರ್ಷಗಳಿಂದ ಡಬ್ಬಾದಲ್ಲೇ ಕೊಳೆಯುತ್ತಿದ್ದ 'ವಿರಾಟ್' ಚಿತ್ರಕ್ಕೆ ಮರುಜೀವ ಬಂದಿರುವ ಸುದ್ದಿ ಕೇಳಿಬಂದಿತ್ತು, ಈಗದು ನಿಜವಾಗಿದೆ. 'ಜಗ್ಗು ದಾದ' ಶೂಟಿಂಗ್ ನಡುವೆಯೇ 'ವಿರಾಟ್' ಸಿನಿಮಾದ ಶೂಟಿಂಗ್‌ನಲ್ಲೂ ಪಾಲ್ಗೊಳ್ಳುತ್ತಿದ್ದಾರೆ ದರ್ಶನ್. ಅಲ್ಲದೇ ಡಬ್ಬಿಂಗ್ ಕಾರ್ಯದಲ್ಲೂ ತೊಡಗಿದ್ದಾರೆ.

ಹಣಕಾಸಿನ ತೊಂದರೆಯಿಂದಾಗಿ ಸಿನಿಮಾದ ಶೂಟಿಂಗ್ ನಿಂತಿತ್ತು, ಅಲ್ಲದೇ ದುಡ್ಡಿನ ವಿಚಾರವಾಗಿಯೇ ದರ್ಶನ್ ಆನಂತರ ಚಿತ್ರೀಕರಣದಲ್ಲಿ ಪಾಲ್ಗೊಂಡಿರಲಿಲ್ಲ. ಈಗ ನಿರ್ಮಾಪಕರ ಮತ್ತು ನಟನ ನಡುವಿನ ಮುನಿಸು ಸರಿ ಹೋಗಿದೆ. ಹೀಗಾಗಿ 'ವಿರಾಟ್'ನನ್ನು ತೆರೆಗೆ ತರಲು ಚಿತ್ರತಂಡ ಸಿದ್ಧತೆ ಮಾಡಿಕೊಳ್ಳುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಜನವರಿ ಎರಡನೇ ವಾರದಲ್ಲಿ ಚಿತ್ರ ಬಿಡುಗಡೆ ಆಗಲಿದೆ.

ದಿಗಿಲುಗೊಂಡ ದಿಗಂತ್

ದಿಗಂತ್ ದಿಗಿಲುಗೊಂಡಿದ್ದಾರೆ. ಕೈಯಲ್ಲಿ ಸಿನಿಮಾ ಇರದ ಸಂಕಟ ಒಂದು ಕಡೆಯಾದರೆ, ಅವರ ಚಿತ್ರಗಳು ಸಾಲಾಗಿ ಬಿಡುಗಡೆ ಆಗುತ್ತಿರುವ ನೋವು ಮತ್ತೊಂದು ಕಡೆ. ಈ ವಾರ ಇವರ ನಟನೆಯ 'ಮಿಂಚಾಗಿ ನೀನು ಬರಲು' ಚಿತ್ರ ಬಿಡುಗಡೆ ಆಗುತ್ತಿದೆ. ಇದು ಎರಡು ವರ್ಷಗಳ ಹಿಂದೆ ನಿರ್ಮಾಣಗೊಂಡ ಸಿನಿಮಾ. ಚಿತ್ರವನ್ನು ಜಯಣ್ಣ ವಿತರಿಸುತ್ತಿದ್ದಾರೆ. ಅಲ್ಲದೇ ಮುಂದಿನ ವಾರಕ್ಕೆ ದಿಗಂತ್ ನಟನೆಯ ಮತ್ತೊಂದು ಸಿನಿಮಾ ಕೂಡ ರಿಲೀಸ್ ಆಗುತ್ತಿದೆ. 'ಶಾರ್ಪ್ ಶೂಟರ್' ಹೆಸರಿನ ಈ ಚಿತ್ರವನ್ನು ದರ್ಶನ್ ತೂಗುದೀಪ ಸಂಸ್ಥೆಯು ವಿತರಿಸುತ್ತಿದೆ. ಈ ಎರಡು ವಿತರಣಾ ಸಂಸ್ಥೆಯ ಮಧ್ಯೆ ಪೈಪೋಟಿ ಇದೆ. ಹೀಗಾಗಿ ದಿಗಂತ್‌ನನ್ನು ಹಣಿಯುವುದಕ್ಕಾಗಿಯೇ ಹೀಗೆಲ್ಲ ಮಾಡಲಾಗಿದೆ ಅನ್ನುವ ಮಾತೂ ಕೇಳಿಬರುತ್ತಿದೆ. ಅಲ್ಲದೇ ಜನವರಿ ಮೊದಲನೆಯ ವಾರ ದಿಗಂತ್‌ರ ಮತ್ತೊಂದು ಚಿತ್ರ 'ಪರಪಂಚ' ರಿಲೀಸ್ ಆಗುತ್ತಿದ್ದು ಯಾವ ಚಿತ್ರ ಇವರನ್ನು ಕೈ ಹಿಡಿಯುತ್ತದೆಯೋ ನೋಡಬೇಕು. ಆದರೆ, ಯಾರದೋ ಆಟಕ್ಕೆ ದಿಗಂತ್ ...ಲಿ ಆಗುತ್ತಿರುವುದು ಸುಳ್ಳಲ್ಲ.




ನೋ ಕಾಲ್ ಶೀಟ್ ಪ್ಲೀಸ್

ಕನ್ನಡದ ಬಿಜಿ ನಟಿ ಯಾರು ಅನ್ನುವ ಪ್ರಶ್ನೆಗೆ ಸದ್ಯ ಉತ್ತರ ಸಿಕ್ಕಿದೆ. ಇನ್ನೂ ಎರಡು ವರ್ಷಗಳ ಕಾಲ ಅಮೂಲ್ಯ ಅವರ ಕಾಲ್‌ಶೀಟ್ ಇಲ್ಲವಂತೆ. ಹೀಗಾಗಿ ಸದ್ಯ ನಿರ್ದೇಶಕರು ಕತೆ ಹೇಳಿದರೂ, ಅವರ ಕಾಲ್‌ಶೀಟ್ ಸಿಗುವುದು ಮಾತ್ರ ಎರಡು ವರ್ಷಗಳ ನಂತರವಂತೆ.

ಸದ್ಯ ಇವರು ಕವಿರಾಜ್ ನಿರ್ದೇಶನದ 'ಮದುವೆ ಮಮತೆಯ ಕರೆಯೋಲೆ' ಮತ್ತು 'ಕೃಷ್ಣ ರುಕ್ಕು' ಸಿನಿಮಾದ ಶೂಟಿಂಗ್ ಮುಗಿಸಿದ್ದಾರೆ. ಇವೆರಡೂ ಮುಗಿದ ನಂತರ ಮುಂದಿನ ಸಿನಿಮಾ ಯಾವುದು ಅಂತ ನಿಕ್ಕಿ ಆಗಿಲ್ಲ. ಆದರೂ ಎರಡು ವರ್ಷಗಳ ಕಾಲ್‌ಶೀಟ್ ಇಲ್ಲ ಅಂತ ಹೇಳುತ್ತಿರುವುದು ಕೆಲವು ನಿರ್ಮಾಪಕರಿಗೆ ಕೋಪ ತರಿಸಿದೆ. ಸಂಭಾವನೆ ಹೆಚ್ಚಿಸಿಕೊಳ್ಳಲು ಅವರು ಈ ರೀತಿ ಮಾತಾಡುತ್ತಿದ್ದಾರೆ ಅನ್ನುವ ಮಾತೂ ಕೇಳಿಬರುತ್ತಿದೆ.



ಮತ್ತೆ ಬರ್ತಿದ್ದಾನಾ ಜೋಗಯ್ಯ



ಪ್ರೇಮ್ ನಿರ್ದೇಶನದಲ್ಲಿ 'ಜೋಗಿ', 'ಜೋಗಯ್ಯ' ಸಿನಿಮಾ ಬಂದಾಗಿದೆ. ಈಗ ಮತ್ತೊಂದು 'ಜೋಗಿ' ಹೆಸರಿನ ಚಿತ್ರ ಕನ್ನಡದಲ್ಲಿ ಮೂಡಿಬರುತ್ತಿದೆ. ಚಿತ್ರಕ್ಕೆ 'ಜೋಗಿಗುಡ್ಡ' ಎಂದು ಹೆಸರಿಡಲಾಗಿದೆ. 'ಮುನಿಯಾ' ನಿರ್ದೇಶನದ ನಂತರ ನಿರ್ದೇಶಕ ನಾಗಚಂದ್ರ ಈ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಧರ್ಮ ಕೀರ್ತಿರಾಜ್ ಸಿನಿಮಾದ ಹೀರೋ.


ಇದು 'ಜೋಗಯ್ಯ'ನ ಮುಂದುವರೆದ ಭಾಗ ಎಂದು ಹೇಳಲಾಗುತ್ತಿದ್ದು ನಿರ್ದೇಶಕರು ಮಾತ್ರ ಈ ಕುರಿತು ಏನೂ ಹೇಳುತ್ತಿಲ್ಲ, ಸದ್ದಿಲ್ಲದೇ ಫೋಟೋ ಶೂಟ್‌ನಲ್ಲಿ ತೊಡಗಿದ್ದಾರೆ.

ಧರ್ಮ ಕೀರ್ತಿರಾಜ್ ಈವರೆಗೂ ಲವರ್‌ಬಾಯ್ ಆಗಿಯೇ ಕಾಣಿಸಿಕೊಂಡಿದ್ದಾರೆ. ಹೀಗಾಗಿ ಜೋಗಿಯ ಕತೆಯು ಇಲ್ಲಿ ... ಅನ್ನುವ ಮಾತೂ ಇದೆ. ಮುಹೂರ್ತದ ದಿನವೇ ಇದಕ್ಕೆ ...

ಜೆಸ್ಸಿಗಿಂತ ಮೊದಲು ನಟರಾಜ

ಪವನ್ ಒಡೆಯರ್ ನಿರ್ದೇಶನದಲ್ಲಿ ಮೂಡಿಬರುತ್ತಿರು... ಸರ್ವೀಸ್' ಸಿನಿಮಾದ ಶೂಟಿಂಗ್ ಕಂಪ್ಲೀಟ್ ಆಗಿದೆ. ಮೊನ್ನೆ ... ಶುರು ಮಾಡಿದ ನಿರ್ದೇಶಕರು ಇಷ್ಟು ಬೇಗ ಮುಗಿಸಿದರಾ ... ನಿಮಗಾಗಬಹುದು. ಬೇಗ ಚಿತ್ರೀಕರಣ ಮಾಡಲು ಕಾರಣವಿ... ಪವನ್ ನಿರ್ದೇಶಿಸಿದ 'ಜೆಸ್ಸಿ' ಚಿತ್ರವು ಅರ್ಧಕ್ಕೆ ನಿಂತಿದೆ. ಹೀಗಾಗಿ ... ಮೊದಲು ಬಿಡುಗಡೆ ಮಾಡುವ ಪ್ಲಾನ್ ನಿರ್ಮಾಪಕರದ್ದು. ... ಕುಮಾರ್ ನಿರ್ಮಾಣ ಮಾಡುತ್ತಿದ್ದಾರೆ.

ಶರಣ್ ಚಿತ್ರದ ನಾಯಕ. ಮಯೂರಿ ನಾಯಕಿ. ಇದೇ ... ಈ ಜೋಡಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದೆ. ಸಖತ್ ... ಅಳುಮುಂಜಿ ಪಾತ್ರದ ಮೂಲಕವೇ ಫೇಮಸ್ ಆಗಿರು... ಇಬ್ಬರೂ ಈ ಸಿನಿಮಾದಲ್ಲಿ ವಿಭಿನ್ನ ಪಾತ್ರ ಮಾಡಿದ್ದಾರಂ... ಕೋಮಲ್‌ಗೆ ಹೊಸ ರೀತಿಯ ಪಾತ್ರ ನೀಡಿದ್ದ ಪವನ್ ... ಎಂಥ ಪಾತ್ರ ಸೃಷ್ಟಿಸಿದ್ದಾರೆ ಅನ್ನುವ ಕುತೂಹಲವೂ ಇದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676...
Fax : 26604536, E-mail :lankesh70@rediffmail.com